


epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237

ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ

KARNATAKA MALLA, MUMBAI

ಸಂಪುಟ : 35 ಸಂಚಿಕೆ : 44 ಬುಧವಾರ 18-03-2026 ಬೆಲೆ : ₹ 6 ಪುಟಗಳು - 12

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ

ಶ್ರೀ ಮಹಾಲಕ್ಷ್ಮೀ ಜ್ಯೋತಿಷಾಲಯ
ಕಲ್ಯಾಣ್‌ನಲ್ಲಿ ಖಾಯಂ ಆಗಿ ಇದ್ದಾರೆ
ಗುರೂಜಿ : ಪಂಡಿತ ವಾಸುದೇವ ಗುರೂಜೀ
ಒಮ್ಮೆ ಭೇಟಿ ಕೊಡಿ, ಇದು ನಿಮ್ಮ ಕೊನೆಯ ಪ್ರಯತ್ನ
ನೌಕರಿ, ಮದುವೆ, ಸಂತಾನ, ಹೋಟೆಲ್, ಅಂಗಡಿಯಲ್ಲಿ ಅಡಚಣೆ, ಸಾಲಾಭಾದೆ, ಗಂಡ ಹೆಂಡತಿ ಜಗಳ, ಆರೋಗ್ಯ ಸಮಸ್ಯೆ, ಡೈವೋರ್ಸ್ ಪ್ರಾಬ್ಲಮ್, ಪ್ರೀತಿಯಲ್ಲಿ ಮೋಸ ಸ್ತ್ರೀ ಪುರುಷ ವಶೀಕರಣ
ಇನ್ನೂ ಯಾವುದೇ ಕಠಿಣ ಸಮಸ್ಯೆಗಳಿಗೆ 9 ದಿನದಲ್ಲಿ ಪರಿಹಾರ
ಸಂಪರ್ಕ - 9922771788
ವಿಳಾಸ - ಅಂಗಡಿ ನಂ. 9, ಚಂದ್ರಭೂಷಣ ಪ್ಲಾಜಾ, ಬಾಟಾ ಶೋರೂಮ್ ಹಿಂದೆ ಸದಾನಂದ ಚೌಕ, ಕಲ್ಯಾಣ್ (ಪ)
ಸಮಯ - ಬೆಳಿಗ್ಗೆ 10.30ರಿಂದ ಸಂಜೆ 7.00

ತುಳಿದು ಬದುಕುವುದಕ್ಕಿಂತ ತಿಳಿದು ಬದುಕುವುದು ಮುಖ್ಯ. ತುಳಿದು ಬದುಕಿದವರು ಬಹುಬೇಗ ಅಳಿಯುತ್ತಾರೆ. ತಿಳಿದು ಬದುಕಿದವರು ಅಳಿದ ಮೇಲೂ ಉಳಿಯುತ್ತಾರೆ.

3 ಕಾಬೂಲ್ ಡ್ರಗ್ಸ್ ರೋಗಿಗಳ ಚಿಕಿತ್ಸಾ ಕೇಂದ್ರದ ಮೇಲೆ ಪಾಕಿಸ್ತಾನದ ಬಾಂಬು ದಾಳಿ; 400 ಬಲಿ, 250 ಗಾಯ

ಸುರಕ್ಷಿತ ನಗರಗಳಿಗಾಗಿ ಪರಿಣಾಮಕಾರಿ ಸಿಸಿಟಿವಿ ಭದ್ರತಾ ಕವಚವನ್ನು ರಚಿಸಬೇಕು ; ಫಡ್ನವೀಸ್ 7

ಜೀವನದಲ್ಲಿ ಅಹಂಕಾರ ಅನ್ನೋದು ಇರಲೇಬೇಕು. ಬೇರೆಯವರನ್ನು ನೋಯಿಸೋದಕ್ಕಲ್ಲ. ನಮ್ಮ ಸ್ವಾಭಿಮಾನವನ್ನು ಪರೀಕ್ಷೆ ಮಾಡುವವರಿಗೆ ಪಾಠ ಕಲಿಸಲು.

# ಇಸ್ರೇಲ್‌ನಿಂದ ಇರಾನ್‌ನ ಸೇನಾನೆಲೆಗಳಿಗೆ ಕ್ಷಿಪಣಿ ದಾಳಿ

## ಉನ್ನತ ಭದ್ರತಾ ಅಧಿಕಾರಿಗಳಿಬ್ಬರ ಹತ್ಯೆ, ಇರಾನ್‌ನಿಂದ ಮುಂದುವರೆದ ಪ್ರತಿದಾಳಿ, ಯುಎಇ ವಾಯುಪ್ರದೇಶ ಬಂದ್

ದುಬೈ, ಮಾ.17 - ಇಸ್ರೇಲ್ - ಅಮೇರಿಕನ್ ಪಡೆಗಳು ಇರಾನಿನ ಪ್ರಮುಖ ಸೇನಾನೆಲೆಗಳ ಮೇಲೆ ಭಾರೀ ಕ್ಷಿಪಣಿ ದಾಳಿ ನಡೆಸಿದ್ದು, ಇರಾನ್ ತನ್ನ ಸರ್ವೋಚ್ಚ ನಾಯಕನ ಹತ್ಯೆ ಮತ್ತು ವ್ಯಾಪಕಗೊಳ್ಳುತ್ತಿರುವ ಯುದ್ಧದಿಂದ ತತ್ತರಿಸುತ್ತಿರುವಾಗ ದೇಶವನ್ನು ನಡೆಸುತ್ತಿದ್ದಾರೆಂದು ನಂಬಲಾದ ಉನ್ನತ ಭದ್ರತಾ ಅಧಿಕಾರಿ ಅಲಿ ಲಾರಿಜಾನಿಯನ್ನು ಮಂಗಳವಾರ ರಾತ್ರಿಯ ದಾಳಿಯಲ್ಲಿ ಕೊಂದಿರುವುದಾಗಿ ಇಸ್ರೇಲ್ ಹೇಳಿಕೊಂಡಿದೆ.



ಶಿಯಾ ದೇವಪ್ರಭುತ್ವದ ವಿರುದ್ಧದ ಸಾಮೂಹಿಕ ಪ್ರತಿಭಟನೆಗಳ ಅಲೆಗಳನ್ನು ಹತ್ತಿಕ್ಕಿದ್ದ ಪ್ರಬಲ ಆಂತರಿಕ ಭದ್ರತಾ ಸೇವೆಯನ್ನು ಮುನ್ನಡೆಸಿದ ಇರಾನಿನ ಜನರಲ್ ಘೋಲಮ್ ರೆಜಾ ಸೊಲೈಮಾನಿಯನ್ನು ಕೂಡ ಕೊಂದಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ.

ಇರಾನ್ ಅವರ ಸಾವುಗಳನ್ನು ಇನ್ನೂ ದೃಢಪಡಿಸಿಲ್ಲ ಅಥವಾ ನಿರಾಕರಿಸಿಲ್ಲ. ಯುದ್ಧವನ್ನು ಆರಂಭಿಸಿದ ಅಮೇರಿಕ ಮತ್ತು ಇಸ್ರೇಲಿಯ ಅನಿರೀಕ್ಷಿತ ದಾಳಿಯಲ್ಲಿ ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ಮತ್ತು ಇತರ ಉನ್ನತ ಭದ್ರತಾ ಅಧಿಕಾರಿಗಳು ಈಗಾಗಲೇ ಕೊಲ್ಲಲ್ಪಟ್ಟಿರುವರು. ಖಮೇನಿಯ ಸ್ಥಾನಕ್ಕೆ ನೇಮಕಗೊಂಡ ಮೊಜ್ತಬಾ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ ಮತ್ತು ಅವರು ದಾಳಿಯಲ್ಲಿ ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ಶಂಕಿಸಿದೆ.


ಇರಾನ್‌ನ ಕ್ರಾಂತಿಕಾರಿ ಗಾರ್ಡ್ ಇಸ್ರೇಲ್ ಮತ್ತು ಅರಬ್ ಕೊಲ್ಲಿ ರಾಷ್ಟ್ರಗಳ ಮೇಲೆ ಕ್ಷಿಪಣಿಗಳನ್ನು ಹಾರಿಸುತ್ತಲೇ ಇರುವುದರಿಂದ, ಉನ್ನತ ನಾಯಕರ ಹತ್ಯೆಯು ಇಲ್ಲಿಯವರೆಗೆ ಯುದ್ಧದ ಮೇಲೆ ಕಡಿಮೆ ಪರಿಣಾಮ ಬೀರಿದೆ. ಇರಾನ್ ಹಾರ್ಮುಜ್ ಜಲಸಂಧಿಯನ್ನು ಕೂಡ ಪರಿಣಾಮಕಾರಿಯಾಗಿ ಮುಚ್ಚಿದೆ. ಲಾರಿಜಾನಿ ಇರಾನ್‌ನ ಅತ್ಯಂತ ಪ್ರಸಿದ್ಧ ರಾಜಕೀಯ ಕುಟುಂಬವೊಂದಕ್ಕೆ ಸೇರಿದವರು. ಆತನ ಒಬ್ಬ ಸಹೋದರ ಸಾಡೆಕ್ ಇರಾನ್‌ನ ನ್ಯಾಯಾಂಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರೆ, ಇನ್ನೊಬ್ಬ ಸಹೋದರ ಮೊಹಮ್ಮದ್ ಜಾವಾದ್, ವಿದೇಶಾಂಗ ವ್ಯವಹಾರಗಳ ಬಗ್ಗೆ ದಿವಂಗತ ಖಮೇನಿಗೆ ನಿಕಟವಾಗಿ ಸಲಹೆ ನೀಡಿದ ಹಿರಿಯ ರಾಜತಾಂತ್ರಿಕರಾಗಿದ್ದರು.

ಲಾರಿಜಾನಿ ಇರಾನ್‌ನ ದೇವಪ್ರಭುತ್ವದೊಳಗೆ ಸಂಪ್ರದಾಯವಾದಿ ಶಕ್ತಿಯಾಗಿದ್ದು, ವರ್ಷಗಳಿಂದಲೂ ಹೆಚ್ಚು ಕಠಿಣ ಬೆದರಿಕೆಗಳನ್ನು ನೀಡುತ್ತಿದ್ದರು. 1990ರ ದಶಕದಲ್ಲಿ ಅವರು ಇರಾನ್‌ನ ಸಂಸ್ಕೃತಿ ಸಚಿವರಾಗಿ ಸೇವೆ ಸಲ್ಲಿಸಿ ಸೆನ್ಸಾರ್‌ಶಿಪ್‌ನ್ನು ಬಿಗಿಗೊಳಿಸಿದರು. ಅವರು 2008 ರಿಂದ 2020 ರವರೆಗೆ ಸಂಸತ್ತಿನ ಸ್ಪೀಕರ್ ಆಗಿ ಮತ್ತು ಇತ್ತೀಚೆಗೆ ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು.

7ನೇ ಪುಟಕ್ಕೆ

# ಎರಡನೇ ಎಲ್‌ಪಿಜಿ ಟ್ಯಾಂಕರ್ ಯುದ್ಧ ವಲಯದಿಂದ ಸುರಕ್ಷಿತವಾಗಿ ಭಾರತಕ್ಕೆ

ಹೊಸದಿಲ್ಲಿ, ಮಾ.17 - ಯುದ್ಧಪೀಡಿತ ಹಾರ್ಮುಜ್ ಜಲಸಂಧಿಯಿಂದ ಸುರಕ್ಷಿತವಾಗಿ ಪ್ರಯಾಣಿಸಿದ ಬಳಿಕ ಭಾರತೀಯ ಧ್ವಜವನ್ನು ಹೊಂದಿರುವ ಎರಡನೇ ಎಲ್‌ಪಿಜಿ ಟ್ಯಾಂಕರ್ ಮಂಗಳವಾರ ಮುಂಜಾನೆ ದೇಶವನ್ನು ತಲುಪಿದ್ದು, ಸಂಘರ್ಷಪೀಡಿತ ವಲಯದಲ್ಲಿ ಇನ್ನೂ ಸಿಲುಕಿರುವ ಉಳಿದ 22 ಭಾರತೀಯ ಹಡಗುಗಳ ಸುರಕ್ಷಿತ ಮಾರ್ಗವನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಗಳು ನಡೆಯುತ್ತಿವೆ.




ಎಲ್‌ಪಿಜಿ ಟ್ಯಾಂಕರ್ ನಂದಾದೇವಿ ಇಂದು ಬೆಳಗಿನ ಜಾವ 2.30 ರ ಸುಮಾರಿಗೆ ಗುಜರಾತ್‌ನ ಕಾಂಡ್ಲಾ ಬಂದರನ್ನು ತಲುಪಿದೆ ಎಂದು ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಹೇಳಿದರು.

ಸೋಮವಾರ, ಮೊದಲ ಹಡಗು ಶಿವಾಲಿಕ್ ಗುಜರಾತ್‌ನ ಮುಂದ್ರಾ ಬಂದರನ್ನು ತಲುಪಿತು.

## ಮತ್ತೆ 22 ಹಡಗುಗಳಿಗಾಗಿ ಮುಂದುವರೆದ ಪ್ರಯತ್ನ

ಎರಡು ಹಡಗುಗಳು ಸುಮಾರು 92,712 ಟನ್ ಎಲ್‌ಪಿಜಿಯನ್ನು ಸಾಗಿಸುತ್ತಿವೆ. ಇದು ದೇಶದಲ್ಲಿ ಅಡುಗೆ ಅನಿಲದ ಒಂದು ದಿನದ ಅವಶ್ಯಕತೆಗೆ ಸಮನಾಗಿರುತ್ತದೆ.

ಪರ್ಷಿಯನ್ ಕೊಲ್ಲಿ ಪ್ರದೇಶದಲ್ಲಿರುವ ಎಲ್ಲಾ ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಮತ್ತು ಕಳೆದ 24 ಗಂಟೆಗಳಲ್ಲಿ ಭಾರತೀಯ ಹಡಗುಗಳನ್ನು ಒಳಗೊಂಡ ಯಾವುದೇ ಸಾಗಣೆ ಘಟನೆಗಳು ವರದಿಯಾಗಿಲ್ಲ ಎಂದು ಸಿನ್ಹಾ ಹೇಳಿದರು.

ಈ ಎರಡು ಎಲ್‌ಪಿಜಿ ವಾಹಕಗಳು ಮಾ.13 ರಂದು ತಮ್ಮ ಪ್ರಯಾಣವನ್ನು ಆರಂಭಿಸಿ ಮಾ.14ರ ಆರಂಭದಲ್ಲಿ ಹಾರ್ಮುಜ್ ಜಲಸಂಧಿಯನ್ನು ದಾಟಿದವು.

ಇದು ಯುದ್ಧ ವಲಯದ ಮೂಲಕ ಸುರಕ್ಷಿತವಾಗಿ ಸಾಗಿದ ಭಾರತೀಯ ಧ್ವಜ ಹೊಂದಿರುವ ಹಡಗುಗಳು ಅಥವಾ ಹಡಗುಗಳ ಸಂಖ್ಯೆಯನ್ನು ನಾಲ್ಕಕ್ಕೆ ಏರಿಕೆ ಮಾಡಿದೆ. ಪ್ರಸ್ತುತ 611 ನಾವಿಕರನ್ನು ಹೊತ್ತ 22 ಭಾರತೀಯ ಧ್ವಜ ಹೊಂದಿರುವ ಹಡಗುಗಳು ಪಶ್ಚಿಮ ಕೊಲ್ಲಿಯಲ್ಲಿ ಉಳಿದಿವೆ, ಹಡಗು ಮಾಲೀಕರು, ಏಜೆನ್ಸಿಗಳು ಮತ್ತು ಭಾರತೀಯ ಕಾರ್ಯಾಚರಣೆಗಳೊಂದಿಗೆ ಸಮನ್ವಯದೊಂದಿಗೆ ಕಾರ್ಯಾಚರಣೆಗಳನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಿದೆ ಎಂದು ಅವರು ಹೇಳಿದರು.

7ನೇ ಪುಟಕ್ಕೆ






## ಶಿವಾಯ ಫೌಂಡೇಶನ್ ಮುಂಬಯಿ ಇದರ ಎಂಟನೇ ವಾರ್ಷಿಕೋತ್ಸವ; 'ಶಿವಾಯ ಪ್ರೇರಣಾ' ಪ್ರಶಸ್ತಿ ಪ್ರದಾನ ಮತ್ತು ಸಾಧಕರಿಗೆ ಸನ್ಮಾನದ ಸಮಾರೋಪ ಸಮಾರಂಭ

# ಮಾನವೀಯತೆಯಿಂದ ಶಿವಾಯ ಫೌಂಡೇಶನ್ ಮಾಡುತ್ತಿರುವ ದಾನ-ಧರ್ಮದ ಕಾರ್ಯಕ್ಕೆ ನಾವೆಲ್ಲ ಜೊತೆಯಾಗೋಣ - ಸುರೇಶ್ ಜಿ. ಶೆಟ್ಟಿ



ಧರ್ಮದರ್ಶಿ ಅಣ್ಣಿ ಸಿ. ಶೆಟ್ಟಿಯವರಿಗೆ 'ಶಿವಾಯ ಪ್ರೇರಣಾ' ಪ್ರಶಸ್ತಿ ಪ್ರದಾನ.



ಸುಬ್ಬಯ್ಯ ವಿ. ಶೆಟ್ಟಿಯವರಿಗೆ ಸನ್ಮಾನ.



ಸಿಎ ಸುರೇಂದ್ರ ಶೆಟ್ಟಿ ದಂಪತಿಗೆ ಸನ್ಮಾನ.



ಕೃಷ್ಣಾನಂದ ಶೆಟ್ಟಿಗಾರ್ ದಂಪತಿಗೆ ಸನ್ಮಾನ.



ಶ್ಯಾಮ ಎನ್. ಶೆಟ್ಟಿ ಮತ್ತು ಶಾರದಾ ಎಸ್. ಶೆಟ್ಟಿ ದಂಪತಿಗೆ ಗೌರವ.


ನವೀನ್ ಪಡು ಇನ್ನಾರವರಿಗೆ ಗೌರವ.


ಮಹೇಶ್ ದೇವಾಡಿಗರಿಗೆ ಗೌರವ.

(ಚಿತ್ರ, ವರದಿ : ನವೀನ್ ಕೆ. ಇನ್ನ)

ನವಿಮುಂಬಯಿ, ಮಾ. 17- ದಾನ ಮತ್ತು ಧರ್ಮ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಶಿವಾಯ ಫೌಂಡೇಶನ್ ದಾನ ಮಾಡುವುದರ ಜೊತೆಗೆ ಸಾಮಾಜಿಕ ಕರ್ತವ್ಯವನ್ನು ನಿಭಾಯಿಸಿ ತಮ್ಮ ಧರ್ಮವನ್ನು ಕಾಪಾಡಿಕೊಂಡು ಬಂದಿವೆ. ನಿರ್ಗತಿಕರಿಗೆ, ಸಂಕಷ್ಟದಲ್ಲಿರುವವರಿಗೆ ಸಹಾಯ, ದಾನ ಮಾಡುವುದು ನಮ್ಮ ಧರ್ಮ. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ''ಸಬ್ ಕಾ ಸಾತ್ ಸಬ್ ಕಾ ವಿಕಾಸ್'' ಎಂಬ ಯೋಚನೆಗೆ ಪೂರಕವಾಗಿ ಶಿವಾಯ ಫೌಂಡೇಶನ್ ಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿದೆ ಎನ್ನಲು ತುಂಬಾ ಸಂತೋಷವಾಗುತ್ತದೆ. ಸೇವಾ ಮನೋಭಾವನೆಯುಳ್ಳ ಯುವ ತಂಡದ ರಚನೆ ಮಾಡಿ ಶಿವಾಯ ಫೌಂಡೇಶನ್ ಬಡ ಜನರಿಗೆ, ಕಷ್ಟದಲ್ಲಿರುವವರಿಗೆ ವಿವಿಧ ರೀತಿಯಲ್ಲಿ ಸೇವೆಯು ಎಲ್ಲರಿಗೂ ಮಾದರಿ. ಮಾನವೀಯತೆಯಿಂದ ಶಿವಾಯ ಫೌಂಡೇಶನ್ ಮಾಡುತ್ತಿರುವ ದಾನ- ಧರ್ಮದ ಕಾರ್ಯಕ್ಕೆ ನಾವೆಲ್ಲ ಜೊತೆಯಾಗೋಣ ಎಂದು ನವಿಮುಂಬಯಿ ಕಾರ್ಪೋರೇಟರ್‌ಸುರೇಶ್ ಜಿ. ಶೆಟ್ಟಿ ನುಡಿದರು.

ಅವರು ಮಾ. 15ರ ಆದಿತ್ಯವಾರದಂದು ನವಿಮುಂಬಯಿ ಸೆಕ್ಟರ್ 24ರ ಬಂಟ್ಸ್ ಸೆಂಟರ್‌ನ ಬೋಂಬೆ ಬಂಟ್ಸ್ ಎಸೋಸಿಯೇಶನ್ ಸಭಾಗೃಹದಲ್ಲಿ ನಿರ್ಮಿತ ಶ್ಯಾಮ ಎನ್. ಶೆಟ್ಟಿ ಮತ್ತು ಶಾರದಾ ಎಸ್. ಶೆಟ್ಟಿ ವೇದಿಕೆಯಲ್ಲಿ ಜರಗಿದ ಶಿವಾಯ ಫೌಂಡೇಶನ್ ಮುಂಬಯಿಯ ಎಂಟನೇ ವಾರ್ಷಿಕೋತ್ಸವ, 'ಶಿವಾಯ ಪ್ರೇರಣಾ' ಪ್ರಶಸ್ತಿ ಮತ್ತು ಸಾಧಕರಿಗೆ ಸನ್ಮಾನ ಇದರ ಸಮಾರೋಪ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು.

ಈ ಸಂದರ್ಭದಲ್ಲಿ ಧಾರ್ಮಿಕ ಮುಖಂಡ, ಘನ್ಸೋಲಿ ಶ್ರೀ ಮೂಕಾಂಬಿಕಾ ದೇವಾಲಯದ ಧರ್ಮದರ್ಶಿ ಅಣ್ಣಿ ಸಿ. ಶೆಟ್ಟಿಯವರಿಗೆ 'ಶಿವಾಯ ಪ್ರೇರಣಾ' ಪ್ರಶಸ್ತಿ-2026 ಪ್ರದಾನಿಸಲಾಯಿತು. ಅಲ್ಲದೆ ಸಮಾಜ ಸೇವಕ ಬಂಟರ ಸಂಘ ಮುಂಬಯಿಯ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಉಪ ಕಾರ್ಯಾಧ್ಯಕ್ಷ ಸುಬ್ಬಯ್ಯ ಶೆಟ್ಟಿ, ಬೋಂಬೆ ಬಂಟ್ಸ್ ಎಸೋಸಿಯೇಶನ್‌ನ ಮಾಜಿ ಅಧ್ಯಕ್ಷ ಸಿಎ ಸುರೇಂದ್ರ ಕೆ. ಶೆಟ್ಟಿ, ಪದ್ಮಶಾಲಿ ಸೇವಾ ಸಮಾಜ ಅಧ್ಯಕ್ಷ ಕೃಷ್ಣಾನಂದ ಶೆಟ್ಟಿಗಾರ್ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ ಶಿವಾಯ ಫೌಂಡೇಶನ್ ಸದಸ್ಯ, ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನವೀನ್ ಪೂಜಾರಿ ಪಡು ಇನ್ನಾ ಹಾಗೂ ಇನ್ನೋರ್ವ ಸದಸ್ಯ ಛಾಯಾ ಚಿತ್ರಗಾರ ಮಹೇಶ್ ದೇವಾಡಿಗ ಅಲ್ಲದೆ ಗಾನವೈಭವವನ್ನು ನೆರವೇರಿಸಿ ಕೊಟ್ಟ ಸುರೇಂದ್ರ ಕುಮಾರ್ ಮಾರ್ನಾಡ್ ಹಾಗೂ ತಂಡದವರನ್ನು ಗೌರವಿಸಲಾಯಿತು. ಸಾಕ್ಷ್ಯ ಚಿತ್ರದ ಮೂಲಕ ಪ್ರಶಸ್ತಿ ಪುರಸ್ಕೃತರನ್ನು ಹಾಗೂ ಸನ್ಮಾನಿತರನ್ನು ಪರಿಚಯಿಸಲಾಯಿತು.

ಅತಿಥಿ ಬೋಂಬೆ ಬಂಟ್ಸ್ ಎಸೋಸಿಯೇಶನ್‌ನ ಮಾಜಿ ಅಧ್ಯಕ್ಷ ಶ್ಯಾಮ ಎನ್. ಶೆಟ್ಟಿ ಮಾತನಾಡಿ, ಸಾಮಾಜಿಕವಾಗಿ ನಾನು ಸಕ್ರಿಯವಾಗಿ ಕೆಲಸವನ್ನು ಮಾಡುತ್ತಾ ಬಂದಿದ್ದೇನೆ. ಹಲವಾರು ಸಂಘ-ಸಂಸ್ಥೆಗಳಲ್ಲಿ ವೇದಿಕೆಯನ್ನು ಹಂಚಿಕೊಂಡಿದ್ದೇನೆ. ಆದರೆ ಇಂದಿನ ವೇದಿಕೆಗೆ ನನ್ನ ಹಾಗೂ ಪತ್ನಿ ಶಾರದಾ ಶೆಟ್ಟಿ ಅವರ ಹೆಸರನ್ನು ಇಟ್ಟು ಗೌರವ ಸಲ್ಲಿಸಿದ್ದಕ್ಕೆ ಮನ ತುಂಬಿ ಬಂದಿದೆ. ಶಿವಾಯ ಫೌಂಡೇಶನ್‌ಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಎಲ್ಲರ ಪ್ರೋತ್ಸಾಹ, ಸಹಾಯದೊಂದಿಗೆ ಬಡವರ ಕಣ್ಣೀರು ಒರೆಸುವ ಕೆಲಸವನ್ನು ಈ ಯುವ ಸದಸ್ಯರನ್ನು ಒಳಗೊಂಡ ಶಿವಾಯ ಫೌಂಡೇಶನ್ ನಿರಂತರ ಮಾಡುತ್ತಿರಲಿ. ಸಮಾಜ ಪರ ಸೇವೆ ಮುಖೇನ ಈ ಸಂಸ್ಥೆ ವಿಶ್ವವಿಖ್ಯಾತಿಯನ್ನು ಪಡೆಯಲಿ ಎಂದರು.

ಬೋಂಬೆ ಬಂಟ್ಸ್ ಎಸೋಸಿಯೇಶನ್‌ನ ಉಪಾಧ್ಯಕ್ಷ ಐಕಳ ಕಿಶೋರ್ ಕೆ. ಶೆಟ್ಟಿ ಮಾತನಾಡಿ, ಸಮಾಜಕ್ಕೆ ಏನಾದರೂ ಕಿಂಚಿತ್ ಸೇವೆಯನ್ನು ಸಲ್ಲಿಸಬೇಕೆಂಬ ಸದುದ್ದೇಶದಿಂದ 11 ಮಂದಿ ಯುವ ಮನಸ್ಕರು ಸೇರಿ ಆರಂಭಿಸಿದ ಈ ಸಂಸ್ಥೆಯಲ್ಲಿ ಸದ್ಯ ನೂರಕ್ಕೂ ಮಿಕ್ಕಿ ಸದಸ್ಯರು ಜೊತೆಯಾಗಿದ್ದಾರೆ. ಈ ಶಿವಾಯ ಫೌಂಡೇಶನ್‌ನಲ್ಲಿ ಸದಸ್ಯರ ಸಂಖ್ಯೆ ಅಲ್ಪವಾಗಿದೆ. ಆದರೆ ಇದ್ದ ಸದಸ್ಯರೆಲ್ಲರೂ ಒಳ್ಳೆಯ ಗುಣವಂತರು, ಸೇವಾ ಮನೋಭಾವನೆಯುಳ್ಳವರಾಗಿದ್ದಾರೆ. ನಿರ್ಗತಿಕರಿಗೆ, ಕಷ್ಟದಲ್ಲಿರುವವರಿಗೆ ಸೇವೆಯನ್ನು ಸಲ್ಲಿಸುವ ಆಸಕ್ತಿಯುಳ್ಳವರು ಈ ಶಿವಾಯ ಫೌಂಡೇಶನಿನ ಜೊತೆ ಸೇರಿ ಅದಕ್ಕೆ ಮತ್ತಷ್ಟು ಬಲ ಬರುವಂತೆ ಸಹಕರಿಸಬೇಕು. ದೊಡ್ಡ -ದೊಡ್ಡ ಸಂಘ ಸಂಸ್ಥೆಗಳಿಗಿಂತ ಹೆಚ್ಚಿನ ಮಟ್ಟದ ಸಾಮಾಜಿಕ ಸೇವೆಯನ್ನು ಶಿವಾಯ ಫೌಂಡೇಶನ್ ಮಾಡುತ್ತಿರುವುದಕ್ಕೆ ತುಂಬಾ ಅಭಿಮಾನವಾಗುತ್ತದೆ. ಸಮಾಜಕ್ಕೆ ಒಳ್ಳೆಯ ಸೇವಾ ಕಾರ್ಯದ ಮೂಲಕ ಶಿವಾಯ ಫೌಂಡೇಶನ್ ಮತ್ತಷ್ಟು ಪ್ರಸಿದ್ಧಿಯನ್ನು ಪಡೆಯಲಿ ಎಂದರು.

ನವಿಮುಂಬಯಿ ಹೋಟೇಲ್ ಎಸೋಸಿಯೇಶನ್ ಅಧ್ಯಕ್ಷ ದಯಾನಂದ ಶೆಟ್ಟಿ ಮಾತನಾಡಿ, ಶಿವಾಯ ಫೌಂಡೇಶನ್ ಮಾಡುತ್ತಿರುವ ವಿವಿಧ ರೀತಿಯ ಸೇವೆಗಳ ಬಗ್ಗೆ ತಿಳಿದು ತುಂಬಾ ಸಂತೋಷವಾಯಿತು. ಇವರು ಮಾಡುತ್ತಿರುವ ಸಮಾಜಪರ ಸೇವೆಗಳು ಎಲ್ಲರಿಗೂ ಸ್ಫೂರ್ತಿ. ನವಿಮುಂಬಯಿ ಹೋಟೇಲ್ ಎಸೋಸಿಯೇಶನ್ ಶಿವಾಯ ಫೌಂಡೇಶನ್ ಮಾಡುವ ಸೇವಾ ಕಾರ್ಯಗಳಿಗೆ ಪ್ರೋತ್ಸಾಹವನ್ನು ನೀಡಲಿದೆ ಎಂದರು.



ಶಿವಾಯ ಫೌಂಡೇಶನ್ ಸದಸ್ಯರು.

### ಮಾನವೀಯತೆಯಿಂದ ಸಮಾಜ ಸೇವೆ ಮಾಡುವುದರಲ್ಲಿಯೇ ಜೀವನದ ಸಾರ್ಥಕತೆ - ಧರ್ಮದರ್ಶಿ ಅಣ್ಣಿ ಸಿ. ಶೆಟ್ಟಿ

ಉದರ ಪೋಷಣೆಗಾಗಿ ಜನ್ಮಭೂಮಿಯಿಂದ ಕರ್ಮಭೂಮಿ ಮಹಾರಾಷ್ಟ್ರಕ್ಕೆ ಬಂದಿರುವ ನಾವು ಹಿರಿಯರ ಆಶೀರ್ವಾದ, ದೈವ-ದೇವರ ಅನುಗ್ರಹದಿಂದ ವಿವಿಧ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೊಂದಿ ಸಾಧನೆಯನ್ನೂ ಮಾಡಿ ಯಶಸ್ವಿ ಜೀವನ ನಡೆಸುತ್ತಿದ್ದೇವೆ. ಹಾಗಿರುವಾಗ ನಾವು ಮಹಾರಾಷ್ಟ್ರದ ಮಣ್ಣಿನ ಋಣ ತೀರಿಸುವ ಬಗ್ಗೆ ಚಿಂತನೆ ಮಾಡುವ ಅಗತ್ಯವಿದೆ. ಸಮಾಜದಿಂದ ನಾವು ಏನು ಪಡೆದಿದ್ದೇವೆ ಎನ್ನುವುದಕ್ಕಿಂತ ಸಮಾಜಕ್ಕೆ ನಾವು ಏನು ಕೊಟ್ಟಿದ್ದೇವೆ ಎಂಬುದು ಮುಖ್ಯ. ಸಮಾಜ ಸೇವೆ ಮಾಡುವುದರಲ್ಲಿ ಜೀವನದ ಸಾರ್ಥಕತೆ ಇರುವುದು. ಆ ನಿಟ್ಟಿನಲ್ಲಿ ಶಿವಾಯ ಫೌಂಡೇಶನ್ ಸಾಮಾಜಿಕ ಕಳಕಳಿಯೊಂದಿಗೆ ಸೇವೆಯನ್ನು ಸಲ್ಲಿಸಿ ಮಹಾರಾಷ್ಟ್ರದ ನೆಲದ ಜೊತೆಗೆ ಸಮಾಜದ ಋಣ ಸಂದಾಯ ಮಾಡುವ ಪ್ರಯತ್ನ ಮಾಡುತ್ತಿರುವುದು ಅಭಿನಂದನೀಯ. ಜೀವನದಲ್ಲಿ ನಮಗೆ ಎಷ್ಟೇ ಶ್ರೀಮಂತಿಕೆ ಬಂದರೂ ನಮ್ಮ ಹಿಂದಿನ ಕಷ್ಟದ ದಿನಗಳನ್ನು ನಾವು ಎಂದೂ ಮರೆಯಬಾರದು. ನಮ್ಮಲ್ಲಿ ಒಳ್ಳೆಯ ಸಂಸ್ಕಾರ ಇದ್ದಾಗ ಮಾತ್ರ ಸಮಾಜ ಸೇವೆ ಮಾಡುವ ಚಿಂತನೆ ನಮ್ಮಲ್ಲಿ ಮೂಡುತ್ತದೆ. ಸಂಸ್ಕಾರವನ್ನು ನಾವು ಜೀವನದಲ್ಲಿ ಮೈಗೂಡಿಸಿಕೊಂಡರೆ ಉತ್ತಮ ಮನುಷ್ಯನಾಗಲು ಸಾಧ್ಯ. ನಮ್ಮಲ್ಲಿ ಎಷ್ಟೇ ದುಡ್ಡು ಸಂಪಾದನೆ ಇದ್ದರೂ ಸಂಸ್ಕಾರ ಇಲ್ಲದಿದ್ದಾಗ ಆ ನಮ್ಮಲ್ಲಿನ ಸಂಪತ್ತಿಗೆ ಬೆಲೆ ಬರುವುದಿಲ್ಲ. ಮನುಷ್ಯನಿಗೆ ದುಡ್ಡು ಸಂಪತ್ತಿನೊಂದಿಗೆ ಮನುಷ್ಯತ್ವ ಕೂಡ ಮುಖ್ಯ. ನಾವು ಮಾನವೀಯತೆಯಿಂದ ಬದುಕಿದಾಗ ನಮ್ಮಲ್ಲಿನ ದುಡ್ಡು-ಸಂಪಾದನೆಗೆ ಸಾರ್ಥಕತೆ ಬರುತ್ತದೆ. ಮಾನವ ಸೇವೆಯೇ ಜನಾರ್ದನ ಸೇವೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಆ ನಿಟ್ಟಿನಲ್ಲಿ ಶಿವಾಯ ಫೌಂಡೇಶನ್ ಸದಸ್ಯರು ತನ್ನ ದುಡಿಮೆಯ ಸ್ವಲ್ಪ ಭಾಗವನ್ನು ಬಡವರ, ನೊಂದವರ ಬಾಳನ್ನು ಉದ್ಧಾರಗೊಳಿಸಲು ವಿನಿಯೋಗಿಸುತ್ತಿರುವುದು ಅಭಿನಂದನೀಯ. ಶಿವಾಯ ಫೌಂಡೇಶನ್ ಸದಸ್ಯರು ಯಾವುದೇ ಅಧಿಕಾರ ದಾಹವಿಲ್ಲದೆ, ಆಡಂಬರವಿಲ್ಲದೆ ನಿಸ್ವಾರ್ಥವಾಗಿ ಮಾಡುವ ಸಮಾಜ ಪರ ಸೇವೆಯು ಎಲ್ಲರಿಗೂ ಮಾದರಿ. ಸಮಾಜ ಸೇವೆಯೊಂದಿಗೆ ಶಿವಾಯ ಫೌಂಡೇಶನ್ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲಿ. ನನಗೆ ಹಲವಾರು ಪ್ರಶಸ್ತಿ ಸನ್ಮಾನಗಳು ಲಭಿಸಿದೆ. ಇದೆಲ್ಲಾ ಶ್ರೀ ಮೂಕಾಂಬಿಕೆಯ ಅನುಗ್ರಹ ಹಾಗೂ ಕ್ಷೇತ್ರದ ಎಲ್ಲಾ ಪದಾಧಿಕಾರಿಗಳ ಬೆಂಬಲ ಪ್ರೋತ್ಸಾಹ ದೊರಕಿದೆ ಇಂದು ನನ್ನ ಭಾವನೆ. ಈ ಪ್ರಶಸ್ತಿಯನ್ನು ಶ್ರೀ ಮೂಕಾಂಬಿಕೆಯ ಹಾಗೂ ನನ್ನ ಹೆತ್ತ ಪಾಲಕರ ಪಾದಕ್ಕೆ ಅರ್ಪಿಸುತ್ತೇನೆ ಎಂದು ಘನ್ಸೋಲಿ ಶ್ರೀ ಮೂಕಾಂಬಿಕಾ ದೇವಾಲಯದ ಧರ್ಮದರ್ಶಿ ಅಣ್ಣಿ ಸಿ. ಶೆಟ್ಟಿ 'ಶಿವಾಯ ಪ್ರೇರಣಾ' ಪ್ರಶಸ್ತಿಯನ್ನು ಸ್ವೀಕರಿಸಿ ನುಡಿದರು.



ಸುರೇಶ್ ಜಿ. ಶೆಟ್ಟಿಯವರಿಗೆ ಗೌರವ.

ತುಳುಕೂಟ ಐರೋಲಿಯ ಗೌರವಾಧ್ಯಕ್ಷ ಹರೀಶ್ ಶೆಟ್ಟಿ ಪಡುಬಿದ್ರಿ ಮಾತನಾಡಿ, ಶಿವಾಯ ಫೌಂಡೇಶನ್ ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆ ಬಹಳ ವಿಶೇಷವಾದುದು. ನಾವು ಜೀವನದಲ್ಲಿ ಸಂತೋಷದಲ್ಲಿ ಇರಬೇಕಾದರೆ ಅದಕ್ಕೆ ಕಷ್ಟ ಸಮಸ್ಯೆಯಲ್ಲಿದ್ದವರಿಗೆ ಸಹಾಯವನ್ನು ಮಾಡಬೇಕು. ಆ ನಿಟ್ಟಿನಲ್ಲಿ ಶಿವಾಯ ಫೌಂಡೇಶನ್ ಸದಸ್ಯರು ತಮ್ಮ ಕಷ್ಟ-ಸಮಸ್ಯೆಗಳನ್ನು ಲೆಕ್ಕಿಸದೆ ಸಂಪಾದನೆಯ ಅಲ್ಪಾಂಶವನ್ನು ಕಷ್ಟದಲ್ಲಿರುವವರ, ಆರೋಗ್ಯ ಪೀಡಿತರ ಸಂತೋಷಕ್ಕಾಗಿ ವಿನಿಯೋಗಿಸುತ್ತಿದ್ದಾರೆ. ಸಮಾಜ ಸೇವೆ ಮಾಡುವವರಿಗೆ ಶಿವಾಯ ಫೌಂಡೇಶನ್ ಪ್ರೇರಣಾದಾಯಕ ಸಂಸ್ಥೆಯಾಗಿದೆ. ಸಮಾಜ ಪರ ಚಿಂತನೆಯೊಂದಿಗೆ ಒಳ್ಳೆಯ ಸಂಸ್ಕಾರ, ಮಾನವೀತೆಯೊಂದಿಗೆ ನಾವು ಬದುಕನ್ನು ಕಟ್ಟಿಕೊಳ್ಳೋಣ. ಯುವ ಪೀಳಿಗೆಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸೋಣ. ಜಾತಿ-ಭೇದ ಇಲ್ಲದೆ ಒಗ್ಗಟ್ಟಿನಿಂದ ಸಮಾಜಕ್ಕೆ ಸೇವೆಯನ್ನು ಸಲ್ಲಿಸೋಣ ಎಂದರು.

### ಶಿವಾಯ ಫೌಂಡೇಶನ್ ಅಧ್ಯಕ್ಷರ ನುಡಿ...




ಶಿವಾಯ ಫೌಂಡೇಶನ್ ಅಶಕ್ತರ, ನಿರ್ಗತಿಕರ ಸೇವೆಗೆ ಹುಟ್ಟಿಕೊಂಡ ಸಂಸ್ಥೆ. ಸಮಾನ ಮನಸ್ಕರ ಯುವ ತಂಡವು ಸ್ವಂತ ದುಡಿಮೆಯ ಅಲ್ಪಾಂಶವನ್ನು ಬಡ ಜನರ ವೈದ್ಯಕೀಯ ನೆರವು ಶೈಕ್ಷಣಿಕ ನೆರವು, ಬೀದಿ ಬದಿಯಲ್ಲಿ ಇರುವವರಿಗೆ ನೆರವು, ಅನ್ನದಾನ ಮುಂತಾದ ಅನೇಕ ರೀತಿಯ ಸೇವೆಗಾಗಿ ವಿನಿಯೋಗಿಸುತ್ತಿದೆ. ಶಿವಾಯ ಫೌಂಡೇಶನ್‌ನೊಂದಿಗೆ ಕೈಜೋಡಿಸಲು ಇಚ್ಛೆಯುಳ್ಳ ಯುವಕ -ಯುವತಿಯರು ನಮ್ಮೊಂದಿಗೆ ಸೇರಿಕೊಳ್ಳಬಹುದು. ನಾವೆಲ್ಲ ಜೊತೆಯಾಗಿ ಸಮಾಜವನ್ನು ಕಟ್ಟುವ ಕೆಲಸ ಮಾಡೋಣ. ಇಲ್ಲಿ ತುಂಬಾ ಜನ ಯುವ ಮನಸ್ಸುಗಳು ಸೇರಿದ್ದೀರಿ. ನಿಮ್ಮಲ್ಲಿ ಈ ಸಮಾಜಕ್ಕೆ ಏನಾದರೂ ಮಾಡಬೇಕೆಂಬ ಇಚ್ಛೆ ಇದ್ದರೆ ಮಾನವೀಯತೆಯಿಂದ ಬದುಕಲು ಈ ಸಮಾಜಕ್ಕೆ ಪ್ರೇರಣಾದಾಯಕರಾಗೋಣ.

**- ಪ್ರಶಾಂತ್ ಶೆಟ್ಟಿ ಪಲಿಮಾರು (ಅಧ್ಯಕ್ಷ : ಶಿವಾಯ ಫೌಂಡೇಶನ್ ಮುಂಬಯಿ)**

### ಸನ್ಮಾನಿತರ ನುಡಿ

ಸಮಾಜ ಪರ ಸೇವೆಯನ್ನು ಯಾವೆಲ್ಲ ರೀತಿಯಲ್ಲಿ ಮಾಡಬಹುದು ಎಂಬುದನ್ನು ಶಿವಾಯ ಫೌಂಡೇಶನ್‌ನಿಂದ ನಾವು ಕಲಿಯಲು ಸಾಧ್ಯವಿದೆ. ಯುವಕ ಯುವತಿಯರೆಲ್ಲ ಜೊತೆಗೂಡಿ ತನ್ನ ತಿಂಗಳ ಸಂಪಾದನೆಯ ಅಲ್ಪಾಂಶವನ್ನು ಬಡತನದಲ್ಲಿರುವವರ, ನಿರ್ಗತಿಕರ ಹಾಗೂ ತುಂಬಾ ಕಷ್ಟದಲ್ಲಿರುವವರ ಪರಿಹಾರಕ್ಕೆ ವಿನಿಯೋಗಿಸುತ್ತಿರುವುದು ಎಲ್ಲರೂ ಮೆಚ್ಚುವಂತದ್ದು. ಈ ಸಂಸ್ಥೆಯ ಸದಸ್ಯರೆಲ್ಲರಿಗೂ ಖಂಡಿತವಾಗಿ ದೇವರ ದಯೆ ಇರುತ್ತದೆ. ನಾನು ಕೂಡ ಸಮಾಜ ಸೇವೆಯಲ್ಲಿ ಸಕ್ರಿಯನಾಗಿದ್ದೇನೆ. ಆದರೆ ನಮ್ಮ ಸೇವೆಯು ಹೆಚ್ಚಾಗಿ ತಮ್ಮ ಜಾತಿಯ ಸಮಾಜಕ್ಕೆ ಸೀಮಿತವಾಗಿರುತ್ತದೆ. ಶಿವಾಯ ಫೌಂಡೇಶನ್ ಮಾಡುತ್ತಿರುವ ಮಾನವೀಯ ಸೇವೆಗೆ ಎಲ್ಲರೂ ಕೈಜೋಡಿಸಬೇಕು. ಸಹಾಯ, ಸಹಕಾರವನ್ನು ನೀಡಬೇಕು. **- ಸುಬ್ಬಯ್ಯ ಶೆಟ್ಟಿ (ಉಪ ಕಾರ್ಯಾಧ್ಯಕ್ಷರು : ಬಂಟರ ಸಂಘ ಮುಂಬಯಿ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿ)**

ಶಿವಾಯ ಫೌಂಡೇಶನ್‌ನ ಸಮಾಜ ಪರ ಕಾರ್ಯವೈಖರಿ, ಕಾರ್ಯತತ್ಪರತೆ, ಒಗ್ಗಟ್ಟು, ಸೇವಾ ಮನೋಭಾವನೆ, ಪರಸ್ಪರ ಪ್ರೀತಿ ವಾತ್ಸಲ್ಯ ಇವೆಲ್ಲವು ತುಂಬಾ ಮೆಚ್ಚುವಂತದ್ದು. ವಿವೇಕಾನಂದರ ಸಿದ್ಧಾಂತವನ್ನು ಪರಿಪಾಲಿಸುವ ನಿಟ್ಟಿನಲ್ಲಿ ಶಿವಾಯ ಫೌಂಡೇಶನ್ ಸದ್ದಿಲ್ಲದೆ ಸಮಾಜ ಪರ ಸೇವೆಯನ್ನು ಮಾಡುತ್ತಿದೆ. ಬಡವರಿಗೆ ಅನ್ನದಾನ, ವೈದ್ಯಕೀಯ ನೆರವು, ಶೈಕ್ಷಣಿಕ ನೆರವು ನಿರ್ಗತಿಕರಿಗಾಗಿ ಸಹಾಯ ಇವೆಲ್ಲವೂ ಶಿವಾಯ ಫೌಂಡೇಶನ್ ಮಾಡುವ ದೇವರು ಮೆಚ್ಚುವ ಕೆಲಸ. ಸ್ವಂತ ದುಡಿಮೆಯ ಹಣವನ್ನು ಸಮಾಜ ಸೇವೆಗಾಗಿ ವಿನಿಯೋಗಿಸುವ ಶಿವಾಯ ಫೌಂಡೇಶನ್ ಯುವ ಪೀಳಿಗೆಗೆ ಮಾದರಿ ಸಂಸ್ಥೆಯಾಗಿದೆ. ಎಲ್ಲರ ಕಷ್ಟ-ದುಃಖಗಳಲ್ಲಿ ಭಾಗಿಯಾಗಿ ನಾವೆಲ್ಲ ಪರಸ್ಪರ ಪ್ರೀತಿಯನ್ನು ಹಂಚಿ ಬಾಳೋಣ. ನೀವಿತ್ತ ಸನ್ಮಾನವನ್ನು ಇತ್ತೀಚೆಗೆ ಅಗಲಿದ ನನ್ನ ತಂದೆಯವರಿಗೂ ಹಾಗೂ ಬೋಂಬೆ ಬಂಟ್ಸ್ ಎಸೋಸಿಯೇಶನ್‌ಗೂ ಅರ್ಪಿಸುತ್ತೇನೆ. **- ಸಿಎ ಸುರೇಂದ್ರ ಶೆಟ್ಟಿ (ಮಾಜಿ ಅಧ್ಯಕ್ಷ : ಬೋಂಬೆ ಬಂಟ್ಸ್ ಎಸೋಸಿಯೇಶನ್)**

ನನ್ನದೇ ಆದ ಹರ್ಷ ಫೌಂಡೇಶನ್ ಮೂಲಕ ಕಳೆದ 17 ವರ್ಷಗಳಿಂದ ಸಮಾಜಕ್ಕೆ ಕಿಂಚಿತ್ ಸೇವೆಯನ್ನು ಸಲ್ಲಿಸುತ್ತಿದ್ದೇನೆ. ಅಲ್ಲದೆ ಪದ್ಮಶಾಲಿ ಸಮಾಜದ ಅಭಿವೃದ್ಧಿಗೂ ಕೆಲಸವನ್ನು ಮಾಡಿದ್ದೇನೆ. ಸಮಾಜದ ಅಭಿವೃದ್ಧಿ ಕಾರ್ಯದಲ್ಲಿ ಪದ್ಮಶಾಲಿ ಸಮಾಜ ಸೇವಾ ಸಂಘ ನನಗೆ ತುಂಬಾ ಪ್ರೋತ್ಸಾಹವನ್ನು ನೀಡುತ್ತಿದೆ. ಶಿವಾಯ ಫೌಂಡೇಶನ್ ಮಾಡುವ ಸಾಮಾಜಿಕ ಸೇವಾ ಕಾರ್ಯವನ್ನು ತುಂಬಾ ಮೆಚ್ಚಿದ್ದೇನೆ. ಅವರು ಬಡಜನರಿಗೆ, ನಿರ್ಗತಿಕರಿಗಾಗಿ ಮಾಡುವ ಅನ್ನದಾನದ ಸೇವೆಗೆ ನನ್ನ ಹರ್ಷ ಫೌಂಡೇಶನ್ ಮೂಲಕ ಪ್ರತೀ ವರ್ಷ ಸಹಾಯವನ್ನು ನೀಡಲು ಇಚ್ಛೆ ಪಡುತ್ತೇನೆ.

**- ಕೃಷ್ಣಾನಂದ ಶೆಟ್ಟಿಗಾರ್ (ಅಧ್ಯಕ್ಷ : ಪದ್ಮಶಾಲಿ ಸಮಾಜ ಸೇವಾ ಸಂಘ)**

ವೇದಿಕೆಯಲ್ಲಿ ಬಂಟರ ಸಂಘ ಮುಂಬಯಿಯ ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿಯ ಜೊತೆ ಕಾರ್ಯದರ್ಶಿ ರಮೇಶ್ ಶೆಟ್ಟಿ ಸಿದ್ಧಕಟ್ಟೆ, ಬಂಟರ ಸಂಘ ಮುಂಬಯಿ ನವಿಮುಂಬಯಿ ಪ್ರಾದೇಶಿಕ ಸಮಿತಿಯ ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ ಸಂತೋಷ್ ಶೆಟ್ಟಿ ಮಾಳ, ಶಿವಾಯ ಫೌಂಡೇಶನ್ ಗೌರವ ಕಾರ್ಯದರ್ಶಿ ಪ್ರಶಾಂತ್ ಶೆಟ್ಟಿ ಪಂಜ, ಶಿವಾಯ ಫೌಂಡೇಶನ್‌ನ ಉಪಾಧ್ಯಕ್ಷ ಮಧುಸೂಧನ್ ಶೆಟ್ಟಿ, ಗೌರವ ಸಲಹೆಗಾರರಾದ ತಾರನಾಥ ರೈ ಪುತ್ತೂರು, ಹರೀಶ್ ಕೋಟ್ಯಾನ್ ಪಡು ಇನ್ನ ಇವರೆಲ್ಲ ಉಪಸ್ಥಿತರಿದ್ದರು. ಶುಭಾ ಕೋಟೆ ಪ್ರಾರ್ಥನೆಗೈದರು. ಶಿವಾಯ ಫೌಂಡೇಶನ್ ಅಧ್ಯಕ್ಷ ಪ್ರಶಾಂತ್ ಶೆಟ್ಟಿ ಪಲಿಮಾರು ಸ್ವಾಗತಿಸಿದರು. ಕಾರ್ಯಕ್ರಮವನ್ನು ಶಿವಾಯ ಫೌಂಡೇಶನಿನ ವೈದ್ಯಕೀಯ ಸಲಹೆಗಾರ್ತಿ ಡಾ। ಸ್ವರ್ಣಾ ಶೆಟ್ಟಿ ಮತ್ತು ಅದ್ಯಪಾಡಿ ಬಾಲಕೃಷ್ಣ ಶೆಟ್ಟಿ ನಿರೂಪಿಸಿದರು.

ಕೊನೆಗೆ ಕುಣಿತ ಭಜನೆ ಹಾಗೂ ಸಮೂಹ ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದ ಯಶಸ್ವಿಗೆ ಶಿವಾಯ ಫೌಂಡೇಶನ್ ಎಲ್ಲಾ ಸದಸ್ಯರು ಸಹಕರಿಸಿದರು.

# ಕರ್ನಾಟಕ ಸಂಘ ಡೊಂಬಿವಲಿ : ಮಹಿಳಾ ವಿಭಾಗದಿಂದ ಮಾರ್ಚ್ 21ರಂದು ವಿಶ್ವ ಮಹಿಳಾ ದಿನಾಚರಣೆ; ಸಮೂಹ ಗಾನ ಸ್ಪರ್ಧೆ

ಡೊಂಬಿವಲಿ, ಮಾ. 17- ಕರ್ನಾಟಕ ಸಂಘ ಡೊಂಬಿವಲಿಯ ಮಹಿಳಾ ವಿಭಾಗದ ವತಿಯಿಂದ ಮಾರ್ಚ್ 21ರ ಶನಿವಾರದಂದು ಸಂಜೆ 4:00 ಘಂಟೆಗೆ ಡೊಂಬಿವಲಿ ಪೂರ್ವದ ಎಮ್.ಐ.ಡಿ.ಸಿ ಪರಿಸರದ ಶಿವಂ ಹೋಟೇಲ್ ಸಭಾಗೃಹದಲ್ಲಿ ವಿಶ್ವ ಮಹಿಳಾ ದಿನಾಚರಣೆಯು ವೈಶಿಷ್ಟ್ಯಪೂರ್ಣವಾಗಿ ಜರುಗಲಿದೆ.


ಸುಕುಮಾರ್ ಶೆಟ್ಟಿ


ಡಾ. ದಿವಾಕರ್‌ಶೆಟ್ಟಿ


ಡಾ. ಪೂರ್ಣಿಮಾ ಶೆಟ್ಟಿ


ಆಶಾ ಶೆಟ್ಟಿ


ಮಾಧುರಿಕಾ ಬಂಗೇರ

ಕರ್ನಾಟಕ ಸಂಘ ಡೊಂಬಿವಲಿಯ ಅಧ್ಯಕ್ಷ ಸುಕುಮಾರ ಎನ್. ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಸಂಘದ ಕಾರ್ಯಾಧ್ಯಕ್ಷ ಡಾ. ದಿವಾಕರ ಶೆಟ್ಟಿ ಇಂದ್ರಾಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಮುಂಬಯಿ ವಿಶ್ವ ವಿದ್ಯಾಲಯದ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಆಗಮಿಸಲಿದ್ದಾರೆ.

ಇದೇ ಸಂಧರ್ಭದಲ್ಲಿ ಸಂಘದ ಮಹಿಳಾ ವಿಭಾಗದ ಸದಸ್ಯೆಯರ ವೈವಿಧ್ಯಮಯ ನೃತ್ಯ ವೈಭವ ಹಾಗೂ ಮುಂಬಯಿ ಹಾಗೂ ಉಪನಗರಗಳಲ್ಲಿಯ ಕನ್ನಡ ಸಂಘ ಸಂಸ್ಥೆಗಳಿಗಾಗಿ ನಡೆಯಲಿರುವ ಸಮೂಹ ಗಾನ ಸ್ಪರ್ಧೆಯಲ್ಲಿ ಶ್ರೀ ಆದಿ ಶಕ್ತಿ ಭಜನಾ ಮಂಡಳಿ ಡೊಂಬಿವಲಿ, ರಾಧಾಕೃಷ್ಣ ಶನೀಶ್ವರ ಭಜನಾ ಮಂಡಳಿ ಡೊಂಬಿವಲಿ, ಶ್ರೀ ದುರ್ಗಾಂಬಿಕಾ ಮಹಿಳಾ ತಂಡ ಅಸಲ್ಫಾ ಮುಂಬಯಿ, ಕನ್ನಡ ಸಂಘ ವರ್ತಕ ನಗರ ಥಾಣೆ, ಶ್ರೀ ಅಯ್ಯಪ್ಪ ಭಜನಾ ಮಂಡಳಿ ಅಜ್ದೆಪಾಡ ಡೊಂಬಿವಲಿ, ದೇವಾಡಿಗ ಸಂಘ ಮುಂಬಯಿ, ಸ್ವಾವಲಂಬನಾ ವೆಲ್ಫೇರ್ ಎಸೋಸಿಯೇಶನ್ ಡೊಂಬಿವಲಿ, ತುಳು ವೆಲ್ಫೇರ್ ಎಸೋಸಿಯೇಶನ್ ಡೊಂಬಿವಲಿ, ಬಿಲ್ಲವರ ಎಸೋಸಿಯನ್ ಮುಂಬಯಿ ಡೊಂಬಿವಲಿ ಸ್ಥಳೀಯ ಕಚೇರಿ, ಜೈ ಭವಾನಿ ಶನೀಶ್ವರ ಮಂದಿರ ಡೊಂಬಿವಲಿ, ಶ್ರೀ ಮಹಾವಿಷ್ಣು ಮಂದಿರ ಡೊಂಬಿವಲಿ ಹಾಗೂ ಶ್ರೀ ವರದ ಸಿದ್ಧಿ ವಿನಾಯಕ ಭಜನಾ ಮಂಡಳಿ ಡೊಂಬಿವಲಿ ತಂಡಗಳು ಭಾಗವಹಿಸಲಿವೆ.

ಇದೇ ಸಂದರ್ಭದಲ್ಲಿ ವೈವಾಹಿಕ ಜೀವನದ ಸುವರ್ಣ ಮಹೋತ್ಸವ ಸಂಭ್ರಮವನ್ನು ಆಚರಿಸಿಕೊಂಡ ಲೀಲಾ ಸಾಧು ಶೆಟ್ಟಿ ಹಾಗೂ ಸಾಧು ಶೆಟ್ಟಿ ದಂಪತಿಗೆ ಸನ್ಮಾನ ನಡೆಯಲಿದೆ. ಈ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಕ್ಕೆ ಸಮಸ್ತ ಕನ್ನಡ ಮನಸ್ಸುಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕರ್ನಾಟಕ ಸಂಘ ಡೊಂಬಿವಲಿಯ ಉಪಾಧ್ಯಕ್ಷ ಲೋಕನಾಥ ಎ. ಶೆಟ್ಟಿ, ಉಪ ಕಾರ್ಯಾಧ್ಯಕ್ಷ ದೇವದಾಸ ಕುಲಾಲ, ಗೌ. ಕಾರ್ಯದರ್ಶಿ ಪ್ರೊ. ಅಜೀತ ಉಮರಾಣಿ, ಸಹ ಕಾರ್ಯದರ್ಶಿ ದಿನೇಶ್ ಕುಡ್ವ, ಕೋಶಾಧಿಕಾರಿ ತಾರಾನಾಥ ಅಮೀನ್, ಉಪ ಕೋಶಾಧಿಕಾರಿ ವಿಮಲಾ ವಿ. ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಆಶಾ ಎಲ್. ಶೆಟ್ಟಿ, ಉಪ ಕಾರ್ಯಾಧ್ಯಕ್ಷೆ ಯೋಗಿನಿ ಶೆಟ್ಟಿ, ಕಾರ್ಯದರ್ಶಿ ಮಧುರಿಕಾ ಬಂಗೇರ, ಜೊತೆ ಕಾರ್ಯದರ್ಶಿ ಸರೋಜಾ ಟಿ. ರೈ, ಕೋಶಾಧಿಕಾರಿ ದೇವಿಕಾ ಸಾಲ್ಯಾನ್, ಜೊತೆ ಕೋಶಾಧಿಕಾರಿ ಜಯಂತಿ ಜೆ. ಶೆಟ್ಟಿ ಹಾಗೂ ಸಮಸ್ತ ಕಾರ್ಯಕಾರಿ ಮಂಡಳಿ ಹಾಗೂ ಮಹಿಳಾ ವಿಭಾಗದ ಸದಸ್ಯೆಯರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಪನ್ವಿ ಕ್ರಿಯೇಷನ್ಸ್ ಮುಂಬಯಿ : ದಶಮಾನೋತ್ಸವದ ಸರಣಿ ಕಾರ್ಯಕ್ರಮದಂಗವಾಗಿ ನಾಳೆ ಗಾನ ವೈಭವ, ನೃತ್ಯ ವೈಭವ, ಹಾಸ್ಯ - ಸಾಧಕರಿಗೆ ಸನ್ಮಾನ

ಮುಂಬಯಿ, ಮಾ. 17- ಮಹಾನಗರದ ಪ್ರಸಿದ್ಧ ಹಿನ್ನೆಲೆ ಗಾಯಕ, ಚಿತ್ರನಟ, ರಂಗಭೂಮಿ ಕಲಾವಿದ, ಪನ್ವಿ ಕ್ರಿಯೇಷನ್ಸ್ ಸಂಸ್ಥೆಯ ರೂವಾರಿ ಹರೀಶ್ ಶೆಟ್ಟಿ ಎರ್ಮಾಳು ಪರಿಕಲ್ಪನೆ ಹಾಗೂ ಆಯೋಜನೆಯಲ್ಲಿ ತಂಡದ ಪ್ರಶಸ್ತಿ ವಿಜೇತ, ಗಾಯಕ, ಗಾಯಕಿಯರಿಂದ ಗಾನ ವೈಭವ ಮತ್ತು ಮುಂಬಯಿ ಹೆಸರಾಂತ ನೃತ್ಯ ಕಲಾವಿದೆ ಅಂಕಿತಾ ನಾಯ್ಕ ಬಳಗದವರಿಂದ ನೃತ್ಯ ವೈಭವ ಹಾಗೂ ಚಿತ್ರನಟ, ರಂಗ ಕಲಾವಿದ, ಹಾಸ್ಯ ಕಲಾವಿದ, 'ಪಿಲಿಬೈಲ್ ಯಮುನಾಕ್ಕ' ತುಳು ಚಿತ್ರದ ಕ್ಯಾಂಡಿ ಕ್ಯಾಷ್ ಖ್ಯಾತಿಯ ಮಿಮಿಕ್ರಿ ಶರಣ್ ಕೈಕಂಬ ಅವರಿಂದ ಹಾಸ್ಯ ವೈಭವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ರಮವನ್ನು ಮಾರ್ಚ್ 19ರ ಗುರುವಾರದಂದು ಸಂಜೆ 5:30ಕ್ಕೆ ಸರಿಯಾಗಿ ಗೋಕುಲ ಸಭಾಗೃಹ ಸಯನ್ ಮುಂಬಯಿ ಇಲ್ಲಿ ನಡೆಯಲಿದೆ.


ಹರೀಶ್ ಶೆಟ್ಟಿ ಎರ್ಮಾಳ್


ಪ್ರವೀಣ್ ಬಿ. ಶೆಟ್ಟಿ


ಅಶೋಕ್ ಪುರೋಹಿತ


ಡಾ. ಆರ್. ಕೆ. ಶೆಟ್ಟಿ

ಸಾಂಸ್ಕೃತಿಕ ಕಾರ್ಯಕ್ರಮದ ಮಧ್ಯಂತರದಲ್ಲಿ ಸಭಾ ಕಾರ್ಯಕ್ರಮ ಜರಗಲಿದ್ದು ಸಭಾ ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ಬಂಟರ ಸಂಘ ಮುಂಬಯಿಯ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ವಹಿಸಲಿದ್ದು, ಅಶೀರ್ವಚನ ನೀಡಲು ಅಂತಾರಾಷ್ಟ್ರೀಯ ವಾಸ್ತುತಜ್ಞ ಅಶೋಕ್ ಪುರೋಹಿತ ಉಪಸ್ಥಿತರಿರುವರು. ಮುಖ್ಯ ಅತಿಥಿಯಾಗಿ ಬಂಟರ ಸಂಘ ಮುಂಬಯಿಯ ಗೌ. ಪ್ರ. ಕಾರ್ಯದರ್ಶಿ ಡಾ. ಆರ್. ಕೆ. ಶೆಟ್ಟಿ ಉಪಸ್ಥಿತರಿರುವರು.

ಅತಿಥಿಗಳಾಗಿ ಬಂಟ್ಸ್ ಎಸೋಸಿಯೇಶನ್ ಮುಂಬಯಿಯ ಮಾಜಿ ಅಧ್ಯಕ್ಷ ಸಿಎ ಸುರೇಂದ್ರ ಶೆಟ್ಟಿ, ಬಿಲ್ಲವರ ಎಸೋಸಿಯೇಶನ್ ಮುಂಬಯಿಯ ಗೌ. ಅಧ್ಯಕ್ಷ ಎಲ್. ವಿ. ಅಮೀನ್, ಅಜಂತಾ ಕ್ಯಾಟರರ್ಸ್‌ನ ಮಾಲಕ ಜಯರಾಮ ಶೆಟ್ಟಿ, ಸದ್ಗುರು ಇಂಟರ್‌ನ್ಯಾಷನಲ್ ಮುಂಬಯಿಯ ಮಾಲಕ ನವೀನ್ ಶೆಟ್ಟಿ ತೋನ್ಸೆ, ಹೋಟೇಲ್ ಗ್ರೀನ್ ಅರ್ಕ್ ಮಾಹಿಮ್‌ನ ಮಾಲಕ ವಿಶ್ವನಾಥ ಶೆಟ್ಟಿ, ವಿಕ್ರೋಲಿ ಕನ್ನಡ ಸಂಘದ ಅಧ್ಯಕ್ಷ ಉದಯ ಶೆಟ್ಟಿ ಪೇಜಾವರ, ಡಾ. ಹರೀಶ್ ಶೆಟ್ಟಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಸೂರಜ್ ಶೆಟ್ಟಿ ಕಾರ್ಯಾಧ್ಯಕ್ಷ ಬಂಟರ ಸಂಘ ಮುಂಬಯಿಯ ಅಂಧೇರಿ - ಬಾಂದ್ರ ಪ್ರಾದೇಶಿಕ ಸಮಿತಿ, ಶಶಿಕಲಾ ಶಂಕರ್ ಪೂಂಜ ಮಾಜಿ ಕಾರ್ಯದರ್ಶಿ ಬಂಟರ ಸಂಘ ಮಹಿಳಾ ವಿಭಾಗ, ಸದಾಶಿವ ಶೆಟ್ಟಿ ಉಪಾಧ್ಯಕ್ಷ ಕನ್ನಡ ಸಂಘ ಸಯನ್, ಬಾಲಕೃಷ್ಣ ಡಿ. ಶೆಟ್ಟಿ ಅಧ್ಯಕ್ಷ ಅಭಿನಯ ಮಂಟಪ ಮುಂಬಯಿ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ಕಲಾ ಸೌರಭದ ಸ್ಥಾಪಕ ಪದ್ಮನಾಭ ಸಸಿಹಿತ್ಲು, ಲೇಖಕಿ, ಕವಿಯತ್ರಿ ವಾಣಿ ಶೆಟ್ಟಿ ಮೂಡುಬಿದ್ರಿ ಮತ್ತು ಸಮಾಜ ಸೇವಕಿ ಶಾಲಿನಿ ಎಸ್. ಶೆಟ್ಟಿ ಸಚ್ಚೇರಿಗುತ್ತು ಅವರನ್ನು ವೇದಿಕೆಯ ಮೇಲೆ ಸನ್ಮಾನಿಸಲಾಗುವುದು ಎಂದು ಸಂಸ್ಥೆಯ ರೂವಾರಿ ಹರೀಶ್ ಶೆಟ್ಟಿ ಎರ್ಮಾಳು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

*Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com*

# ಪ್ರಧಾನಿ ನರೇಂದ್ರ ಮೋದಿ ಜತೆಗೆ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಭೇಟಿ; ಮಹಾರಾಷ್ಟ್ರ ಪರಿಸ್ಥಿತಿ, ಸಮಸ್ಯೆಗಳ ಕುರಿತು ಚರ್ಚೆ





ಹೊಸದಿಲ್ಲಿ,ಮಾ. 17- ಶಿವಸೇನಾ ಮುಖ್ಯಸ್ಥ ಹಾಗೂ ರಾಜ್ಯ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಇಂದು ದಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾದರು. ಇರಾನ್-ಇಸ್ರೇಲ್ ಯುದ್ಧ, ದೇಶೀಯ ಪರಿಸ್ಥಿತಿ ಮತ್ತು ಮಹಾರಾಷ್ಟ್ರದಲ್ಲಿನ ವಿವಿಧ ವಿಷಯಗಳ ಕುರಿತು ಉಭಯ ನಾಯಕರು ವಿವರವಾದ ಚರ್ಚೆ ನಡೆಸಿದರು.

ಯುದ್ಧದಂತಹ ಪರಿಸ್ಥಿತಿಯಲ್ಲಿ ಎನ್‌ಡಿಎಯ ಮಿತ್ರಪಕ್ಷವಾಗಿ ಶಿವಸೇನೆ ಪ್ರಧಾನಿಯವರ ಪಾತ್ರವನ್ನು ಬೆಂಬಲಿಸುತ್ತದೆ ಮತ್ತು ನಾವು ದೇಶದೊಂದಿಗೆ ಇದ್ದೇವೆ ಎಂದು ಉಪಮುಖ್ಯಮಂತ್ರಿ ಶಿಂದೆ ಪ್ರಧಾನಿಗೆ ಭರವಸೆ ನೀಡಿದರು. ಈ ಸಭೆಯ ಬಳಿಕ ಉಪಮುಖ್ಯಮಂತ್ರಿ ಶಿಂದೆ ಮಾಧ್ಯಮಗಳೊಂದಿಗೆ ಸಂವಾದ ನಡೆಸಿದರು.

ಗಲ್ಫ್ ದೇಶಗಳಲ್ಲಿ ಯುದ್ಧದಂತಹ ಪರಿಸ್ಥಿತಿ ಇದ್ದಾಗ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾರತದಲ್ಲಿ ಸುಳ್ಳು ಪ್ರಚಾರವನ್ನು ಹರಡುವ ಮೂಲಕ ರಾಜಕೀಯ ಮಾಡುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಟೀಕಿಸಿದರು. ಕೆಲವರು ಪಾಕಿಸ್ತಾನದಲ್ಲಿ ಮಾತನಾಡುತ್ತಾ ಸುದ್ದಿಯಾಗುತ್ತಾರೆ ಎಂದು ಅವರು ಗಾಂಧಿಯನ್ನು ಲೇವಡಿ ಮಾಡಿದರು.

ಬಾಳಾಸಾಹೇಬರಿಗೆ ದೇಶ ಮೊದಲು ಮತ್ತು ರಾಜಕೀಯ ಎರಡನೇ ಎಂದು ಅವರು ಹೇಳಿದರು. ಇಂದು ನಾವು ಬಾಳಾಸಾಹೇಬ್ ಅವರ ಚಿಂತನೆಗಳೊಂದಿಗೆ ಮುಂದುವರಿಯುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಹೇಳಿದರು.

ಯುದ್ಧದಿಂದಾಗಿ ಕುವೈತ್, ದುಬೈ, ಮಸ್ಕತ್‌ನಲ್ಲಿ ಸಿಲುಕಿಕೊಂಡಿದ್ದ ಮಹಾರಾಷ್ಟ್ರದ ನಾಗರಿಕರನ್ನು ಮುಂಬಯಿ ಮತ್ತು ಪುಣೆಗೆ ಸುರಕ್ಷಿತವಾಗಿ ಕರೆತರಲಾಗಿದೆ ಎಂದು ಅವರು ಪ್ರಧಾನಿಗೆ ತಿಳಿಸಿದರು. ಕೋವಿಡ್ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಗಲ್ಫ್ ರಾಷ್ಟ್ರಗಳೊಂದಿಗೆ ಸ್ಥಾಪಿಸಿರುವ ಉತ್ತಮ ಸಂಬಂಧದಿಂದಾಗಿ ಹಾರ್ಮುಜ್ ಜಲಸಂಧಿಯಿಂದ ಎರಡು ಭಾರತೀಯ ತೈಲ ಟ್ಯಾಂಕರ್‌ಗಳನ್ನು ಸುರಕ್ಷಿತವಾಗಿ ಹಿಂದಿರುಗಿಸಿದ್ದಕ್ಕಾಗಿ ಉಪಮುಖ್ಯಮಂತ್ರಿ ಶಿಂದೆ ಈ ಸಭೆಯಲ್ಲಿ ಪ್ರಧಾನಿಗೆ ಧನ್ಯವಾದ ಅರ್ಪಿಸಿದರು. ರಾಜ್ಯದಲ್ಲಿನ ಅಭಿವೃದ್ಧಿ ಕಾರ್ಯಗಳು ಮತ್ತು ವಿವಿಧ ವಿಷಯಗಳ ಕುರಿತು ಪ್ರಧಾನಿಯೊಂದಿಗೆ ಚರ್ಚೆ ನಡೆಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಯುದ್ಧದಂತಹ ಪರಿಸ್ಥಿತಿಯನ್ನು ವಿರೋಧ ಪಕ್ಷಗಳು ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ. ದೇಶದಲ್ಲಿ ಅನಿಲ ಕೊರತೆ ಇದೆ ಎಂದು ಕಾಂಗ್ರೆಸ್ ಮತ್ತು ಠಾಕ್ರೆಸೇನೆ ವದಂತಿಗಳನ್ನು ಹರಡುತ್ತಿವೆ. ಇದು ಕಾಳಸಂತೆ ಮಾರುಕಟ್ಟೆದಾರರಿಗೆ ಅವಕಾಶ ನೀಡುತ್ತಿದೆ. ರಾಜಕೀಯಕ್ಕೆ ಬೇರೆ ವಿಷಯಗಳಿವೆ, ಆದರೆ ಯುದ್ಧದಂತಹ ಪರಿಸ್ಥಿತಿಯಲ್ಲಿ ದೇಶದೊಂದಿಗೆ ಉಳಿಯುವ ನಿರೀಕ್ಷೆಯಿರುವಾಗ ವಿರೋಧ ಪಕ್ಷಗಳು ರಾಜಕೀಯ ಮಾಡುತ್ತಿವೆ ಎಂದು ಉಪಮುಖ್ಯಮಂತ್ರಿ ಹೇಳಿದರು.

'ಆಪರೇಷನ್ ಸಿಂದೂರ್' ಸಮಯದಲ್ಲಿಯೂ ವಿರೋಧ ಪಕ್ಷಗಳು ಇದೇ ರೀತಿಯ ರಾಜಕೀಯ ಮಾಡಿದ್ದವು. ಪಾಕಿಸ್ತಾನದಲ್ಲಿ ಇದನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಕೆಲವರು ಪಾಕಿಸ್ತಾನದಲ್ಲಿ ಸುದ್ದಿಯಾಗಲು ಮಾತನಾಡುತ್ತಾರೆ ಎಂದು ಶಿಂದೆ ಗಾಂಧಿಯವರನ್ನು ಕಟುವಾಗಿ ಟೀಕಿಸಿದರು.

ದೇಶದಲ್ಲಿ ಅನಿಲ ಕೊರತೆಯ ವಿಷಯದ ಬಗ್ಗೆ ದೃಢ ನಿಲುವು ತೆಗೆದುಕೊಳ್ಳುವಂತೆ ಮತ್ತು ಸದನದಲ್ಲಿ ವಿರೋಧ ಪಕ್ಷಗಳು ಹರಡುತ್ತಿರುವ ಸುಳ್ಳು ಪ್ರಚಾರವನ್ನು ತಡೆಯಲು ಉಪಮುಖ್ಯಮಂತ್ರಿ ಶಿವಸೇನಾ ಸಂಸದರಿಗೆ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಎಲ್ಲಿಯೂ ಅನಿಲ ಸಿಲಿಂಡರ್‌ಗಳ ಕೊರತೆಯಿಲ್ಲ.ಕಾಳಸಂತೆ ಮಾರುಕಟ್ಟೆಯನ್ನು ತಡೆಗಟ್ಟಲು ಸರಕಾರ ಶ್ರದ್ಧೆಯಿಂದ ಕೆಲಸ ಮಾಡುತ್ತಿದೆ ಎಂದು ಅವರು ಹೇಳಿದರು.

ಡಾ. ಜ್ಯೋತಿ ವಾಘ್ಮಾರೆ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.ಅವರು ಹೆಚ್ಚು ವಿದ್ಯಾವಂತರು ಮತ್ತು ಬಡವರ ಸಮಸ್ಯೆಗಳ ಬಗ್ಗೆ ತಿಳಿದಿದ್ದಾರೆ ಎಂದು ಅವರು ಹೇಳಿದರು. ಶಿವಸೇನಾ ಸಂಸದೀಯ ಪಕ್ಷದ ನಾಯಕ ಸಂಸದ ಡಾ. ಶ್ರೀಕಾಂತ್ ಶಿಂದೆ, ನರೇಶ್ ಮಸ್ಕೆ, ಮಿಲಿಂದ್ ದಿಯೋರಾ, ಧೈರ್ಯಶೀಲ ಮಾನೆ, ಶ್ರೀರಂಗ್ ಬರ್ನೆ ಮತ್ತು ರವೀಂದ್ರ ವಾಯ್ಕರ್ ಅವರು ಪ್ರಧಾನಿಯವರೊಂದಿಗಿನ ಸಭೆಯಲ್ಲಿ ಉಪಸ್ಥಿತರಿದ್ದರು.

ಉಪಮುಖ್ಯಮಂತ್ರಿ ಶಿಂದೆ ಅವರು ಸಂಸತ್ತಿನ ಸ್ಪೀಕರ್ ಕಚೇರಿಯಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಕಿರಣ್ ರಿಜಿಜು ಮತ್ತು ಪಿಯೂಷ್ ಗೋಯಲ್ ಉಪಸ್ಥಿತರಿದ್ದರು. ಇದಕ್ಕೂ ಮೊದಲು, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಉಪಮುಖ್ಯಮಂತ್ರಿ ಶಿಂದೆ ಅವರನ್ನು ಸಂಸತ್ ಭವನದಲ್ಲಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ, ಸಚಿವ ರಿಜಿಜು ಅವರು ಶಿವಸೇನಾ ಸಂಸದ ಡಾ. ಶ್ರೀಕಾಂತ್ ಶಿಂದೆ ಅವರ ಲೋಕಸಭೆಯ ಕಾರ್ಯಕ್ಷಮತೆಯನ್ನು ಶ್ಲಾಘಿಸಿದರು. ಶ್ರೀಕಾಂತ್ ಅವರು ತನ್ನ ಕಿರಿಯ ಸಹೋದರರಾಗಿದ್ದು, ಸದನದಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ರಿಜಿಜು ಹೇಳಿದರು.

# 'ಆಹಾರ್' ನಿಯೋಗದಿಂದ ಸಚಿವ ಭುಜಬಲ್ ಭೇಟಿ; ಎಲ್‌ಪಿಜಿ ಸಿಲಿಂಡರ್ ಕೊರತೆ ಬಗ್ಗೆ ಚರ್ಚೆ



ಮುಂಬಯಿ,ಮಾ.17- ಇಂಡಿಯನ್ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಶನ್ (ಆಹಾರ್) ಇದರ ನಿಯೋಗವೊಂದು ಅದರ ಅಧ್ಯಕ್ಷರಾದ ವಿಜಯ್ ಕೆ.ಶೆಟ್ಟಿ ಅವರ ನೇತೃತ್ವದಲ್ಲಿ ಮಾ.16 ರಂದು ಮಹಾರಾಷ್ಟ್ರ ಸರಕಾರದ ನಾಗರಿಕ ಆಹಾರ ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಛಗನ್ ಭುಜಬಲ್ ಅವರನ್ನು ಭೇಟಿ ಮಾಡಿತು.

ವಿಜಯ್ ಶೆಟ್ಟಿ ಅವರ ಜತೆಗೆ 'ಆಹಾರ್'ನ ಪ್ರಧಾನ ಕಾರ್ಯದರ್ಶಿ ಸುನೀಲ್ ಶೆಟ್ಟಿ ಮತ್ತು ವಲಯ 1ರ ಉಪಾಧ್ಯಕ್ಷ ಮಹೇಂದ್ರ ಕರ್ಕೇರ ನಿಯೋಗದಲ್ಲಿ ಉಪಸ್ಥಿತರಿದ್ದರು.

ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಿಂದಾಗಿ ನಮ್ಮ ಉದ್ಯಮವು ಎದುರಿಸುತ್ತಿರುವ ಸವಾಲುಗಳ ಕುರಿತು ನಾವು ಗೌರವಾನ್ವಿತ ಸಚಿವರೊಂದಿಗೆ ತುಂಬಾ ಸೌಹಾರ್ದಯುತ ಮತ್ತು ರಚನಾತ್ಮಕ ಚರ್ಚೆ ನಡೆಸಿದ್ದೇವೆ. ಸಭೆಯ ಸಮಯದಲ್ಲಿ ಮಾ.14ರಂದು ಹೊರಡಿಸಲಾದ ಹೊಸ ಸುತ್ತೋಲೆಯ ಪ್ರಕಾರ, ಈ ವಿಷಯವು ಪ್ರಸ್ತುತ ಇಲಾಖೆಯ ನೇರ ನಿಯಂತ್ರಣಕ್ಕೆ ಮೀರಿದೆ ಎಂದು ಸಚಿವರು ನಮಗೆ ನಯವಾಗಿ ತಿಳಿಸಿದ್ದಾಗಿ 'ಆಹಾರ್' ಅಧ್ಯಕ್ಷ ವಿಜಯ್ ಕೆ. ಶೆಟ್ಟಿ ಅವರು ಸಭೆ ಬಳಿಕ ತಿಳಿಸಿದರು.

ರೆಸ್ಟೋರೆಂಟ್‌ಗಳಲ್ಲಿ ನಮ್ಮೊಂದಿಗೆ ವಾಸಿಸುವ ನಮ್ಮ ಸಿಬ್ಬಂದಿಗಳ ಗಂಭೀರ ಸಮಸ್ಯೆ ಮತ್ತು ಅವರಿಗೆ ದೈನಂದಿನ ಊಟವನ್ನು ಒದಗಿಸುವ ನಮ್ಮ ಜವಾಬ್ದಾರಿಯನ್ನು ಕೂಡ ನಾವು ಸಚಿವರ ಮುಂದೆ ಎತ್ತಿ ತೋರಿಸಿದ್ದೇವೆ.ಗೌರವಾನ್ವಿತ ಸಚಿವರು ಈ ಪರಿಸ್ಥಿತಿಯ ಗಂಭೀರತೆಯನ್ನು ತುಂಬಾ ಅರ್ಥಮಾಡಿಕೊಂಡು ಅದನ್ನು ಒಪ್ಪಿಕೊಂಡರು.

ಈ ಕಠಿಣ ಪರಿಸ್ಥಿತಿಯಲ್ಲಿ ರೆಸ್ಟೋರೆಂಟ್ ಉದ್ಯಮಕ್ಕೆ ಸ್ವಲ್ಪ ಪರಿಹಾರ ಅಥವಾ ಪರಿಗಣನೆಯನ್ನು ನೀಡಲು ಸಾಧ್ಯವಾಗುವಂತೆ ಕೇಂದ್ರ ಸರಕಾರದ ಸಂಬಂಧಿತ ಇಲಾಖೆಯ ಮುಂದೆ ನಮ್ಮ ಕಾಳಜಿ ಮತ್ತು ಶಿಫಾರಸುಗಳನ್ನು ಇಡುವುದಾಗಿ ಅವರು ನಮಗೆ ಭರವಸೆ ನೀಡಿದರು ಎಂದು 'ಆಹಾರ್' ಅಧ್ಯಕ್ಷರು ಹೇಳಿದರು.

# ವೀಸಾ ನಿಯಮ ಉಲ್ಲಂಘಿಸುವ ವಿದೇಶಿ ಪ್ರಜೆಗಳ ಪತ್ತೆಗೆ ಹೊಸ ಕಾರ್ಯವಿಧಾನ ಜಾರಿಯಲ್ಲಿದೆ : ಫಡ್ನವೀಸ್

ಮುಂಬಯಿ, ಮಾ.17 - ವೀಸಾ ಅವಧಿ ಮುಗಿದ ಬಳಿಕ ಅಥವಾ ಅದರ ಷರತ್ತುಗಳನ್ನು ಉಲ್ಲಂಘಿಸುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಲು ವಲಸೆ ದಾಖಲೆಗಳನ್ನು ಸಮನ್ವಯಗೊಳಿಸಲು ರಾಜ್ಯ ಸರಕಾರವು ಒಂದು ಕಾರ್ಯವಿಧಾನವನ್ನು ಆರಂಭಿಸಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.

ರಾಜ್ಯ ವಿಧಾನಸಭೆಯಲ್ಲಿ ಮಾತನಾಡಿದ ಫಡ್ನವೀಸ್ ಅವರು, ರಾಜ್ಯದಲ್ಲಿ ಮಾದಕವಸ್ತು ಸಂಬಂಧಿತ ಪ್ರಕರಣಗಳಲ್ಲಿ ಸಿಕ್ಕಿಬಿದ್ದ 69 ವಿದೇಶಿ ಪ್ರಜೆಗಳನ್ನು ಸರಕಾರ ಈಗಾಗಲೇ ಗುರುತಿಸಿ ಅವರನ್ನು ಗಡೀಪಾರು ಮಾಡಿದೆ, ಆದರೆ 122 ಜನರನ್ನು ಬಂಧನ ಕೇಂದ್ರಗಳಿಗೆ ಕಳುಹಿಸಲಾಗಿದೆ ಎಂದು ಹೇಳಿದರು.

ಸಣ್ಣ ಅಪರಾಧಗಳನ್ನು ಎಸಗುವವರನ್ನು ದೇಶದಲ್ಲಿ ತಮ್ಮ ವಾಸ್ತವ್ಯವನ್ನು ವಿಸ್ತರಿಸಲು ತಕ್ಷಣ ಗಡೀಪಾರು ಮಾಡಲು ಕೇಂದ್ರ ಸರಕಾರ ನಿರ್ದೇಶಿಸಿದೆ ಎಂದು ಅವರು ಮಾಹಿತಿ ನೀಡಿದರು.

ಹಲವಾರು ವಿದೇಶಿ ಪ್ರಜೆಗಳು ಮಾನ್ಯ ಪಾಸ್‌ಪೋರ್ಟ್‌ಗಳು ಮತ್ತು ವೀಸಾಗಳಲ್ಲಿ, ವಿಶೇಷವಾಗಿ ಅಲ್ಪಾವಧಿಯ ವೈದ್ಯಕೀಯ ವೀಸಾಗಳಲ್ಲಿ ಭಾರತವನ್ನು ಪ್ರವೇಶಿಸುತ್ತಾರೆ, ಆದರೆ ಬಳಿಕ ಪತ್ತೆಹಚ್ಚುವುದನ್ನು ತಪ್ಪಿಸಲು ಅವರ ದಾಖಲೆಗಳನ್ನು ತ್ಯಜಿಸುತ್ತಾರೆ ಎಂದು ಮುಖ್ಯಮಂತ್ರಿ ವಿವರಿಸಿದರು.

'ಅವರು ತಮ್ಮ ವೀಸಾ ಅವಧಿ ಮುಗಿದ ಬಳಿಕವೂ ಅಲ್ಲಿಯೇ ಇರುತ್ತಾರೆ. ವಲಸೆ ದತ್ತಾಂಶವನ್ನು ಸಮನ್ವಯಗೊಳಿಸಲು ನಮ್ಮಲ್ಲಿ ಈ ಹಿಂದೆ ಯಾವುದೇ ವ್ಯವಸ್ಥೆ ಇರಲಿಲ್ಲ, ಆದರೆ ಈಗ ಮುಂಬಯಿಯಲ್ಲಿ ಅಂತಹ ಕಾರ್ಯವಿಧಾನವನ್ನು ಪರಿಚಯಿಸುತ್ತಿದ್ದೇವೆ' ಎಂದು ಅವರು ಹೇಳಿದರು.

ಅಕ್ರಮವಾಗಿ ವಸ್ತುಗಳನ್ನು ಮಾರಾಟ ಮಾಡುವ ಮತ್ತು ಅನುಮತಿಸಲಾದ ಸಮಯಕ್ಕಿಂತ ಹೆಚ್ಚು ಸಮಯ ಕಾರ್ಯನಿರ್ವಹಿಸುವ ಕೆಫೆಗಳು ಮತ್ತು ಅಂಗಡಿಗಳ ವಿರುದ್ಧ ಕಠಿಣ ಕ್ರಮಗಳನ್ನು ಫಡ್ನವೀಸ್ ಘೋಷಿಸಿದರಲ್ಲದೆ, ಅಂತಹ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು, ಅವುಗಳ ವ್ಯಾಪಾರ ಪರವಾನಗಿಗಳನ್ನು ರದ್ದುಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಪ್ರಸ್ತುತ, ಅಂತಹ ಉಲ್ಲಂಘನೆಗಳಿಗೆ ಪರವಾನಗಿಗಳನ್ನು ಅಮಾನತುಗೊಳಿಸಲಾಗಿದೆ. ಆದಾಗ್ಯೂ, ಪುನರಾವರ್ತಿತ ಉಲ್ಲಂಘನೆಗಳು ಪರವಾನಗಿಗಳ ಶಾಶ್ವತ ರದ್ದತಿಗೆ ಕಾರಣವಾಗುವ ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ ಎಂದು ಅವರು ಹೇಳಿದರು.

ಹಿಂದೆ ಹೆಚ್ಚಾಗಿ ಬಾರ್‌ಗಳಿಗೆ ಸೀಮಿತವಾಗಿದ್ದ ಕಾನೂನುಬಾಹಿರ ಚಟುವಟಿಕೆಗಳು ಈಗ ಕೆಫೆಗಳಲ್ಲಿಯೂ ಹೆಚ್ಚಾಗಿ ವರದಿಯಾಗುತ್ತಿವೆ ಎಂದು ಅವರು ತಿಳಿಸಿದರು.

ಪಾಲ್ಘರ್ ಜಿಲ್ಲೆಯ ವಸಾಯಿ-ವಿರಾರ್‌ಪ್ರದೇಶದಲ್ಲಿ 30 ದಾಳಿಗಳನ್ನು ನಡೆಸಿ 11 ಕೋಟಿ ರೂ. ಮೌಲ್ಯದ ಮಾದಕ ದ್ರವ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಉಲ್ಲೇಖಿಸಿದರು.

ಇದರಲ್ಲಿ ಭಾಗಿಯಾಗಿರುವ ಪೊಲೀಸ್ ಸಿಬ್ಬಂದಿ ವಿರುದ್ಧ ಮಾತ್ರವಲ್ಲದೆ, ರಕ್ಷಣೆ ನೀಡುವ ಅಥವಾ ಅಪರಾಧ ಜಾಲಗಳ ವಿರುದ್ಧ ಕ್ರಮ ಕೈಗೊಳ್ಳಲು ವಿಫಲರಾದ ಹಿರಿಯ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.


पुण्य नगरी

EXCELLENT CAREER OPPORTUNITY AT PUNYANAGARI GROUP

A Leading Media House in Maharashtra with a powerful presence across multiple languages through our prestigious publications:

We are looking for dynamic, result-oriented, and experienced professionals to join our **Mumbai Office** for the following positions:

**1) RECOVERY MANAGER**

- **Experience:** 5 to 6 years of core experience in Debit - Credit Control & Recovery.
- **Key Responsibilities:** Managing large-scale recoveries, handling TDS & GST account settlements, and overseeing accounts up to Finalization.
- **Expertise:** Deep knowledge of Legal Frameworks related to recovery and financial settlements is essential.

**2) RECOVERY EXECUTIVES (Field)**

- **Experience:** 2 to 3 years in field recovery.
- **Key Responsibilities:** On-field coordination for payment collection and client follow-ups.
- **Skills:** Strong understanding of Debtors & Creditors, Banking transactions, and excellent negotiation skills.

**3) BACK OFFICE EXECUTIVE**

- **Technical Skills:** Proficiency in 4C Software, Tally Prime and Advanced Excel.
- **Expectations:** Efficient data management, reporting, and supporting the recovery team with accurate financial documentation.

HOW TO APPLY?

If you have the drive to perform and the expertise to deliver, we want to hear from you!

- Location: **Mumbai**
- Contact: **+91 7720898111**
- Email your Resume to: **hr.mumbai@sapp.in**

Join the leaders of the print media industry and take your career to the next level!


# ಅಬಕಾರಿ ಪರವಾನಗಿ ಶುಲ್ಕ ಏರಿಕೆ ವಿರುದ್ಧ ಹೈಕೋರ್ಟಿಗೆ ನವಿಮುಂಬಯಿ ಹೊಟೇಲ್ ಮಾಲಿಕರ ಸಂಘ ದೂರು ಸಲ್ಲಿಕೆ

ಮುಂಬಯಿ, ಮಾ. 17- ಮಹಾರಾಷ್ಟ್ರ ಸರಕಾರ ಪ್ರತೀವರ್ಷ ಹೊಟೇಲ್ ಮತ್ತು ರೆಸ್ಟೋರೆಂಟ್‌ಗಳ ಮದ್ಯ ಮಾರಾಟ ಅಬಕಾರಿ ಪರವಾನಗಿಗಳ ಶುಲ್ಕವನ್ನು ಏರಿಸುತ್ತಿರುವುದನ್ನು ಆಕ್ಷೇಪಿಸಿ ನವಿಮುಂಬಯಿ ಹೊಟೇಲ್ ಮಾಲಿಕರ ಸಂಘ ಮಾರ್ಚ್ 17ರಂದು ಬಾಂಬೇ ಹೈಕೋರ್ಟಿಗೆ ದೂರು ಸಲ್ಲಿಸಿದೆ.

ರಾಜ್ಯ ಸರಕಾರವು ಪ್ರತೀವರ್ಷವೂ ಮದ್ಯ ಪರವಾನಗಿ ಶುಲ್ಕವನ್ನು ಏರಿಸುತ್ತಲೇ ಇದ್ದು ಇದು ಸಾಮಾನ್ಯ ಹೊಟೇಲ್ ಮತ್ತು ರೆಸ್ಟೋರೆಂಟ್‌ಗಳ ಉದ್ಯಮದ ಮೇಲೆ ತೀವ್ರ ಪರಿಣಾಮ ಬೀರುತ್ತಿದ್ದು, ಸರಕಾರವು ವರ್ಷಂಪ್ರತಿ ಮದ್ಯ ಮಾರಾಟ ಶುಲ್ಕ ಏರಿಕೆ ಮಾಡುವುದನ್ನು ನಿರ್ಬಂಧಿಸಬೇಕು ಎಂದು ಹೈಕೋರ್ಟಿನಲ್ಲಿ ದಾವೆ ಸಲ್ಲಿಸಿರುವುದಾಗಿ ನವಿಮುಂಬಯಿ ಹೊಟೇಲ್ ಓನರ್ಸ್ ಎಸೋಸಿಯೇಶನ್ ಅಧ್ಯಕ್ಷ ದಯಾನಂದ ಶೆಟ್ಟಿ ತಿಳಿಸಿದ್ದಾರೆ.

ನವಿಮುಂಬಯಿ ಹೊಟೇಲ್ ಮಾಲಿಕರ ಸಂಘವು ಆರಂಭಿಸಿರುವ ಈ ಕಾನೂನು ಹೋರಾಟಕ್ಕೆ ಮಹಾರಾಷ್ಟ್ರದ ಎಲ್ಲ ಹೊಟೇಲ್ ಉದ್ಯಮಿಗಳ ಸಂಘಗಳು ಮತ್ತು ಹೊಟೇಲಿಗರು ಕಾನೂನು ಬೆಂಬಲ ಮತ್ತು ಸಹಕಾರ ನೀಡಿ ಹೊಟೇಲ್ ಉದ್ಯಮದ ಕಾನೂನು ಹೋರಾಟಕ್ಕೆ ಜತೆಯಾಗುವಂತೆ ಮಹಾರಾಷ್ಟ್ರ ಹೊಟೇಲ್ ಮತ್ತು ರೆಸ್ಟೋರೆಂಟ್ ಎಸೋಸಿಯೇಶನ್‌ಗಳ ಫೆಡರೇಶನ್ ಉಪಾಧ್ಯಕ್ಷರೂ ಆಗಿರುವ ದಯಾನಂದ್ ಶೆಟ್ಟಿ ವಿನಂತಿಸಿಕೊಂಡಿದ್ದಾರೆ.

ಹೈಕೋರ್ಟಿನಲ್ಲಿ ಸಲ್ಲಿಸಿರುವ ದಾವೆಯ ವಿಚಾರಣೆ ನಡೆದು ನ್ಯಾಯಾಲಯದಿಂದ ಸ್ಪಷ್ಟವಾದ ಆದೇಶ ಬರುವ ತನಕ ಅಬಕಾರಿ ಪರವಾನಗಿ ಶುಲ್ಕವನ್ನು ಭರಿಸಿ ಪರವಾನಗಿ ನವೀಕರಿಸಿಕೊಳ್ಳದಂತೆಯೂ ಅವರು ಹೊಟೇಲ್ ಮತ್ತು ರೆಸ್ಟೋರೆಂಟ್ ಉದ್ಯಮಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಹೊಟೇಲ್ ಉದ್ಯಮವು ಹತ್ತಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ನಡುವೆ ಪ್ರಸಕ್ತ ಗಲ್ಫ್ ಯುದ್ಧದ ಕಾರಣದಿಂದಾಗಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಕೊರತೆ ಹೊಟೇಲ್‌ಗಳನ್ನು ಮುಚ್ಚುವ ಸ್ಥಿತಿಗೆ ತಂದಿಟ್ಟಿದೆ. ಇದರಿಂದಾಗಿ ಹೊಟೇಲ್‌ಗಳ ಸಂಘಟಿತ ಕಾನೂನು ಹೋರಾಟವೊಂದೇ ಪರ್ಯಾಯವಾಗಿದೆ ಎಂದೂ ಅವರು ಹೇಳಿದ್ದಾರೆ.

# 80 ಬಳಕೆಯಲ್ಲಿಲ್ಲದ ಕಾಯ್ದೆ-ಕಾನೂನುಗಳ ರದ್ದುಗೊಳಿಸುವ ಮಸೂದೆಗೆ ಮಹಾ ವಿಧಾನಸಭೆ ಅಂಗೀಕಾರ

ಮುಂಬಯಿ, ಮಾ.17 - ಮಹಾರಾಷ್ಟ್ರದಲ್ಲಿ ಬಳಕೆಯಲ್ಲಿಲ್ಲದ 80 ಕಾಯ್ದೆ-ಕಾನೂನುಗಳನ್ನು ರದ್ದುಗೊಳಿಸುವ ಮಸೂದೆಯನ್ನು ಮಂಗಳವಾರ ಶಾಸಕಾಂಗ ಸಭೆಯಲ್ಲಿ ಅಂಗೀಕರಿಸಲಾಗಿದ್ದು,ಇದು ಉತ್ತಮ ಆಡಳಿತವನ್ನು ಬಲಪಡಿಸುವ ಮತ್ತು ಆಡಳಿತ ಪ್ರಕ್ರಿಯೆಗಳನ್ನು ಸುಗಮಗೊಳಿಸುವತ್ತ ಮಹತ್ವದ ಹೆಜ್ಜೆಯಾಗಿದೆ ಎಂದು ಸಚಿವ ಆಶಿಶ್ ಶೇಲಾರ್‌ಹೇಳಿದರು. ಮಹಾರಾಷ್ಟ್ರ ರದ್ದತಿ ಮಸೂದೆ, 2026ನ್ನು ಸಾಮಾನ್ಯ ಆಡಳಿತದ ಉಸ್ತುವಾರಿ ಹೊಂದಿರುವ ಶೇಲಾರ್‌ಅವರು ಸದನದಲ್ಲಿ ಪರಿಚಯಿಸಿದರು.

ಸಾಂವಿಧಾನಿಕ ಬದಲಾವಣೆಗಳು, ರಾಜ್ಯಗಳ ಮರುಸಂಘಟನೆ ಮತ್ತು ಹೊಸ ಕಾನೂನುಗಳನ್ನು ಜಾರಿಗೆ ತಂದ ಕಾರಣ, ಮಹಾರಾಷ್ಟ್ರದಲ್ಲಿ ಹಲವಾರು ಕಾಯ್ದೆಗಳು ಅನಗತ್ಯವಾಗಿವೆ ಎಂದು ಅವರು ಹೇಳಿದರು. ಇಂತಹ ಹಳೆಯ ಕಾನೂನುಗಳ ಉಲ್ಲೇಖಗಳನ್ನು ಉಳಿಸಿಕೊಳ್ಳುವುದು ಆಡಳಿತದಲ್ಲಿ ಅಸ್ಪಷ್ಟತೆಗೆ ಕಾರಣವಾಗುತ್ತಿದೆ. ಇದನ್ನು ಪರಿಹರಿಸಲು ರಾಜ್ಯ ಸರಕಾರವು ಅಸ್ತಿತ್ವದಲ್ಲಿರುವ ಎಲ್ಲಾ ರಾಜ್ಯ ಕಾನೂನುಗಳ ಸಮಗ್ರ ಪರಿಶೀಲನೆಯನ್ನು ಕೈಗೊಂಡಿತು ಮತ್ತು ಬಾಂಬೆ, ಬಂಗಾಳ, ಕೇಂದ್ರ ಪ್ರಾಂತ್ಯಗಳು ಮತ್ತು ಬೇರಾರ್, ಹೈದರಾಬಾದ್ ಮತ್ತು ಮಧ್ಯಪ್ರದೇಶ ಪ್ರದೇಶಗಳ ಕಾಯ್ದೆಗಳು ಮತ್ತು ನಿಯಮಗಳನ್ನು ಒಳಗೊಂಡಂತೆ ಬಳಕೆಯಲ್ಲಿಲ್ಲದ ಕಾನೂನುಗಳನ್ನು ರದ್ದುಗೊಳಿಸಲು ಸರಕಾರ ನಿರ್ಧರಿಸಿತು ಎಂದು ಸಚಿವರು ಹೇಳಿದರು.

ರದ್ದುಪಡಿಸಲಾದ 80 ಕಾನೂನುಗಳಲ್ಲಿ 24 ಬಾಂಬೆ ಕಾಯ್ದೆಗಳು, 8 ಕೇಂದ್ರ ಪ್ರಾಂತ್ಯಗಳು ಮತ್ತು ಬೇರಾರ್ ಕಾಯ್ದೆಗಳು, 18 ಹೈದರಾಬಾದ್ ಕಾಯ್ದೆಗಳು, 3 ಮಧ್ಯಪ್ರದೇಶ ಕಾಯ್ದೆಗಳುಮತ್ತು 24 ವಿನಿಯೋಗ ಕಾಯ್ದೆಗಳು ಸೇರಿವೆ.

ರದ್ದುಪಡಿಸಲಾದ ಕಾನೂನುಗಳಲ್ಲಿ ಬಂಗಾಳ ಮೆಕ್ಕಲು ಮತ್ತು ದಿಲುವಿಯನ್ ನಿಯಂತ್ರಣ, 1825, ಬಾಂಬೆ ಅಬ್ಕಾರಿ ಕಾಯ್ದೆ, 1878, ಬೋರ್ಸ್ಟಲ್ ಶಾಲೆಗಳ ಕಾಯ್ದೆ 1929, ಮಹಾರಾಷ್ಟ್ರ ಅಫೀಮು ಧೂಮಪಾನ ಕಾಯ್ದೆ, ಬಾಂಬೆ ಮೇವು ಮತ್ತು ಧಾನ್ಯ ನಿಯಂತ್ರಣ ಕಾಯ್ದೆ 1939, ಬಾಂಬೆ ಹತ್ತಿ ನಿಯಂತ್ರಣ ಕಾಯ್ದೆ 1942, ಮತ್ತು ಬಾಂಬೆ ಚಾಟಿ ಬೀಸುವಿಕೆಯ ನಿರ್ಮೂಲನೆ ಕಾಯ್ದೆ 1957 ಪ್ರಮುಖವಾಗಿವೆ.

# ಬಿಜೆಪಿ ಎಂಎಲ್‌ಎ ಮಂದಾ ಮ್ಹಾತ್ರೆಗೆ ಹೃದಯಾಘಾತ; ಥಾಣೆ ಆಸ್ಪತ್ರೆಗೆ ದಾಖಲು

ಮುಂಬಯಿ,ಮಾ.17 - ನವಿಮುಂಬಯಿಯ ಬೇಲಾಪುರದ ಬಿಜೆಪಿ ಶಾಸಕಿ ಮಂದಾ ಮ್ಹಾತ್ರೆ ಅವರನ್ನು ಹೃದಯಾಘಾತಕ್ಕೆ ಸಂಬಂಧಿಸಿ ಥಾಣೆ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಮ್ಹಾತ್ರೆ ಅವರ ಆರೋಗ್ಯ ಸ್ಥಿತಿಯ ಬಗ್ಗೆ ತಿಳಿದುಕೊಂಡು ಅವರ ಆರೋಗ್ಯ ವಿಚಾರಿಸಲು ವೀಡಿಯೊ ಕರೆಯ ಮೂಲಕ ಅವರೊಂದಿಗೆ ಮಾತನಾಡಿದರು. 2024ರ ವಿಧಾನಸಭಾ ಚುನಾವಣೆಯಲ್ಲಿ ಮ್ಹಾತ್ರೆ ಅವರು ಬಿಜೆಪಿ ನಾಯಕ ಹಾಗೂ ನವಿಮುಂಬಯಿಯ ಪ್ರಬಲ ನಾಯಕ ಗಣೇಶ್ ನ್ಯಾಕ್ ಅವರ ಪುತ್ರ ಸಂದೀಪ್ ನ್ಯಾಕ್ ಅವರನ್ನು ಸೋಲಿಸಿದ್ದರು. ಸಂದೀಪ್ ನ್ಯಾಕ್ ಅವರು ಎನ್‌ಸಿಪಿ (ಎಸ್‌ಪಿ) ಟಿಕೆಟ್‌ನಲ್ಲಿ ಸ್ಪರ್ಧಿಸಿದ್ದರು.ಶಿಂದೆ ಮತ್ತು ಗಣೇಶ್ ನ್ಯಾಕ್ ರಾಜಕೀಯ ಪ್ರತಿಸ್ಪರ್ಧಿಗಳು.




**ಕಳೆದ 15 ದಿನಗಳಿಂದ ನಡೆಯುತ್ತಿರುವ ಇರಾನ್ - ಇಸ್ರೇಲ್ ಯುದ್ಧದಿಂದಾಗಿ ವಾಣಿಜ್ಯ ಅಡುಗೆ ಅನಿಲದ ಕೊರತೆ ಕಲ್ಯಾಣ್ ಮಹಾನಗರದ ಹೊಟೇಲ್ ಉದ್ಯಮಕ್ಕೂ ತಗಲಿದ್ದು, ಕಲ್ಯಾಣ್‌ನ ಪ್ರಸಿದ್ಧ ಹೊಟೇಲ್, ರೆಸ್ಟೋರೆಂಟ್‌ಗಳು ಬಾಗಿಲು ಮುಚ್ಚಿವೆ.**

# ಕಾಬೂಲ್ ಡ್ರಗ್ಸ್ ರೋಗಿಗಳ ಚಿಕಿತ್ಸಾ ಕೇಂದ್ರದ ಮೇಲೆ ಪಾಕಿಸ್ತಾನದ ಬಾಂಬು ದಾಳಿ; 400 ಬಲಿ, 250 ಗಾಯ

ಇಸ್ಲಾಮಾಬಾದ್ / ಕಾಬೂಲ್, ಮಾ. 17- ಅಫ್ಘಾನಿಸ್ತಾನದ ರಾಜಧಾನಿ ಕಾಬೂಲಿನಲ್ಲಿ ಡ್ರಗ್ಸ್ ಪೀಡಿತರ ಚಿಕಿತ್ಸಾ ಆಸ್ಪತ್ರೆಯೊಂದರ ಮೇಲೆ ಪಾಕಿಸ್ತಾನ ನಡೆಸಿರುವ ಬಾಂಬು ದಾಳಿಗೆ ಕನಿಷ್ಠ 400 ಜನರು ಸಾವನ್ನಪ್ಪಿದ್ದು ಇತರ 250 ಹೆಚ್ಚು ಜನರು ಗಾಯಗೊಂಡಿದ್ದಾರೆಂದು ವರದಿಗಳು ಹೇಳಿವೆ.

ಅಫ್ಘಾನಿಸ್ಥಾನದಾದ್ಯಂತ ಇರುವ ತಾಲಿಬಾನ್ ಉಗ್ರರ ನೆಲೆಗಳ ಮೇಲೆ ನಡೆಸಿರುವ ದಾಳಿಯಲ್ಲಿ ಉಂಟಾಗಿರುವ ಸಾವು ನೋವುಗಳು ಇದು ಎಂದು ಪಾಕಿಸ್ತಾನ ಹೇಳಿಕೊಂಡಿದ್ದರೆ, ಪಾಕಿಸ್ತಾನವು ಡ್ರಗ್ಸ್ ಪೀಡಿತರಿಗೆ ಚಿಕಿತ್ಸೆ ನೀಡುತ್ತಿದ್ದ ಪುನರ್ವಸತಿ ಆಸ್ಪತ್ರೆ ಮೇಲೆ ಪಾಕಿಸ್ತಾನದ ಬಾಂಬು ದಾಳಿ ಇದಾಗಿದೆ ಎಂದು ಅಫ್ಘಾನಿಸ್ಥಾನ ಹೇಳಿದೆ.



ಫೆಬ್ರವರಿ 26ರಂದು ಪಾಕಿಸ್ತಾನದ ಮಿಲಿಟರಿ ತಾಲಿಬಾನಿಗಳು ಎರಡು ದೇಶಗಳ ಗಡಿಯುದ್ದಕ್ಕೂ ನಡೆಸಿದ್ದ ದಾಳಿಗಳಿಗೆ ಪ್ರತಿಯಾಗಿ ಆರಂಭಿಸಿದ್ದ ಆಪರೇಷನ್ ಘಜಬ್ ಅಲ್ ಹಕ್‌ನ ಮುಂದುವರಿದ ಭಾಗವಾಗಿ ಸೋಮವಾರ ರಾತ್ರಿ ಕಾಬೂಲ್ ಮತ್ತು ನಂಗರ್‌ಹಾರ್ ತಾಲಿಬಾನ್ ಭಯೋತ್ಪಾದಕ ನೆಲೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಪಾಕಿಸ್ತಾನದ ವಾರ್ತಾ ಮಂತ್ರಿ ಅತ್ತಾವುಲ್ಲಾ ತರಾರ್ ಎಕ್ಸ್‌ನಲ್ಲಿ ಹೇಳಿದ್ದಾರೆ.

ಈ ಯಶಸ್ವೀ ಕಾರ್ಯಾಚರಣೆಯಲ್ಲಿ ಕಾಬೂಲಿನ ಎರಡು ಕಡೆಗಳಲ್ಲಿ ಅಫ್ಘಾನ್ ತಾಲಿಬಾನ್ ಉಗ್ರರ ತಾಂತ್ರಿಕ ಮೂಲ ಸೌಕರ್ಯ ಮತ್ತು ಸ್ಫೋಟಕ ಹಾಗೂ ಇತರ ಸಾಮಗ್ರಿ ಸಂಗ್ರಹ ನೆಲೆಗಳನ್ನು ಸಂಪೂರ್ಣ ನಾಶ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ನಂಗರ್‌ಹಾರ್‌ನಲ್ಲಿರುವ ಅಫ್ಘಾನ್ ತಾಲಿಬಾನ್ ಉಗ್ರರ ನೆಲೆಗಳು ಮತ್ತು ತಾಲಿಬಾನ್ ಮಿಲಿಟರಿ ಶಸ್ತ್ರಾಸ್ತ್ರ ಸಂಗ್ರಹ ಕೇಂದ್ರವು ದಾಳಿಯಲ್ಲಿ ನಾಶವಾಗಿದೆ ಎಂದು ತರಾರ್ ಹೇಳಿದ್ದಾರ.

ಆದರೆ ಪಾಕಿಸ್ತಾನದ ಹೇಳಿಕೆಯನ್ನು ನಿರಾಕರಿಸಿರುವ ಅಫ್ಘಾನಿಸ್ಥಾನದ ತಾಲಿಬಾನ್ ಸರಕಾರದ ಉಪ ವಕ್ತಾರ ಹಮ್ದುಲ್ಲಾ ಫಿಟ್ರಾಟ್ ನೀಡಿರುವ ಹೇಳಿಕೆಯಲ್ಲಿ ಸೋಮವಾರ ರಾತ್ರಿ ಪಾಕಿಸ್ತಾನವು ಕಾಬೂಲಿನ ಡ್ರಗ್ ಪುನರ್ವಸಿತರ ಚಿಕಿತ್ಸಾ ಕೇಂದ್ರದ ಮೇಲೆ ನಡೆಸಿರುವ ಬಾಂಬು ದಾಳಿಗಳಲ್ಲಿ ಕನಿಷ್ಠ 400 ಜನರು ಸಾವನ್ನಪ್ಪಿದ್ದು ಇತರ 250ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆಂದು ತಿಳಿಸಿದ್ದಾರೆ. ಬಾಂಬು ದಾಳಿಯಲ್ಲಿ ಕುಸಿದು ಬಿದ್ದ ಅತಿದೊಡ್ಡ ಆಸ್ಪತ್ರೆಯ ಬಹುತೇಕ ಭಾಗ ನೆಲಸಮವಾಗಿದ್ದು ಅವಶೇಷಗಳಿಂದ ಮೃತದೇಹಗಳನ್ನು ರಕ್ಷಣಾ ಕಾರ್ಯಕರ್ತರು ಸಂಗ್ರಹಿಸುತ್ತಿದ್ದಾರೆ ಎಂದು ಎಕ್ಸ್‌ನಲ್ಲಿ ಅವರು ಹೇಳಿದ್ದಾರೆ. ರಕ್ಷಣಾ ಕಾರ್ಯ ಮುಂದುವರಿಯುತ್ತಿದ್ದು ಇನ್ನೂ 50ಕ್ಕೂ ಹೆಚ್ಚು ಮೃತದೇಹಗಳು ಅವಶೇಷಗಳ ಅಡಿಯಲ್ಲಿ ಇವೆ ಎಂದು ಆರೋಗ್ಯ ಅಧಿಕಾರಿಗಳು ಹೇಳಿರುವುದಾಗಿ ಮಂಗಳವಾರ ಟೋಲೋ ನ್ಯೂಸ್ ವರದಿ ಮಾಡಿದೆ.

ಪಾಕಿಸ್ತಾನದ ವೈಮಾನಿಕ ಬಾಂಬು ದಾಳಿಗೆ ಡ್ರಗ್ಸ್ ಪೀಡಿತ 3000ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಯ ಐದು ಬ್ಲಾಕ್‌ಗಳು ನೆಲಸಮವಾಗಿವೆ ಎಂದು ಟೋಲೋ ನ್ಯೂಸ್ ವರದಿ ಮಾಡಿದೆ. ಘಟನೆ ಸ್ಥಳಕ್ಕೆ ಭೇಟಿ ನೀಡಿರುವ ಅಫ್ಘಾನಿಸ್ಥಾನದ ಉಪಗೃಹ ಸಚಿವ ಮುಹಮ್ಮದ್ ನಬಿ ಒಮರಿ, ಅಫ್ಘಾನಿ ಸ್ಥಾನಿಯರನ್ನು ಕೊಲ್ಲುವ ಯೋಜನೆಯನ್ನು ಪಾಕಿಸ್ತಾನ ಹಾಕಿಕೊಂಡಿದೆ ಎಂದು ಆಪಾದಿಸಿದ್ದಾರೆ. ಪಾಕಿಸ್ತಾನದ ಈ ದಾಳಿಗೆ ಅಫ್ಘಾನಿಸ್ಥಾನ ಪ್ರತೀಕಾರ ನಡೆಸದೆ ಇರುವುದಿಲ್ಲ ಎಂದು ಅಫ್ಘಾನ್ ಸರಕರಾದ ವಕ್ತಾರ ಝುಬಿಹುಲ್ಲಾ ಮುಜಾಹಿದ್ ಹೇಳಿದ್ದಾರೆ.

# ದಹಿಸರ್: ಶೇಖರ್‌ಶೆಟ್ಟಿ ನಿಧನ



ಮುಂಬಯಿ, ಮಾ.17- ದಹಿಸರ್ ಪೂರ್ವದ ನಿವಾಸಿ ಗೋಲ್ಡನ್ ಕೆಮಿಕಲ್ಸ್ ಕಂಪನಿ ನಿವೃತ್ತ ಉದ್ಯೋಗಿ ಶೇಖರ್ ಗಂಗು ಶೆಟ್ಟಿಯವರು (74) ಮಾ.16 ರಂದು ನಿಧನ ಹೊಂದಿದರು.

ಸಾಮಾಜಿಕ, ಧಾರ್ಮಿಕ ಸೇವಾ ಮನೋಭಾವನೆ ಯುಳ್ಳವರಾಗಿದ್ದ ಶೇಖರ್ ಶೆಟ್ಟಿಯವರು ದಹಿಸರ್ ಪೂರ್ವದ ಶ್ರೀ ಶನೀಶ್ವರ ಚಾಮುಂಡೇಶ್ವರಿ ಮಂದಿರ ಇದರ ಮಾಜಿ ಗೌರವ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸಿರುವರು. ಅಲ್ಲದೆ ಬಾಲಕೃಷ್ಣ ವೆಲ್ಫೇರ್ ಅಸೋಸಿಯೇಷನ್ ಸಂಸ್ಥಾಪಕರಾಗಿದ್ದ ಶೇಖರ್ ಶೆಟ್ಟಿಯವರು ಕಬಡ್ಡಿ ಟೂರ್ನಮೆಂಟ್‌ಗಳನ್ನು ಆಯೋಜಿಸಿ ಯುವ ಕ್ರೀಡಾಪಟುಗಳಿಗೆ ಉತ್ತೇಜನ ನೀಡುತ್ತಿದ್ದರು. ಮೂಲತಃ ಕವತ್ತಾರುನವರಾಗಿದ್ದ ಶೇಖರ್ ಶೆಟ್ಟಿಯವರು ಪತ್ನಿ ದಹಿಸರ್ ಶ್ರೀ ಶನೀಶ್ವರ ಚಾಮುಂಡೇಶ್ವರಿ ದೇವಸ್ಥಾನದ ಮಹಿಳಾ ವಿಭಾಗದ ಅಧ್ಯಕ್ಷೆ ಸುನಂದಾ ಎಸ್. ಶೆಟ್ಟಿ, ಮೂವರು ಪುತ್ರಿಯರು,ಓರ್ವ ಪುತ್ರ, ಅಳಿಯಂದಿರು ,ಸೊಸೆ ಮೊಮ್ಮಕ್ಕಳ ಸಹಿತ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ. ಶೇಖರ್ ಶೆಟ್ಟಿ ಅವರ ನಿಧನಕ್ಕೆ ದಹಿಸರ್ ಶ್ರೀ ಶನೀಶ್ವರ ಚಾಮುಂಡೇಶ್ವರಿ ಸೇವಾ ಸಮಿತಿಯವರು ಶೋಕವನ್ನು ವ್ಯಕ್ತಪಡಿಸಿದ್ದಾರೆ.

# ಭಿವಂಡಿ: 405 ಎಲ್‌ಪಿಜಿ ಸಿಲಿಂಡರ್‌ಗಳ ವಶ

ಥಾಣೆ,ಮಾ. 17 - ಜಿಲ್ಲೆಯ ಭಿವಂಡಿಯಲ್ಲಿ ಮಾರಾಟಕ್ಕೆ ಅಕ್ರಮವಾಗಿ ಸಂಗ್ರಹಿಸಿಡಲಾಗಿದೆ ಎನ್ನಲಾದ 96 ತುಂಬಿದ ಸಿಲಿಂಡರ್‌ಗಳು ಸೇರಿದಂತೆ 405 ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾಗಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೋಮವಾರ ನಾರ್ಪೋಲಿ ಪೊಲೀಸ್ ಠಾಣೆಯಲ್ಲಿ ಅಗತ್ಯ ಸರಕುಗಳ ಕಾಯ್ದೆ ಮತ್ತು ದ್ರವೀಕೃತ ಪೆಟ್ರೋಲಿಯಂ ಅನಿಲ (ಪೂರೈಕೆ ಮತ್ತು ವಿತರಣೆಯ ನಿಯಂತ್ರಣ) ಆದೇಶ, 2000ರ ಅಡಿಯಲ್ಲಿ ಎಫ್‌ಐಆರ್‌ನ್ನು ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಖಚಿತ ಸುಳಿವಿನ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಪಡಿತರ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ಅಕ್ರಮವಾಗಿ ಸಂಗ್ರಹಿಸಲಾದ ಹೆಚ್ಚಿನ ಸಂಖ್ಯೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪತ್ತೆ ಮಾಡಿದರು. ಒಟ್ಟು 405 ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅವುಗಳಲ್ಲಿ 96 ಅನಿಲ ತುಂಬಿದ್ದವು ಎಂದು ನಾರ್ಪೋಲಿ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

ದಾಳಿ ತಂಡವು ಸಿಲಿಂಡರ್‌ಗಳ ಸಾಗಣೆಗೆ ಬಳಸಲಾದ ಟ್ರಕ್‌ಗಳು ಮತ್ತು ಟೆಂಪೋಗಳನ್ನು ಕೂಡ ವಶಪಡಿಸಿಕೊಂಡಿದೆ.

ವಶಪಡಿಸಿಕೊಳ್ಳಲಾದ ವಸ್ತುಗಳ ಒಟ್ಟು ಮೌಲ್ಯ 18,78,600 ರೂ. ಎಂದು ಅಂದಾಜಿಸಲಾಗಿದ್ದು,ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.




# ಸ್ಪೀಕರ್ ಖಡಕ್ ಎಚ್ಚರಿಕೆಯ ಬೆನ್ನಲ್ಲೇ ಎಚ್ಚೆತ್ತ ಸರ್ಕಾರ ; ಇಲಾಖಾವಾರು ಲಿಖಿತ ಉತ್ತರ ಸಲ್ಲಿಸಲು ಆರಂಭ



ಬೆಂಗಳೂರು, ಮಾ. 17 - ಸ್ಪೀಕರ್ ಖಡಕ್ ಎಚ್ಚರಿಕೆಯ ಬೆನ್ನಲ್ಲೇ ಸರ್ಕಾರ ಎಚ್ಚೆತ್ತುಕೊಂಡಿದ್ದು, ಇಲಾಖಾವಾರು ಲಿಖಿತ ಉತ್ತರಗಳನ್ನು ಸಲ್ಲಿಸಲು ಆರಂಭಿಸಿದೆ. ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ ಖಾದರ್, ಪರವಾಗಿಲ್ಲ ಈಗ ಸ್ವಲ್ಪ ಸುಧಾರಿಸಿದಂತೆ ಕಾಣುತ್ತಿದೆ ಎಂದಿದ್ದಾರೆ.

ಮಂಗಳವಾರದ ಕಲಾಪದಲ್ಲಿ ಇಲಾಖಾವಾರು ಉತ್ತರಗಳ ಅಂಕಿ-ಅಂಶಗಳನ್ನು ಪ್ರಸ್ತಾಪಿಸಿದ ಸ್ಪೀಕರ್ ಯು.ಟಿ. ಖಾದರ್, ಈಗ ಸ್ವಲ್ಪ ಸುಧಾರಣೆ ಕಂಡುಬರುತ್ತಿದೆ ಎಂದು ಅಭಿಪ್ರಾಯಪಟ್ಟರು.

ಸೋಮವಾರದ ಕಲಾಪದಲ್ಲಿ 230 ಪ್ರಶ್ನೆಗಳ ಪೈಕಿ ಕೇವಲ 84ಕ್ಕೆ ಮಾತ್ರ ಉತ್ತರ ಬಂದಿದ್ದರಿಂದ ಬೇಸತ್ತಿದ್ದ ಸ್ಪೀಕರ್, ಸಚಿವರು ಮತ್ತು ಕಾರ್ಯದರ್ಶಿಗಳು ಉತ್ತರಿಸುವವರೆಗೂ ಸದನ ನಡೆಸಲ್ಲ ಎಂದು ಪೀಠದಿಂದ ಕೆಳಗಿಳಿದು ತೆರಳಿದ್ದರು. ಈ ಐತಿಹಾಸಿಕ ಪ್ರತಿಭಟನೆಯ ನಂತರ ಇಂದು ಉತ್ತರಗಳ ಸಂಖ್ಯೆ ಏರಿಕೆಯಾಗಿದೆ.

**ಯಾವ ಇಲಾಖೆಯಿಂದ ಎಷ್ಟು ಉತ್ತರ?**

ಸ್ಪೀಕರ್ ಯುಟಿ ಖಾದರ್ ಸದನದಲ್ಲಿ ಮಂಡಿಸಿದ ಮಾಹಿತಿಯಂತೆ ವಿವಿಧ ಇಲಾಖೆಗಳು ಪ್ರಶ್ನೆಗಳಿಗೆ ನೀಡಿದ ಉತ್ತರದ ವಿವರ ಇಲ್ಲಿದೆ

ಆರ್ಥಿಕ ಇಲಾಖೆ: ಒಟ್ಟು 30 ಪ್ರಶ್ನೆಗಳಲ್ಲಿ 6ಕ್ಕೆ ಉತ್ತರ ಲಭ್ಯ.

ಸಮಾಜ ಕಲ್ಯಾಣ ಇಲಾಖೆ: 9 ಪ್ರಶ್ನೆಗಳಲ್ಲಿ ಕೇವಲ 1ಕ್ಕೆ ಉತ್ತರ.

ಸಹಕಾರ ಇಲಾಖೆ: 12 ಪ್ರಶ್ನೆಗಳ ಪೈಕಿ ಒಂದಕ್ಕೂ ಉತ್ತರ ಬಂದಿಲ್ಲ.

ಜಲಸಂಪನ್ಮೂಲ ಇಲಾಖೆ: 11 ಪ್ರಶ್ನೆಗಳಲ್ಲಿ 4ಕ್ಕೆ ಉತ್ತರ ಲಭ್ಯ.

ನಗರಾಭಿವೃದ್ಧಿ ಇಲಾಖೆ: 24 ಪ್ರಶ್ನೆಗಳಲ್ಲಿ 7ಕ್ಕೆ ಮಾತ್ರ ಉತ್ತರ.

ಸಣ್ಣ ನೀರಾವರಿ ಇಲಾಖೆ: 19 ಪ್ರಶ್ನೆಗಳಲ್ಲಿ 13ಕ್ಕೆ ಉತ್ತರ ಬಂದಿದ್ದು, ಈ ಇಲಾಖೆ ಉತ್ತಮ ಪ್ರಗತಿ ಸಾಧಿಸಿದೆ.

ಮಾಹಿತಿ ತಂತ್ರಜ್ಞಾನ (IT) ಇಲಾಖೆ: ಕೇಳಲಾದ 2 ಪ್ರಶ್ನೆಗಳಿಗೂ ಉತ್ತರ ಬಂದಿದೆ.

**ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಬೇಕು: ಸ್ಪೀಕರ್ ಸೂಚನೆ**

ಕಳೆದ ಐದು ದಿನಗಳಿಂದ ಕೇವಲ ಶೇ. 10 ರಿಂದ 30ರಷ್ಟು ಮಾತ್ರ ಉತ್ತರ ಬರುತ್ತಿತ್ತು. ಈಗ ಸ್ವಲ್ಪ ಸುಧಾರಿಸಿದೆ. ಆದರೆ, ಶಾಸಕರು ಸಾರ್ವಜನಿಕ ಹಿತದೃಷ್ಟಿಯಿಂದ ಕೇಳುವ ಪ್ರತಿಯೊಂದು ಪ್ರಶ್ನೆಗೂ ಸರ್ಕಾರ ಜವಾಬ್ದಾರಿಯುತವಾಗಿ ಉತ್ತರಿಸಬೇಕು ಎಂದು ಸ್ಪೀಕರ್ ಪುನರುಚ್ಚರಿಸಿದರು.

ಶಾಸಕರ ಪ್ರಶ್ನೆಗಳಿಗೆ ಸಚಿವರು ಮತ್ತು ಅಧಿಕಾರಿಗಳು ಉತ್ತರ ನೀಡದೇ ಇರುವುದರಿಂದ ಬೇಸತ್ತು ಸ್ಪೀಕರ್ ಖಾದರ್ ಅವರೇ ಸದನದಿಂದ ಎದ್ದು ಹೋಗಿದ್ದು ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು. ಅದರ ಬೆನ್ನಲ್ಲೇ ಕಂದಾಯ, ಅಲ್ಪಸಂಖ್ಯಾತ ಹಾಗೂ ಪಿಡಬ್ಲ್ಯುಡಿ ಇಲಾಖೆಗಳ ಒಟ್ಟು ಮೂವರು ಅಧಿಕಾರಿಗಳ ತಲೆದಂಡವಾಗಿತ್ತು.

# ಶಾಸಕರ ಪ್ರಶ್ನೆಗಳಿಗೆ ಉತ್ತರ ನೀಡುವಲ್ಲಿ ನಿರ್ಲಕ್ಷ್ಯ ; ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ನೋಟೀಸ್

ಬೆಂಗಳೂರು, ಮಾ. 17- ಶಾಸಕರ ಪ್ರಶ್ನೆಗಳಿಗೆ ಉತ್ತರ ನೀಡುವಲ್ಲಿ ನಿರ್ಲಕ್ಷ್ಯ ತೋರಿದ ಹಿನ್ನೆಲೆಯಲ್ಲಿ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೋಟೀಸ್ ಜಾರಿ ಮಾಡಿದ್ದಾರೆ.

ನೋಟೀಸ್‌ನಲ್ಲಿ ಕರ್ನಾಟಕ ವಿಧಾನಸಭೆಯ 16ನೇ ವಿಧಾನಸಭೆ (2023-2026)ಯ 1ನೇ ಅಧಿವೇಶನದಿಂದ 9ನೇ ಅಧಿವೇಶನದವರೆಗೆ ಉತ್ತರ ಬಾರದಿರುವ ಕುರಿತು ಮುಖ್ಯಮಂತ್ರಿಗಳು ಮತ್ತು ಸಭಾಧ್ಯಕ್ಷರವರೊಂದಿಗೆ ಸಭೆ ನಡೆಸಲಾಗಿದ್ದು ಸಕಾಲದಲ್ಲಿ ಉತ್ತರ ನೀಡದಿರುವ ಬಗ್ಗೆ ಮಾನ್ಯ ಸಭಾಪತಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದನ್ನು ಉಲ್ಲೇಖಿಸಿದ್ದಾರೆ.

ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಇದುವರೆಗೂ ಉತ್ತರಗಳನ್ನು, ವಿಧಾನ ಮಂಡಲಕ್ಕೆ ಸಲ್ಲಿಸದ ಬಾಕಿ ಪ್ರಶ್ನೆಗಳ ವಿವರವನ್ನು ಇದರೊಂದಿಗೆ ಲಗತ್ತಿಸಿದೆ. ಈ ಸಂಬಂಧ ತಾವು ವೈಯಕ್ತಿಕವಾಗಿ ಗಮನಹರಿಸಿ, ಒಂದು ವಾರದೊಳಗಾಗಿ ವಿಧಾನ ಮಂಡಲಕ್ಕೆ ಉತ್ತರಗಳನ್ನು ಕಳುಹಿಸಿಕೊಡಲು ಸೂಚಿಸಿದೆ. ಈ ಅವಧಿಯೊಳಗೆ ಒಂದು ವೇಳೆ ಉತ್ತರವನ್ನು ಕಳುಹಿಸದೇ ಇದ್ದಲ್ಲಿ ಏಕೆ ಉತ್ತರವನ್ನು ಕಳುಹಿಸಲು ಸಾಧ್ಯವಾಗಿಲ್ಲ ಎಂಬ ಬಗ್ಗೆ ವಿವರಣೆಯನ್ನು ಸಲ್ಲಿಸುವಂತೆ ಸೂಚಿಸಿದ್ದಾರೆ.

**ಸದನಕ್ಕೆ ಸಲ್ಲಿಕೆಯಾಗದ ಉತ್ತರಗಳ ಸಂಖ್ಯೆ:**

ನಗರಾಭಿವೃದ್ಧಿ ಇಲಾಖೆ ಮತ್ತು ಬಿ.ಬಿ.ಎಂ.ಪಿ - 140, ಆರ್ಥಿಕ ಇಲಾಖೆ - 83, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ - 51, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ - 39, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ - 35, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ - 34, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ - 34, ಕಂದಾಯ ಇಲಾಖೆ - 27, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ - 25, ಸಹಕಾರ ಇಲಾಖೆ - 25, ವಸತಿ ಇಲಾಖೆ - 14, ಪ್ರವಾಸೋದ್ಯಮ ಇಲಾಖೆ - 12, ಸಮಾಜ ಕಲ್ಯಾಣ ಇಲಾಖೆ - 11, ಜಲಸಂಪನ್ಮೂಲ ಇಲಾಖೆ (ಭಾರೀ ಮತ್ತು ಮಧ್ಯಮ) - 11, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ - 10, ಮೂಲಸೌಲಭ್ಯ ಅಭಿವೃದ್ಧಿ, ಇಲಾಖೆ - 8, ಇಂಧನ ಇಲಾಖೆ - 8, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ - 7, ಲೋಕೋಪಯೋಗಿ ಇಲಾಖೆ - 7, ಕನ್ನಡ ಮತ್ತು ಸಂಸ್ಕೃತಿ ಇಲಾಖೆ - 6, ಮಾಹಿತಿ ತಂತ್ರಜ್ಞಾನ ಇಲಾಖೆ - 6, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ - 5, ಕೃಷಿ ಇಲಾಖೆ - 4, ಒಳಾಡಳಿತ ಇಲಾಖೆ - 4, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ - 4, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ - 4, ಕಾರ್ಮಿಕ ಇಲಾಖೆ - 3, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ - 3, ಸಾರ್ವಜನಿಕ ಉದ್ದಿಮೆಗಳ ಇಲಾಖೆ (ಆರ್ಥಿಕ ಇಲಾಖೆ) - 2, ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಸ್ ಇಲಾಖೆ - 2, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ - 2, ವೈದ್ಯಕೀಯ ಶಿಕ್ಷಣ ಇಲಾಖೆ - 2, ಕೌಶಲ್ಯಾಭಿವೃದ್ಧಿ, ಇಲಾಖೆ - 2, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ - 1, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ -1, ಸಾರಿಗೆ ಇಲಾಖೆ - 1 ಸೇರಿ ಒಟ್ಟು 632 ಉತ್ತರಗಳು ಸಲ್ಲಿಕೆಯಾಗಿಲ್ಲ.



**ಸಚಿವರುಗಳಿಗೆ ಸಿಎಂ ಪತ್ರ:**

ವಿಧಾನ ಮಂಡಲ ಶಾಸಕರ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರ ನೀಡದಿರುವ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಸಚಿವರುಗಳಿಗೆ ಪತ್ರ ಬರೆದಿದ್ದಾರೆ. ಪತ್ರದಲ್ಲಿ ಕರ್ನಾಟಕ ವಿಧಾನಸಭೆಯ 16ನೇ ವಿಧಾನಸಭೆ (2023-2026)ಯ 1ನೇ ಅಧಿವೇಶನದಿಂದ 9ನೇ ಅಧಿವೇಶನದವರೆಗೆ ಉತ್ತರ ಬಾರದಿರುವ ಇಲಾಖಾವಾರು ಪ್ರಶ್ನೆಗಳ ಪಟ್ಟಿಯನ್ನು ಮತ್ತು ದಿನಾಂಕ: 16.03.2026 ರಂದು ನಡೆದ ಸದನ ಸಭೆಯಲ್ಲಿ 245 ಪ್ರಶ್ನೆಗಳಲ್ಲಿ ಇದುವರೆಗೂ 90 ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಒದಗಿಸಿರುವುದು ಕಂಡುಬಂದಿರುತ್ತದೆ ಎಂದು ವಿವರಿಸಿದ್ದಾರೆ.

ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಗಳನ್ನು ಇದುವರೆಗೂ ಕಳುಹಿಸದೇ ಇರುವುದು ವಿಧಾನಸಭಾ ಸದಸ್ಯರುಗಳು ಸದನದಲ್ಲಿ ಚರ್ಚಿಸಲು ಅನಾನುಕೂಲತೆಯನ್ನು ಉಂಟು ಮಾಡಿರುತ್ತದೆ. ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟು ಮಾಡುವುದರೊಂದಿಗೆ ಶಾಸಕರುಗಳ ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿಯನ್ನುಂಟು ಮಾಡಿರುತ್ತದೆ ಎಂದು ತಿಳಿಸಿದ್ದಾರೆ.

ಈ ಸಂಬಂಧ ಸೋಮವಾರ ನಡೆದ ಸಭೆಯಲ್ಲಿ ಸಭಾಧ್ಯಕ್ಷರು ತೀವ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದುದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನ ಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಲಾಗಿದೆ. ಅಲ್ಲದೇ, ಉತ್ತರ ಕಳುಹಿಸದ ಸಂದರ್ಭದಲ್ಲಿ ಸಂಬಂಧ ಪಟ್ಟ ಶಾಸಕರಿಗೆ ಪ್ರತ್ಯೇಕ ಪತ್ರವನ್ನು ಕಳುಹಿಸಿ ಹಾಗೂ ಮಾಹಿತಿ ಒದಗಿಸುವ ನಿರ್ಧಿಷ್ಟಸಮಯವನ್ನುತಿಳಿಸುವಂತೆ ಸೂಚಿಸಿದ್ದಾರೆ.

# ಮಂಗಳೂರು : ಮೂಡುಬಿದಿರೆ ಇನ್‌ಸ್ಪೆಕ್ಟರ್ ಸಂದೇಶ್ ಮೇಲೆ ಲೈಂಗಿಕ ಕಿರುಕುಳದ ಆರೋಪ



ಮಂಗಳೂರು, ಮಾ. 17 - ದಕ್ಷಿಣ ಕನ್ನಡದ ಮೂಡುಬಿದಿರೆ ಇನ್‌ಸ್ಪೆಕ್ಟರ್ ಸಂದೇಶ್ ಮೇಲೆ ಲೈಂಗಿಕ ಕಿರುಕುಳದ ಗಂಭೀರ ಆರೋಪ ಕೇಳಿಬಂದಿದೆ.

ರಕ್ಷಣೆ ಕೋರಿ ಬಂದ ಮಹಿಳೆಯರಿಗೆ ಲೈಂಗಿಕ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದ್ದು, ಇದಕ್ಕೆ ಸಂಬಂಧಿಸಿದ ವಿಡಿಯೋಗಳು ವೈರಲ್ ಆಗಿವೆ. ಆದರೆ, ಇನ್‌ಸ್ಪೆಕ್ಟರ್ ಎಲ್ಲಾ ಆರೋಪಗಳನ್ನು ನಿರಾಕರಿಸಿದ್ದಾರೆ.

ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪೊಲೀಸ್ ಅಧಿಕಾರಿಯೇ ಕಾಮುಕ ಪ್ರವೃತ್ತಿ ತೋರಿದ್ದಾರೆಯೇ? ರಕ್ಷಣೆ ಕೋರಿ ಬಂದ ಮಹಿಳೆಯರನ್ನೇ ಟಾರ್ಗೆಟ್ ಮಾಡಿ ಲೈಂಗಿಕ ಸುಖಕ್ಕೆ ಆಹ್ವಾನ ನೀಡುತ್ತಿದ್ದಾರೆಯೇ? ಇಂತಹದೊಂದು ಗಂಭೀರ ಆರೋಪ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಇನ್‌ಸ್ಪೆಕ್ಟರ್ ಸಂದೇಶ್ ಅವರ ವಿರುದ್ಧ ಕೇಳಿಬಂದಿದ್ದು, ಕರಾವಳಿ ಭಾಗದಲ್ಲಿ ಭಾರೀ ಸಂಚಲನ ಮೂಡಿಸಿದೆ.

ಖಾಸಗಿ ಸುದ್ದಿ ವಾಹಿನಿಯೊಂದು ನಡೆಸಿದ ತನಿಖಾ ವರದಿಯ ಪ್ರಕಾರ, ಇನ್‌ಸ್ಪೆಕ್ಟರ್ ಸಂದೇಶ್ ಅವರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಬರುವ ಕುಟುಂಬಗಳ ಆಸ್ತಿ ಕಲಹ ಅಥವಾ ಕೌಟುಂಬಿಕ ಜಗಳದ ಕೇಸ್‌ಗಳನ್ನು ಬಳಸಿಕೊಂಡು ಮಹಿಳೆಯರಿಗೆ ಕಿರುಕುಳ ನೀಡುತ್ತಿದ್ದಾರೆ ಎಂಬ ಆರೋಪವಿದೆ. ಆರೋಪಿಗಳ ಹೆಂಡತಿಯನ್ನೇ ಗುರಿಯಾಗಿಸಿಕೊಂಡು, ನಿನ್ನ ಗಂಡನನ್ನು ಕೇಸ್‌ನಿಂದ ಬಿಡಿಸಬೇಕೆಂದರೆ ನೀನು ನನ್ನ ಬಳಿ ಬರಬೇಕು ಎಂದು ಲೈಂಗಿಕ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ. ಇದಕ್ಕೆ ಒಪ್ಪದಿದ್ದರೆ ಗಂಡನ ಮೇಲೆ ರೌಡಿಶೀಟ್ ತೆರೆಯುವ ಬೆದರಿಕೆ ಹಾಕುತ್ತಿದ್ದರು ಎಂಬ ದೂರುಗಳು ಕೇಳಿಬಂದಿವೆ. ಇದಕ್ಕೆ ಪೂರಕವಾಗಿ ಇನ್‌ಸ್ಪೆಕ್ಟರ್ ಮಹಿಳೆಯೊಬ್ಬರ ಮನೆಯ ಕಾಂಪೌಂಡ್ ಹಾರಿ ಒಳಹೋದ ದೃಶ್ಯಗಳು ಮತ್ತು ಡ್ಯಾನ್ಸ್ ಮಾಡುತ್ತಿರುವ ವಿಡಿಯೋಗಳು ವೈರಲ್ ಆಗಿವೆ.

ಈ ಎಲ್ಲಾ ಆರೋಪಗಳನ್ನು ಇನ್‌ಸ್ಪೆಕ್ಟರ್ ಸಂದೇಶ್ ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. ನನ್ನ ಮೇಲೆ ಬಂದಿರುವ ಆರೋಪಗಳೆಲ್ಲವೂ ಸುಳ್ಳು. ಕಳೆದ ವರ್ಷ ನಾನು ಈ ಠಾಣೆಗೆ ಬಂದಾಗಿನಿಂದ ಕೆಲವು ಹಿತಶತ್ರುಗಳು ಈ ರೀತಿ ಮಾಡುತ್ತಿದ್ದಾರೆ. ಈಗಾಗಲೇ ಮೇಲಧಿಕಾರಿಗಳು ತನಿಖೆ ನಡೆಸಿ ನನಗೆ ಕ್ಲೀನ್ ಚಿಟ್ ನೀಡಿದ್ದಾರೆ ಎಂದು ಹೇಳಿದ್ದಾರೆ.

ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಹೆಸರಿನಲ್ಲಿ ವಂಚನೆ ಮಾಡಿದ ಪ್ರಕರಣದಲ್ಲಿ ದೂರುದಾರ ಮಹಿಳೆಯ ಗಂಡನ ಮೇಲೆ ಕೇಸ್ ಇದೆ. ಈ ಹಿನ್ನೆಲೆಯಲ್ಲಿ ಅವರನ್ನು ವಿಚಾರಣೆಗೆ ಕರೆತರಲಾಗಿತ್ತು. ಸಿಸಿಟಿವಿ ಫೂಟೇಜ್ ನಮ್ಮ ಬಳಿ ಇದೆ. ನಾವು ಯಾವುದೇ ಕಿರುಕುಳ ನೀಡಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಇನ್ನು ಕಾಂಪೌಂಡ್ ಹಾರಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಅದು ನನ್ನ ಪರಿಚಯಸ್ಥರ ಮನೆ. ಅಲ್ಲಿ ಗಂಡ-ಹೆಂಡತಿ ಜಗಳವಾಗಿ ಹೆಂಡತಿ ಫೋನ್ ತೆಗೆಯುತ್ತಿರಲಿಲ್ಲ. ಅವರು ಆತ್ಮಹತ್ಯೆ ಮಾಡಿಕೊಳ್ಳಬಹುದು ಎಂಬ ಆತಂಕದಿಂದ ನಾನು ಕಾಂಪೌಂಡ್ ಹಾರಿ ಹೋಗಿದ್ದೆ. ಕ್ರಿಶ್ಚಿಯನ್ ಸಮುದಾಯದಲ್ಲಿ ಡ್ಯಾನ್ಸ್ ಮಾಡುವುದು ಸಾಮಾನ್ಯ, ನಾವೆಲ್ಲಾ ಆತ್ಮೀಯರಾಗಿದ್ದೇವೆ ಎಂದು ಸಮರ್ಥಿಸಿ ಕೊಂಡಿದ್ದಾರೆ.

ರಕ್ಷಣೆ ನೀಡಬೇಕಾದ ಇನ್‌ಸ್ಪೆಕ್ಟರ್ ಮೇಲೆ ಇಂತಹ ಲೈಂಗಿಕ ಕಿರುಕುಳದ ಆರೋಪ ಬಂದಿರುವುದು ಇಡೀ ಪೊಲೀಸ್ ಇಲಾಖೆಗೆ ಮುಜುಗರ ತಂದಿದೆ. ದೂರುದಾರರು ಈಗಾಗಲೇ ಪೊಲೀಸ್ ಕಮಿಷನರ್ ಅವರಿಗೆ ದೂರು ನೀಡಿದ್ದು, ನ್ಯಾಯಕ್ಕಾಗಿ ಆಗ್ರಹಿಸಿದ್ದಾರೆ.

# ಕರ್ನಾಟಕ : ಹಲವು ಜಿಲ್ಲೆಗಳಲ್ಲಿ ಸುರಿದ ಬೇಸಿಗೆ ಮಳೆ!



ಬೆಂಗಳೂರು, ಮಾ.17 - ರಾಜ್ಯದ 13 ಜಿಲ್ಲೆಗಳಲ್ಲಿ ಬೇಸಿಗೆ ಮಳೆ ಭರ್ಜರಿಯಾಗಿಯೇ ಸುರಿದಿದ್ದು ಈ ನಡುವೆ ಕೊಪ್ಪಳದಲ್ಲಿ ಸಿಡಿಲಿಗೆ ಬಾಲಕ ಬಲಿಯಾಗಿದ್ದಾನೆ. ಗುಡುಗು ಸಿಡಿಲಿನೊಂದಿಗೆ ಕೆಲವೆಡೆ ಆಲಿಕಲ್ಲು ಮಳೆ ಬಿದ್ದಿದ್ದು, ಹಾಸನದಲ್ಲಿ ಮಳೆ ಗಾಳಿಗೆ ಮರದ ರಂಬೆ ಕೊಂಬೆಗಳು ಬಿದ್ದಿವೆ.

ಚಾಮರಾಜನಗರ, ಮೈಸೂರು, ದಾವಣಗೆರೆಯ ಹರಿಹರದಲ್ಲಿ ವರ್ಷದ ಮೊದಲ ಮಳೆ ಆಯಿತು. ಚಾಮರಾಜನಗರದ ಹಲವೆಡೆ ಒಂದು ಗಂಟೆಗೂ ಹೆಚ್ಚು ಕಾಲ ಮಳೆಯಿಂದ ಬಿಸಿಲಿನ ತಾಪದಲ್ಲಿದ್ದ ಜನತೆ ಮೊದಲ ಮಳೆ ಕಂಡು ಉಲ್ಲಸಿತರಾದರು. ಗುಂಡ್ಲುಪೇಟೆ ತಾಲೂಕಿನ ಕೆಲವೆಡೆ ಸಿಡಿಲು-ಗುಡುಗು, ಆಲಿಕಲ್ಲು ಸಹಿತ ಮಳೆಯಾಗಿದೆ.

ಮೈಸೂರಿನ ಬೆಟ್ಟದಪುರದಲ್ಲಿ ಗುಡುಗು ಸಿಡಿಲು ಸಹಿತ ಮಳೆಯಾದರೆ ಪಿರಿಯಾಪಟ್ಟಣದಲ್ಲಿ ಸಿಡಿಲಿಗೆ ತೆಂಗಿನ ಮರ ಹೊತ್ತಿ ಉರಿಯಿತು. ದಾವಣಗೆರೆಯಲ್ಲಿ ವರ್ಷದ ಮೊದಲ ಮಳೆಯಲ್ಲೇ ಆಲಿಕಲ್ಲು ಸಹಿತ ಧಾರಾಕಾರ ಅರ್ಧ ಗಂಟೆ ಸುರಿಯಿತು. ಹರಿಹರದಲ್ಲಿ ಸಾಧಾರಣ ಮಳೆ ಆಯಿತು.

ಆಡು ಮೇಯಿಸಲು ತೆರಳಿದ್ದಾಗ ಕೊಪ್ಪಳದ ಯಲಬುರ್ಗಾ ತಾಲೂಕಿನಲ್ಲಿ ಸಿಡಿಲು ಬಡಿದು 8ನೇ ತರಗತಿಯ ಮಂಜುನಾಥ ಮುದೇಗೌಡ (14) ಮೃತಪಟ್ಟಿದ್ದಾನೆ. ಕಾರಟಗಿಯಲ್ಲಿ ಗುಡುಗು, ಮಿಂಚು ಸಿಡಿಲಿನ ಅಬ್ಬರದೊಂದಿಗೆ ಸುಮಾರು 20 ನಿಮಿಷ ಕಾಲ ಆಲಿಕಲ್ಲು ಮಳೆ ಸುರಿಯಿತು.

ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ 10 ನಿಮಿಷಗಳ ಕಾಲ ಮಳೆ ಸುರಿದು ಧರೆ ತಂಪಾಯಿತು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಬಾಳೆಹೊನ್ನೂರುಗಳಲ್ಲಿ ಉತ್ತಮ ಮಳೆಯಾಗಿದೆ.

ಹಾಸನ ಸೇರಿ ಆಲೂರು ತಾಲೂಕಿನ ಹಲವೆಡೆ ಆಲಿಕಲ್ಲು ಸಹಿತ ಭಾರೀ ಗುಡುಗು ಸಿಡಿಲಿನೊಂದಿಗೆ ಉತ್ತಮ ಮಳೆಯಾಗಿದೆ. ಸಂಜೆ 4ರ ಸುಮಾರು ಆರಂಭವಾದ ಮಳೆ ಒಂದು ಗಂಟೆ ಕಾಲ ಸುರಿದಿದೆ. ಕೆಲವೆಡೆ ಮರದ ಕೊಂಬೆಗಳು ಮುರಿದುಬಿದ್ದಿವೆ.

ಕೊಡಗು ಜಿಲ್ಲೆಯಲ್ಲಿ ಸಂಜೆ ಅಕಾಲಿಕ ಮಳೆ ತಂಪೆರೆಯಿತು. ಸಂಚಾರ ಅಸ್ತವ್ಯಸ್ತವಾಗಿತ್ತು. ಆದರೂ ಜನ ಖುಷಿಯಿಂದಲೆ ಮಳೆಯೊಂದಿಗೆ ಹೆಜ್ಜೆ ಹಾಕಿ ಮನೆ ಸೇರಿದ್ದಾರೆ. ಜಿಲ್ಲೆಯ ಶಿರಂಗಾಲ, ಹೆಬ್ಬಾಲೆ, ಬೇತ್ರಿ ಸೇರಿ ಹಲವೆಡೆ ಗುಡುಗು ಸಹಿತ ಭಾರಿ ಮಳೆಯಾಗಿದೆ. ಹೊಲ ಮತ್ತು ಗದ್ದೆಗಳಿಗೆ ನೀರು ನುಗ್ಗುವಂತೆ ಮಳೆ ಸುರಿದಿದ್ದು, ಬಿಸಿಲಿನಿಂದ ಬಸವಳಿದಿದ್ದ ಇಳೆಗೆ ಚೈತನ್ಯ ನೀಡಿದೆ. ಕಾಫಿ ಮತ್ತು ಕರಿಮೆಣಸು ಬೆಳೆಗಾರರಿಗೆ ಈ ಮಳೆ ವರದಾನವಾಗಿ ಪರಿಣಮಿಸುವ ಸಾಧ್ಯತೆಯಿದೆ.

ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು, ಪುತ್ತೂರು, ಬಂಟ್ವಾಳ ಹಾಗೂ ಉಳ್ಳಾಲದ ಕಲವೆಡೆ ರಾತ್ರಿ ಗುಡುಗಿನೊಂದಿಗೆ ಸಾಧಾರಣ ಮಳೆಯಾಗಿದೆ. ಯಾದಗಿರಿ ಜಿಲ್ಲೆ ಹುಣಸಗಿಯಲ್ಲಿ ಸಿಡಿಲು ಬಡಿದು ಕೆಲವು ಮರಗಳು ಹೊತ್ತಿ ಉರಿದವು.

ರಾಯಚೂರು ಜಿಲ್ಲೆಯ ವಿವಿಧೆಡೆ 1 ಗಂಟೆ ಕಾಲ ಆಲಿಕಲ್ಲು ಮಳೆ ಸುರಿಯಿತು. ಇದರಿಂದ ಮಾವು ಬೆಳೆಗಾರರಿಗೆ ಸಂಕಷ್ಟ ಎದುರಾಗಿದೆ. ಕಲಬುರಗಿ ಜಿಲ್ಲೆ ಆಳಂದ ಸೇರಿ ಕೆಲವಡೆ ಮಳೆ ಜೋರಾಗಿ ಸುರಿಯಿತು.

# ರೈಲ್ವೆ ಪರೀಕ್ಷೆಯಲ್ಲಿ ಕನ್ನಡ ಕಡೆಗಣನೆ ; ಕನ್ನಡಪರರ ಹೋರಾಟಕ್ಕೆ ಮಣಿದ ಅಧಿಕಾರಿಗಳು

**ಮಾರ್ಚ್ 17ರಂದು ನಡೆಯಬೇಕಿದ್ದ ಪರೀಕ್ಷೆಯನ್ನು ರದ್ದುಗೊಳಿಸಿ ರೈಲ್ವೆ ಇಲಾಖೆ ದಿಢೀರ್ ಆದೇಶ**



ಬೆಂಗಳೂರು, ಮಾ.17 - ರೈಲ್ವೆ ಇಲಾಖೆಯ ಮುಂಬಡ್ತಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಕಡೆಗಣಿಸಲಾಗಿತ್ತು. ಇದನ್ನು ವಿರೋಧಿಸಿ ಕನ್ನಡಪರ ಹೋರಾಟಗಾರರು ನಡೆಸಿದ ಹೋರಾಟಕ್ಕೆ ಅಧಿಕಾರಿಗಳು ಮಣಿಸಿದ್ದಾರೆ. ಮಂಗಳವಾರ (ಮಾರ್ಚ್ 17)ರಂದು ನಡೆಯಬೇಕಿದ್ದ ಪರೀಕ್ಷೆ ರದ್ದಾಗಿದೆ. ಪರೀಕ್ಷೆಯನ್ನು ರದ್ದುಗೊಳಿಸಿ ರೈಲ್ವೆ ಇಲಾಖೆ ದಿಢೀರ್ ಆದೇಶ ಹೊರಡಿಸಿದೆ.

ರೈಲ್ವೆಯ ಮುಂಬಡ್ತಿ ಪರೀಕ್ಷೆಯಲ್ಲಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರವೇ ಪ್ರಶ್ನೆಗಳಿದ್ದವು. ಉತ್ತರವನ್ನೂ ಈ ಎರಡು ಭಾಷೆಗಳಲ್ಲಿಯೇ ಬರೆಯಬೇಕಿತ್ತು. ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ಇಲ್ಲದಿರುವುದನ್ನು ಖಂಡಿಸಿ, ಕನ್ನಡಪರ ಸಂಘಟನೆಗಳು ಹೋರಾಟಕ್ಕಿಳಿದಿದ್ದವು. ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಬೇಕೆಂದು ತಮ್ಮ ಕಾರ್ಯಕರ್ತರಿಗೆ ಕರ್ನಾಟಕ ರಕ್ಷಣಾ ವೇದಿಕೆಯ (ಕರವೇ) ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಕರೆಕೊಟ್ಟಿದ್ದರು. ಅದಂತೆ, ಪರೀಕ್ಷೆಗಳು ನಡೆಯುತ್ತಿದ್ದ ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆ, ಮೈಸೂರು ಸೇರಿದಂತೆ ಹಲವು ಪರೀಕ್ಷಾ ಕೇಂದ್ರಗಳಿಗೆ ಕನ್ನಡಪರ ಹೋರಾಟಗಾರರು ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದ್ದಾರೆ. ಅಲ್ಲದೆ, ಹುಬ್ಬಳ್ಳಿಯ ಆರ್‌ಆರ್‌ಸಿ ಕಚೇರಿಯ ಎದುರು ಕೂಡ ಪ್ರತಿಭಟನೆಗಳು ನಡೆದಿತ್ತು.

ಪ್ರತಿಭಟನೆಗಳಿಗೆ ಮಣಿದ ರೈಲ್ವೆ ಅಧಿಕಾರಿಗಳು ನಡೆಯುತ್ತಿದ್ದ ಪರೀಕ್ಷೆಯನ್ನು ಅರ್ಧಕ್ಕೆ ರದ್ದುಗೊಳಿಸಿದ್ದಾರೆ. ಪರೀಕ್ಷೆಯನ್ನು ಮುಂದೂಡಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳು ಅರ್ಧದಲ್ಲಿಯೇ ಪರೀಕ್ಷೆ ಬಿಟ್ಟು ಹೊರಬಂದಿದ್ದಾರೆ. ಕನ್ನಡದಲ್ಲಿ ಪರೀಕ್ಷೆ ಬರೆಯುವುದರಿಂದ ವಂಚಿತರಾಗಿದ್ದ ಅಭ್ಯರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಪರೀಕ್ಷೆ ಮುಂದೂಡಿಕೆ ಕುರಿತು ಮಾತನಾಡಿದ ಹುಬ್ಬಳ್ಳಿ ಆರ್‌ಆರ್‌ಸಿ ಚೇರ್ಮನ್ ಆಸಿಫ್ ಅನ್ಸಾರಿ, ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸುವ ಬಗ್ಗೆ ಮೇಲಧಿಕಾರಿಗಳು ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಪರೀಕ್ಷೆಯ ಮುಂದಿನ ದಿನಾಂಕವನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು ತಿಳಿಸಿದ್ದಾರೆ.

# ಅಕ್ರಮ ಮದ್ಯ ಮಾರಾಟವನ್ನು ಮಾದಕ ವಸ್ತು ನಿಯಂತ್ರಣ ಕಾಯಿದೆ ಅಡಿ ಸೇರಿಸಲು ಕ್ರಮ : ಸಚಿವ ತಿಮ್ಮಾಪುರ್

ಬೆಂಗಳೂರು, ಮಾ.17 - ರಾಜ್ಯಾದಾದ್ಯಂತ ಅಕ್ರಮವಾಗಿ ಮದ್ಯ ಮಾರಾಟ ಮಾರಾಟ ಮಾಡುವುದನ್ನು ಹಾಗೂ ಅಕ್ರಮವಾಗಿ ಮದ್ಯ ತಯಾರಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಕ್ರಮ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸಲಾಗುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್ ವಿಧಾನಸಭೆಗಿಂದು ತಿಳಿಸಿದ್ದಾರೆ.

ಈ ಬಗ್ಗೆ ಚರ್ಚಿಸಿ ಕ್ರಮ ವಹಿಸಲಾಗುವುದು. ಅಲ್ಲದೆ, ಅಕ್ರಮ ಮದ್ಯ ಮಾರಾಟವನ್ನು ಮಾದಕ ವಸ್ತು ನಿಯಂತ್ರಣ ಕಾಯಿದೆ ಅಡಿ ಸೇರಿಸಲು ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಸಚಿವರು ಪ್ರಕಟಿಸಿದರು.

ಇಂದು ವಿಧಾನಸಭೆಯ ಪ್ರಶ್ನೋತ್ತರ ಕಲಾಪದ ವೇಳೆ ರಾಯಚೂರು ಗ್ರಾಮಾಂತರ ಶಾಸಕ ಬಸನಗೌಡ ದದ್ದಲ್ ಅವರು ರಾಯಚೂರು ಜಿಲ್ಲೆಯಲ್ಲಿ ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ, ಕಿರಾಣಿ ಅಂಗಡಿಗಳಲ್ಲೂ ಸಹ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ಅಬಕಾರಿ ಕಾಯಿದೆ 1965ರ ಕಾಯಿದೆಗಳ ರೀತ್ಯಾ ಯಾವುದೇ ಕ್ರಮ ಆಗುತ್ತಿಲ್ಲ. ಈ ಬಗ್ಗೆ ಸರ್ಕಾರ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ವಿಶೇಷ ಪಡೆಗಳನ್ನು ರಚಿಸಬೇಕು ಎಂದು ಪ್ರಶ್ನಿಸಿದರು.

ಈ ಸಮಯದಲ್ಲಿ ಶಾಸಕರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಬಕಾರಿ ಅಕ್ರಮಗಳನ್ನು ನಿಯಂತ್ರಿಸಲು ಅಬಕಾರಿ ಇಲಾಖೆಯಿಂದ ವಲಯ ವ್ಯಾಪ್ತಿಯ ರೂಟ್ ಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ರಸ್ತೆ ಗಾವಲು ನಡೆಸಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಅಕ್ರಮ ಹತ್ತಿಕ್ಕಲು ಕ್ರಮ ವಹಿಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 50ರಂತೆ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಕುರಿತು ನಿಯಮಗಳನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದರು.

# ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ 3ನೇ ಬಾರಿಗೆ ಗಡಿಪಾರು ಆದೇಶ




ಮಂಗಳೂರು, ಮಾ. 17 - ಉಜಿರೆಯ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರಿಗೆ ಪುತ್ತೂರು ಎಸಿ ಸ್ಟೆಲ್ಲಾ ವರ್ಗಿಸ್ ಅವರು ಮತ್ತೆ ಮೂರನೇ ಬಾರಿಗೆ ಗಡಿಪಾರು ಆದೇಶ ಹೊರಡಿಸಿದ್ದಾರೆ.

ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿಯನ್ನು ಹೈಕೋರ್ಟ್ ಆದೇಶದಂತೆ ಮಾ.16 ರಿಂದ ಸೆ.16 ರವರೆಗೆ ಪುತ್ತೂರು ಎಸಿ ಸ್ಟೆಲ್ಲಾ ವರ್ಗಿಸ್ ಅವರು, ಆರು ತಿಂಗಳು ಕಾಲ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ.

ಪುತ್ತೂರು ಎ.ಸಿ ಗಡಿಪಾರು ಆದೇಶದಂತೆ ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿಣಿ ಸಿ.ಕೆ ಅವರ ನೇತೃತ್ವದಲ್ಲಿ ಪೊಲೀಸರು ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿ ಮನೆಗೆ ಮಾ.16 ರಂದು ಮಧ್ಯರಾತ್ರಿ ತೆರಳಿದ್ದರು.

ಗಡಿಪಾರು ಆದೇಶ ಪ್ರತಿಯನ್ನು ಜಾರಿ ಮಾಡಲು ಹೋದಾಗ ಮಹೇಶ್ ಶೆಟ್ಟಿ ತಿಮರೋಡಿ ಅವರು ಮನೆಯಲ್ಲಿರದೆ ನಾಪತ್ತೆಯಾಗಿದ್ದರು. ಬಳಿಕ ಮನೆಯ ಗೋಡೆಗೆ ನೋಟಿಸ್ ಅಂಟಿಸಿದ್ದಾರೆ.



ಉಪ್ಕಾರ್ ವೆಲ್‌ಫೇರ್ ಅಸೋಸಿಯೇಶನ್ ಬೆಂಗಳೂರು ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಹಿಂದೂ ಜನಜಾಗೃತಿ ಸಮಿತಿಯ ರಣರಾಗಿಣಿ ಶಾಖೆಯ ಬೆಂಗಳೂರು ಜಿಲ್ಲಾ ಸಂಯೋಜಕಿ ಭವ್ಯಾ ಗೌಡ ಅವರನ್ನು ಸನ್ಮಾನಿಸಲಾಯಿತು..

# 26 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಮಂಗಳೂರು ಬಂದರಿನಲ್ಲಿ ಅನ್‌ಲೋಡ್

ಮಂಗಳೂರು, ಮಾ. 17 - ಇರಾನ್, ಅಮೆರಿಕ, ಇಸ್ರೇಲ್ ನಡುವಿನ ಉದ್ವಿಗ್ನತೆಯ ಹಿನ್ನೆಲೆ ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಅಡ್ಡಿ ಉಂಟಾಗಿದ್ದು, ನೂರಾರು ತೈಲ ಮತ್ತು ಎಲ್‌ಪಿಜಿ ಸಾಗಿಸುತ್ತಿದ್ದ ಹಡಗುಗಳ ಸಂಚಾರಕ್ಕೆ ಅಡ್ಡಿಯಾಗಿದ್ದವು. ಆದರೆ ಭಾರತದ ರಾಜತಾಂತ್ರಿಕ ಪ್ರಯತ್ನಗಳ ಫಲವಾಗಿ ಇರಾನ್ ಈಗಾಗಲೇ ನಾಲ್ಕು ಹಡಗುಗಳಿಗೆ ಅನುಮತಿ ನೀಡಿದ್ದು, ಅವುಗಳಲ್ಲಿ 2 ಹಡಗುಗಳು ಈಗಾಗಲೇ ಭಾರತ ತಲುಪಿದ್ದು ಉಳಿದ 26 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ಇಂದೇ ಮಂಗಳೂರು ಬಂದರಿಗೆ ತಂದು ಅನ್‌ಲೋಡ್ ಮಾಡುವ ಸಾಧ್ಯತೆ ಇದೆ. ಇದರಿಂದ ದೇಶದಲ್ಲಿ ಉಂಟಾಗಿದ್ದ ಎಲ್‌ಪಿಜಿ ಕೊರತೆ ಭೀತಿಗೆ ತಾತ್ಕಾಲಿಕ ಪರಿಹಾರ ಸಿಗುವ ನಿರೀಕ್ಷೆಯಿದೆ.

ಮಾರ್ಚ್ 12ರಂದು ಕಚ್ಚಾ ತೈಲ ಹೊತ್ತ ಮೊದಲ ಹಡಗು ಮುಂಬೈ ತಲುಪಿತ್ತು. ನಂತರ ಮಾರ್ಚ್ 16ರಂದು ಎಲ್‌ಪಿಜಿ ಸಾಗಿಸುತ್ತಿದ್ದ ಶಿವಾಲಿಕ್ ಹಡಗು ಗುಜರಾತ್‌ನ ಮುಂದ್ರಾ ಬಂದರಿಗೆ ಆಗಮಿಸಿತು. ಈ ಹಡಗಿನಲ್ಲಿ ಒಟ್ಟು 46 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಇದ್ದು, ಅದರಲ್ಲಿ ಸುಮಾರು 20 ಸಾವಿರ ಮೆಟ್ರಿಕ್ ಟನ್ ಅನ್ನು ಮುಂದ್ರಾ ಬಂದರಿನಲ್ಲಿ ಇಳಿಸಲಾಗಿದೆ.

ಉಳಿದ 26 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ಇಂದೇ ಮಂಗಳೂರು ಬಂದರಿಗೆ ತಂದು ಅನ್‌ಲೋಡ್ ಮಾಡುವ ಸಾಧ್ಯತೆ ಇದೆ. ಇದರಿಂದ ದೇಶದಲ್ಲಿ ಉಂಟಾಗಿದ್ದ ಎಲ್‌ಪಿಜಿ ಕೊರತೆ ಭೀತಿಗೆ ತಾತ್ಕಾಲಿಕ ರಿಲೀಫ್ ಸಿಗುವ ನಿರೀಕ್ಷೆಯಿದೆ.

ಇದರ ಜೊತೆಗೆ ನಂದಾದೇವಿ ಮತ್ತು ಜಗ್ ಲಾಡಿ ಎಂಬ ಮತ್ತೆರಡು ಹಡಗುಗಳು ಭಾರತ ತಲುಪುವ ಸಾಧ್ಯತೆ ಇದೆ. ನಂದಾದೇವಿ ಹಡಗಿನಲ್ಲಿ ಸುಮಾರು 40 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಇದ್ದು, ಜಗ್ ಲಾಡ್ಕಿ ಹಡಗು ಸುಮಾರು 81 ಸಾವಿರ ಟನ್ ಕಚ್ಚಾ ತೈಲವನ್ನು ಹೊತ್ತು ಬರುತ್ತಿದೆ.

ಪೆಟ್ರೋಲಿಯಂ ಡೀಲರ್ಸ್‌ಗಳ ಅಂದಾಜಿನ ಪ್ರಕಾರ, ಈ ಎರಡು ಹಡಗುಗಳಿಂದ ಒಟ್ಟು ಸುಮಾರು 92,700 ಮೆಟ್ರಿಕ್ ಟನ್ ಎಲ್‌ಪಿಜಿ ಲಭ್ಯವಾಗಲಿದ್ದು, ಇದು ದೇಶದ ಅವಶ್ಯಕತೆಗೆ ಕೇವಲ 2 ದಿನಗಳ ಮಟ್ಟಿಗೆ ಮಾತ್ರ ಸಾಕಾಗಬಹುದು.

ಇದನ್ನೆಲ್ಲ ಮೀರಿ, ಇನ್ನೂ 20ಕ್ಕೂ ಹೆಚ್ಚು ಭಾರತೀಯ ಹಡಗುಗಳು ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿ ಕೊಂಡಿವೆ. ಇದೇ ವೇಳೆ ಇರಾನ್‌ನಲ್ಲಿ ಯುದ್ಧದ ಪರಿಣಾಮವಾಗಿ ವೈದ್ಯಕೀಯ ತುರ್ತು ಪರಿಸ್ಥಿತಿ ಉಂಟಾಗಿರುವುದರಿಂದ, ಭಾರತದಿಂದ ಔಷಧಿ ಮತ್ತು ವೈದ್ಯಕೀಯ ನೆರವು ಒದಗಿಸಿದರೆ ಉಳಿದ ಹಡಗುಗಳನ್ನು ಬಿಡುಗಡೆ ಮಾಡುವ ಬಗ್ಗೆ ಇರಾನ್ ಮನವಿ ಮಾಡಿದೆ ಎಂಬ ಮಾಹಿತಿ ಲಭ್ಯವಾಗಿದೆ. ಒಟ್ಟಿನಲ್ಲಿ, ಜಾಗತಿಕ ಉದ್ವಿಗ್ನತೆ ನಡುವೆಯೂ ಭಾರತಕ್ಕೆ ತೈಲ ಮತ್ತು ಎಲ್‌ಪಿಜಿ ಸರಬರಾಜು ಕ್ರಮೇಣ ಪುನರಾರಂಭವಾಗುತ್ತಿರುವುದು ಸ್ವಲ್ಪ ಮಟ್ಟಿನ ನಿಟ್ಟಿನಲ್ಲಿ ನೆಮ್ಮದಿ ತಂದಿದೆ.

# ಕೇಂದ್ರದ ಅನುದಾನ ಸಕಾಲಕ್ಕೆ ಬಳಸದ ಸರ್ಕಾರದ ವಿರುದ್ಧ ಅಶೋಕ್ ಕಿಡಿ



ಬೆಂಗಳೂರು, ಮಾ.17 - ಕೇಂದ್ರ ಸರ್ಕಾರ ನೀಡಿದ ಅನುದಾನವನ್ನೂ ರಾಜ್ಯಸರ್ಕಾರ ಸಕಾಲಕ್ಕೆ ಬಳಸಲಾಗದೆ ಮರಳಿ ಕಳುಹಿಸುತ್ತಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ.

ಈ ಸಂಬಂಧ ತಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಅಭಿವೃದ್ಧಿ ಶೂನ್ಯ ಕಾಂಗ್ರೆಸ್ ಸರ್ಕಾರಕ್ಕೆ ಕೇಂದ್ರ ಕೊಟ್ಟ ಹಣವನ್ನೂ ಬಳಸಲಾಗದ ದೌರ್ಭಾಗ್ಯ. ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವಂತಿದೆ ರಾಜ್ಯ ಕಾಂಗ್ರೆಸ್ ಸರ್ಕಾರದ ಸ್ಥಿತಿ ಎಂದು ಟೀಕಿಸಿದ್ದಾರೆ.

ಒಂದೆಡೆ ರಾಜ್ಯದ ಖಜಾನೆ ಖಾಲಿ ಮಾಡಿ, ಅಭಿವೃದ್ಧಿ ಕೆಲಸಗಳಿಗೆ ನಯಾಪೈಸೆ ಅನುದಾನ ನೀಡಲು ಯೋಗ್ಯತೆ ಇಲ್ಲದೆ ದಿವಾಳಿಯಾಗಿರುವ ಈ ಸರ್ಕಾರ, ಇನ್ನೊಂದೆಡೆ ಕೇಂದ್ರದ ಅನುದಾನವನ್ನು ಬಳಸಲಾಗದೆ ವಾಪಸ್ ನೀಡುತ್ತಿದೆ ಎಂದು ಆಪಾದಿಸಿದ್ದಾರೆ.

ಸಿಟೀಸ್ 2.0 ಯೋಜನೆಯಡಿ ನಗರಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದ ಮೊದಲ ಕಂತಿನ ಹಣವನ್ನು ಬಳಸುವಲ್ಲಿ ವಿಫಲವಾಗಿರುವ ಕಾಂಗ್ರೆಸ್ ಸರ್ಕಾರ, ಈಗ ಆ ಹಣವನ್ನು ಕೇಂದ್ರಕ್ಕೆ ವಾಪಸ್ ನೀಡಬೇಕಾದ ಪರಿಸ್ಥಿತಿ ತಂದೊಡ್ಡಿದೆ. ಇದು ಕೇವಲ ಆಡಳಿತಾತಕ ವೈಫಲ್ಯವಲ್ಲ, ರಾಜ್ಯದ ಜನತೆಗೆ ಮಾಡುತ್ತಿರುವ ಮಹಾ ದ್ರೋಹ ಎಂದಿದ್ದಾರೆ.

ಬರೀ ಡಿನ್ನರ್ ಮೀಟಿಂಗ್‌ಗಳು, ಔತಣಕೂಟಗಳು, ರಾಜಕೀಯ ಮೇಲಾಟಗಳಲ್ಲೇ ಕಾಲ ಕಳೆಯುತ್ತಿರುವ ಸಿಎಂ ಹಾಗೂ ಡಿಸಿಎಂ ಅವರೇ, ಅನುದಾನ ಬಳಸಲು ನಿಮ ಸರ್ಕಾರಕ್ಕೆ ಯೋಗ್ಯತೆ ಇಲ್ಲದಿದ್ದರೆ ಅಧಿಕಾರ ಬಿಟ್ಟು ತೊಲಗಿ. ನಿಮ್ಮ ಈ ನಿಷ್ಕ್ರಿಯತೆಯಿಂದಾಗಿ ರಾಜ್ಯದ ಅಭಿವೃದ್ಧಿ ಹಳಿ ತಪ್ಪುತ್ತಿದೆ. ಈ ಭ್ರಷ್ಟ ಮತ್ತು ಅದಕ್ಷ ಕಾಂಗ್ರೆಸ್ ಸರ್ಕಾರ ತೊಲಗುವವರೆಗೂ ಕರ್ನಾಟಕದ ಪ್ರಗತಿ ಸಾಧ್ಯವೇ ಇಲ್ಲ. ಇದು ಮಾತ್ರ ಗ್ಯಾರೆಂಟಿ ಎಂದು ಅವರು ವ್ಯಂಗ್ಯವಾಡಿದ್ದಾರೆ.

# 50 ಅಡಿ ಆಳದ ಬಾವಿಗೆ ಬಿದ್ದ 2 ವರ್ಷದ ಮಗು ; ಪ್ರಾಣಾಪಾಯದಿಂದ ಪಾರು



ಶಿರಸಿ, ಮಾ. 17 - ಆಟವಾಡುತ್ತಿದ್ದ ಎರಡು ವರ್ಷದ ಪುಟ್ಟ ಮಗುವೊಂದು ಆಕಸ್ಮಿಕವಾಗಿ 50 ಅಡಿ ಆಳದ ಬಾವಿಗೆ ಬಿದ್ದರೂ, ಸ್ಥಳೀಯ ವ್ಯಕ್ತಿಯೊಬ್ಬರ ಸಮಯಪ್ರಜ್ಞೆ ಮತ್ತು ಸಾಹಸದಿಂದಾಗಿ ಯಾವುದೇ ಗಾಯಗಳಿಲ್ಲದೇ ಪ್ರಾಣಾಪಾಯದಿಂದ ಪಾರಾಗಿರುವ ರೋಚಕ ಘಟನೆ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಕಸ್ತೂರ್ಬಾ ನಗರದಲ್ಲಿ ನಡೆದಿದೆ.

ಕಸ್ತೂರ್ಬಾ ನಗರದ ನಿವಾಸಿಯಾದ ಭುವಿ ಎಂಬ ಎರಡು ವರ್ಷದ ಮಗು ಎಂದಿನಂತೆ ಮನೆಯ ಅಂಗಳದಲ್ಲಿ ಆಟವಾಡುತ್ತಿತ್ತು. ಮನೆಯವರೆಲ್ಲರೂ ಕೆಲಸದಲ್ಲಿ ಮಗ್ನರಾಗಿದ್ದಾಗ, ಮಗು ಆಟವಾಡುತ್ತಾ ಮುಂಭಾಗದಲ್ಲಿದ್ದ ತೆರೆದ ಬಾವಿಗೆ ಬಿದ್ದಿದೆ. ಮಧ್ಯಾಹ್ನ ಊಟದ ಸಮಯದಲ್ಲಿ ಮಗು ಕಾಣದಿದ್ದಾಗ ಆತಂಕಗೊಂಡ ಮನೆಯವರು ಸುತ್ತಮುತ್ತ ಹುಡುಕಾಡಿದ್ದಾರೆ. ಬಾವಿಯಲ್ಲಿ ಮಗುವಿನ ಅಳುವಿನ ಶಬ್ದ ಕೇಳಿಬಂದಾಗ ಮನೆಯವರ ಎದೆಬಡಿತ ಜೋರಾಗಿದೆ.

ಮಗು ಬಾವಿಗೆ ಬಿದ್ದ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳೀಯ ನಿವಾಸಿ ಹಾಗೂ ಸಮಾಜ ಸೇವಕರಾಗಿ ಗುರುತಿಸಿಕೊಂಡಿರುವ ಪಯ್ಯು ಚವಟಿ ಅವರು ತಕ್ಷಣವೇ ಕಾರ್ಯಪ್ರವೃತ್ತರಾದರು. ಸುಮಾರು 50 ಅಡಿ ಆಳವಿದ್ದ ಕಗ್ಗತ್ತಲ ಬಾವಿಗೆ ಹಗ್ಗದ ಸಹಾಯದಿಂದ ಪ್ರಾಣದ ಹಂಗು ತೊರೆದು ಇಳಿದಿದ್ದಾರೆ. ಬಾವಿಯ ಒಳಗಿದ್ದ ಮೋಟಾರ್ ಪೈಪ್‌ಗೆ ಮಗುವಿನ ಬಟ್ಟೆ ಸಿಲುಕಿಕೊಂಡಿದ್ದರಿಂದ, ಮಗು ನೀರಿನಲ್ಲಿ ಮುಳುಗದೇ ಪೈಪ್ ಆಸರೆಯಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಸಾವಿನೊಂದಿಗೆ ಹೋರಾಡುತ್ತಿತ್ತು. ಪಯ್ಯ ಅವರು ಜಾಗರೂಕತೆಯಿಂದ ಮಗುವನ್ನು ಎತ್ತಿಕೊಂಡು ಸುರಕ್ಷಿತವಾಗಿ ಹೊರಬಂದಿದ್ದಾರೆ.

ಅಷ್ಟು ಎತ್ತರದಿಂದ ಬಿದ್ದಿದ್ದರೂ ಮಗುವಿಗೆ ಸಣ್ಣ ಗಾಯವೂ ಆಗದಿರುವುದು ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ. ಮಗು ಸುರಕ್ಷಿತವಾಗಿ ಮೇಲೆ ಬರುತ್ತಿದ್ದಂತೆಯೇ ಅಜ್ಜಿ ಜಯಮ್ಮ ಹಾಗೂ ಕುಟುಂಬಸ್ಥರು ಭಾವುಕರಾಗಿ ಕಣ್ಣೀರು ಹಾಕಿದರು. ಮಗುವನ್ನು ರಕ್ಷಿಸಿದ ಪಯ್ಯ ಚವಟಿ ಅವರ ಸಾಹಸಕ್ಕೆ ಇಡೀ ನಗರದಾದ್ಯಂತ ವ್ಯಾಪಕ ಶ್ಲಾಘನೆ ವ್ಯಕ್ತವಾಗುತ್ತಿದೆ.

ಘಟನೆ ನಡೆದಾಗ ಮಧ್ಯಾಹ್ನ ಸುಮಾರು 1:30 ಆಗಿತ್ತು. ಬೆಂಗಳೂರಿಗೆ ಹೋಗಬೇಕೆಂದು ಸಿದ್ಧತೆ ನಡೆಸಿದ್ದೆ. ಓಣಿಯಲ್ಲಿ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ಏನಾಯಿತೆಂದು ಮನೆಯಿಂದ ಹೊರಗಡೆ ಹೋಗಿ ನೋಡಿದಾಗ ಮಗು ಬಾವಿಯಲ್ಲಿ ಬಿದ್ದಿರುವುದು ಗೊತ್ತಾಯಿತು. ಎಲ್ಲರೂ ಪಾಪ ಎಂದು ಗೋಳಾಡುತ್ತಿದ್ದರು. ಆದರೆ, ನನಗೆ ಮಗುವಿನ ಅಳುವಿನ ಧ್ವನಿ ಕೇಳಿ ತಡೆಯಲಾಗಲಿಲ್ಲ. ಒಂದು ಕ್ಷಣವೂ ವ್ಯರ್ಥ ಮಾಡದ ಪಕ್ಕದ ಮನೆಯಲ್ಲಿದ್ದ ಹಗ್ಗವನ್ನು ತಂದು ತಕ್ಷಣ ಬಾವಿಗೆ ಇಳಿದೆ. ನೀರಿಗೆ ಇಳಿಸಲಾಗಿದ್ದ ಪಂಪ್ ಪೈಪ್ ಅನ್ನು ಮಗು ಗಟ್ಟಿಯಾಗಿ ಹಿಡಿದುಕೊಂಡು ಅಳುತ್ತಿತ್ತು. ನಾನು ಹಗ್ಗ ಹಿಡಿದು ಅವಳಲ್ಲಿಗೆ ತೆರಳುತ್ತಿದ್ದಂತೆ ಮಗು ನನ್ನನ್ನು ಗಟ್ಟಿಯಾಗಿ ತಬ್ಬಿಕೊಂಡಿತು. ಹಾಗೆಯೇ ಜನರ ನೆರವಿನೊಂದಿಗೆ ಸುರಕ್ಷಿತವಾಗಿ ಮಗುವನ್ನು ಮೇಲೆ ತಂದೆ. ಮಗುವಿನ ಆಯುಷ್ಯ ಗಟ್ಟಿ ಇತ್ತು. ಹಾಗಾಗಿ 50 ಅಡಿ ಆಳದ ಬಾವಿಗೆ ಬಿದ್ದರೂ ಬದುಕಿದೆ. ಇದರಲ್ಲಿ ನನ್ನ ಪಾತ್ರ ಏನೂ ಇಲ್ಲ. ಆ ಪರಿಸ್ಥಿತಿಯಲ್ಲಿ ಯಾರು ಬಿದ್ದಿದ್ದರೂ ನಾನು ಇದನ್ನೇ ಮಾಡುತ್ತಿದ್ದೆ. ಮಗು ಪ್ರಾಣಾಪಾಯದಿಂದ ಪಾರಾಗಿದ್ದೇ ನನಗೆ ತೃಪ್ತಿ ತಂದಿದೆ ಎಂದು ಸಮಾಜ ಸೇವಕ ಪಯ್ಯು ಚವಟಿ ಅವರು ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ.

# ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನವನ್ನು ಪ್ರೇರಣಾ ದಿನವನ್ನಾಗಿ ಆಚರಿಸಿದ ಅಭಿಮಾನಿಗಳು ಹಾಗೂ ಕುಟುಂಬಸ್ಥರು



ಬೆಂಗಳೂರು, ಮಾ. 17 - ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 51 ನೇ ಜನುಮ ದಿನವನ್ನು ಅಭಿಮಾನಿಗಳು ಹಾಗೂ ಕುಟುಂಬಸ್ಥರು ಪ್ರೇರಣಾ ದಿನವನ್ನಾಗಿ ಆಚರಿಸಿದರು. ನಗರದ ಕಂಠೀರವ ಸ್ಟುಡಿಯೋ ಆವರಣದಲ್ಲಿರುವ ಅವರ ಸಮಾಧಿಗೆ ಕುಟುಂಬಸ್ಥರು ಹಾಗೂ ಸಹಸ್ರಾರು ಅಭಿಮಾನಿಗಳು ಭೇಟಿ ನೀಡಿ ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅವರ ಧರ್ಮಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಸಹೋದರರಾದ ಶಿವರಾಜ್ ಕುಮಾರ್ ಹಾಗೂ ರಾಘವೇಂದ್ರ ರಾಜ್‌ಕುಮಾರ್, ಕುಟುಂಬದ ಸದಸ್ಯರಾದ ವಿನಯ್ ರಾಜ್‌ಕುಮಾರ್ ಮತ್ತು ಯುವರಾಜ್ ಕುಮಾರ್ ಸೇರಿದಂತೆ ಇತರ ಬಂಧುಗಳು ಸಮಾಧಿಗೆ ಪುಷ್ಪನಮನ ಸಲ್ಲಿಸಿ, ಸಮಾಧಿ ಮುಂದೆ ಕೇಕ್ ಕತ್ತರಿಸುವ ಮೂಲಕ ಅಪ್ಪುವನ್ನು ನೆನೆದರು.

ಅಪ್ಪು ಜನುಮ ದಿನದ ಅಂಗವಾಗಿ ಸಮಾಧಿಗೆ ವಿಶೇಷವಾಗಿ ಹೂವಿನ ಅಲಂಕಾರ ಮಾಡಲಾಗಿತ್ತು. ಕಳೆದ ರಾತ್ರಿ ಅಭಿಮಾನಿಗಳು ಸಮಾಧಿ ಬಳಿ ಜಮಾಯಿಸಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಮಂಗಳವಾರ ಮುಂಜಾನೆಯಿಂದಲೇ ಸಾವಿರಾರು ಅಭಿಮಾನಿಗಳು ಕಂಠೀರವ ಸ್ಟುಡಿಯೋ ಆವರಣಕ್ಕೆ ಆಗಮಿಸಿ ಸಮಾಧಿಗೆ ಪುಷ್ಪಗುಚ್ಛ ಅರ್ಪಿಸಿ ಕೇಕ್ ಕತ್ತರಿಸಿ ತಮ್ಮ ನೆಚ್ಚಿನ ನಟನಿಗೆ ಜನುಮ ದಿನದ ಶುಭಾಶಯ ಕೋರಿದರು.

ಈ ಬಾರಿ ಮಹಿಳೆಯೊಬ್ಬರು ಪುರಿಯಿಂದ ತಯಾರಿಸಿದ ವಿಶೇಷ ಹಾರವನ್ನು ತಂದು ಸಮಾಧಿಗೆ ಅರ್ಪಿಸಿದ್ದು ಗಮನ ಸೆಳೆಯಿತು. ಕೆಲ ಅಭಿಮಾನಿಗಳು ಅಪ್ಪುವಿನ ಭಾವಚಿತ್ರಗಳನ್ನು ಹಿಡಿದು ಜೈಕಾರ ಹಾಕಿದರು. ಇನ್ನೂ ಕೆಲವರು ಅವರ ಚಿತ್ರಗಳ ಸಂಭಾಷಣೆಗಳನ್ನು ಹೇಳುತ್ತಾ ತಮ್ಮ ನೆಚ್ಚಿನ ನಟನನ್ನು ಸ್ಮರಿಸಿದರು. ಹಲವರು ಭಾವುಕರಾಗಿ ಕಣ್ಣೀರಿಟ್ಟ ದೃಶ್ಯವೂ ಕಂಡುಬಂತು. ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಬಂದ ಅಭಿಮಾನಿಗಳು ಸ್ವಯಂಪ್ರೇರಿತವಾಗಿ ರಕ್ತದಾನ ಶಿಬಿರ, ಅನ್ನಸಂತರ್ಪಣೆ, ಗೀತಗಾಯನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದ್ದರು.

## ತುಳುನಾಡ ಸೇವಾ ಸಮಾಜ ಮೀರಾ-ಭಾಯಂದರ್ ವತಿಯಿಂದ ಸಂಸ್ಥಾಪಕ ದಿನಾಚರಣೆ; ವಿಶ್ವ ಮಹಿಳಾ ದಿನಾಚರಣೆ ಹಾಗೂ ಹಳದಿ ಕುಂಕುಮ ಕಾರ್ಯಕ್ರಮ

# ಮಾನವ ಧರ್ಮವೇ ಸನಾತನ ಧರ್ಮ - ಡಾ. ಸುರೇಂದ್ರ ಕುಮಾರ್ ಹೆಗ್ಡೆ



ರೋಹಿತ್ ಶೆಟ್ಟಿಯವರನ್ನು ಸನ್ಮಾನಿಸಿದಾಗ.



ನಾರಾಯಣ ಗೌಡ ಪುತ್ತಿಗೆಯವರನ್ನು ಸನ್ಮಾನಿಸಿದಾಗ.



ಶಂಕರ ಪೂಜಾರಿಯವರನ್ನು ಸನ್ಮಾನಿಸಿದಾಗ.

(ಚಿತ್ರ, ವರದಿ : ಉಮೇಶ್ ಕೆ. ಅಂಚನ್)

ಮೀರಾರೋಡ್, ಮಾ. 17- ನಮ್ಮ ಜೀವನ ಎಂಬುದು ಶಾಶ್ವತವಾದುದಲ್ಲ. ಈ ಶಾಶ್ವತವಲ್ಲದ ಜೀವನವನ್ನು ನಾವು ಧರ್ಮ ಕಾರ್ಯ, ಸತ್ಕಾರ್ಯಗಳ ಮೂಲಕ ಸಾರ್ಥಕಗೊಳಿಸುವ ಪ್ರಯತ್ನ ಮಾಡಬೇಕು. ತಾನು ಬದುಕಿ ಇತರರನ್ನೂ ಬದುಕಿಸುವ ಬಗ್ಗೆ ಚಿಂತನೆ ನಮ್ಮಲ್ಲಿರಬೇಕು. ಜಾತಿ ಮತ ಭೇದವಿಲ್ಲದೆ ಕಷ್ಟದಲ್ಲಿ ಇರುವವರ ನೋವಿಗೆ ಸ್ಪಂದಿಸಿ ಸಹಬಾಳ್ವೆಯಿಂದ ಬಾಳುವುದೇ ಮಾನವ ಧರ್ಮ. ಈ ಮಾನವ ಧರ್ಮವೇ ಸನಾತನ ಧರ್ಮ. ಮಾನವ ಧರ್ಮ ಏನೆಂಬುದುದಾಗಿ ನಮಗೆ ಭಗವದ್ಗೀತೆ ಕಲಿಸುತ್ತದೆ. ನಾವು ಸಾಮಾಜಿಕ, ಧಾರ್ಮಿಕ, ಸಾಂಸಾರಿಕ, ವ್ಯವಹಾರಿಕ ರಾಜಕೀಯವಾಗಿ ಹೇಗೆ ಬದುಕಬೇಕೆಂಬುದಾಗಿ ಭಗವದ್ಗೀತೆ ನಮಗೆ ಮಾರ್ಗದರ್ಶಕವಾಗಿದೆ. ಅಂತಹ ಭಗವದ್ಗೀತೆಗೆ ನಮ್ಮ ದೇಶದಲ್ಲಿ ಧರ್ಮದ ಲೇಪನ ಹಚ್ಚಲಾಗಿದೆ. ಹಾಗಾಗಿ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಈ ಭಗವದ್ಗೀತೆಯನ್ನು ಅಳವಡಿಸಿಕೊಳ್ಳಲಾಗಿಲ್ಲ. ಭಗವದ್ಗೀತೆಯು ಸಮಾಜಕ್ಕೆ ಸಾಮರಸ್ಯ ಹಾಗೂ ನೀತಿ ಬೋಧನೆಯನ್ನು ಸಾರುವ ದೊಡ್ಡ ಗ್ರಂಥವಾಗಿದೆ. ಹಾಗಾಗಿ ಈ ಭಗವದ್ಗೀತೆಯನ್ನು ಎಲ್ಲರ ಮನೆಯಲ್ಲೂ ಇಟ್ಟುಕೊಳ್ಳಬೇಕು. ಎಲ್ಲರೂ ಓದುವಂತಾಗಬೇಕು. ಸಾಮರಸ್ಯದ, ಸಂಸ್ಕಾರಯುತ ಬಾಳಿಗೆ ಭಗವದ್ಗೀತೆ ಸಹಕಾರಿಯಾಗಿವೆ. ಮಹಿಳೆಯರು ತಮ್ಮ ಮಕ್ಕಳಿಗೆ ತುಳುನಾಡ ಸಂಸ್ಕೃತಿಯನ್ನು ತಿಳಿಯಪಡಿಸಬೇಕು. ಚಿಣ್ಣರ ಬಿಂಬವು ಮಕ್ಕಳಿಗೆ ಈ ಕೆಲಸವನ್ನು ಮಾಡುತ್ತಿದೆ. ತುಳುನಾಡ ಸೇವಾ ಸಮಾಜವು ಕಳೆದ 25 ವರ್ಷಗಳಿಂದ ಹೆಸರಿಗೆ ತಕ್ಕಂತೆ ಸಮಾಜ ಸೇವೆಯಲ್ಲಿ ನಿರತವಾಗಿರುವುದು ಅಭಿನಂದನೀಯ ಎಂದು ಕನ್ನಡಿಗ ಕಲಾವಿದರ ಪರಿಷತ್ತು ಮಹಾರಾಷ್ಟ್ರ ಅಧ್ಯಕ್ಷ ಡಾ. ಸುರೇಂದ್ರ ಕುಮಾರ್ ಹೆಗ್ಡೆ ನುಡಿದರು.

ಅವರು ಮಾ. 15ರ ಆದಿತ್ಯವಾರದಂದು ತುಳುನಾಡ ಸೇವಾ ಸಮಾಜ ಮೀರಾ-ಭಾಯಂದರ್ ಇದರ ಮೀರಾರೋಡ್ ಪೂರ್ವ ಸಾಯಿಬಾಬಾ ನಗರದ ಸೈಂಟ್ ಥೋಮಸ್ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ಸಂಸ್ಥಾಪಕ ದಿನಾಚರಣೆ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆರಂಭದಲ್ಲಿ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಅತಿಥಿಗಳು ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಸ್ಥೆಯ ಸದಸ್ಯೆಯರಿಂದ ಭಜನೆ, ಕುಣಿತ ಭಜನೆ, ವಿವಿಧ ಸಂಘಟನೆಗಳ ಸದಸ್ಯೆಯರಿಂದ ನೃತ್ಯ ವೈವಿಧ್ಯ, ಅರಸಿನ ಕುಂಕುಮ, ಗೀತಾ ಎಲ್. ಭಟ್ ಬಳಗದವರಿಂದ 'ಭೀಷ್ಮ ವಿಜಯ' ಯಕ್ಷಗಾನ ತಾಳಮದ್ದಳೆ ಹಾಗೂ ಚಿಣ್ಣರ ಬಿಂಬ ಮೀರಾರೋಡ್ ಶಿಬಿರದ ಮಕ್ಕಳಿಂದ ಶಾಂತಾ ಆಚಾರ್ಯ ರಚಿಸಿ ನಿರ್ದೇಶಿಸಿದ ನಾಟಕ 'ತೊಟ್ಟಿಲು' ಪ್ರದರ್ಶನಗೊಂಡಿತು.



ಶಾಲಿನಿ ಎಸ್. ಶೆಟ್ಟಿಯವರನ್ನು ಸನ್ಮಾನಿಸಿದಾಗ.



'ವಿಶ್ವ ಮಾನವಾಧಿಕಾರ ಲೋಕ ಪರಿಷತ್' ಮಾಸಿಕದ ಆವೃತ್ತಿಯ ಬಿಡುಗಡೆ.

ಈ ಸಂದರ್ಭದಲ್ಲಿ ಪುಣೆ ಬಂಟ್ಸ್ ಎಸೋಸಿಯೇಶನಿನ ಅಧ್ಯಕ್ಷ ರೋಹಿತ್ ಶೆಟ್ಟಿಯವರನ್ನು 'ಸಂಘಟನಾ ಸಾರಥಿ' ಬಿರುದು ನೀಡಿ ಮತ್ತು ಸ್ತ್ರೀಶಕ್ತಿ ಫೌಂಡೇಶನ್ ಅಧ್ಯಕ್ಷೆ ಶಾಲಿನಿ ಎಸ್. ಶೆಟ್ಟಿಯವರಿಗೆ 'ಸಂಘಟನಾ ಐಸಿರಿ' ಬಿರುದಿನೊಂದಿಗೂ, ಪರಿಸರದ ಸಮಾಜ ಸೇವಕರುಗಳಾದ ಸಂಸ್ಥೆಯ ಉಪಾಧ್ಯಕ್ಷ ನಾರಾಯಣ ಗೌಡ ಪುತ್ತಿಗೆ ಮತ್ತು ಶಂಕರ್ ಕೆ. ಪೂಜಾರಿಯವರನ್ನು ಸನ್ಮಾನಿಸಲಾಯಿತು.

ಸನ್ಮಾನಿತ ರೋಹಿತ್ ಶೆಟ್ಟಿ ಮಾತನಾಡಿ, ಮೂವತ್ತು ವರ್ಷಗಳ ಸಮಾಜ ಸೇವೆಗೆ ಪ್ರತ್ಯುತ್ತರವಾಗಿ ಕಟೀಲು ಅಮ್ಮನವರ ಪ್ರಸಾದ ರೂಪದಲ್ಲಿ ದೊರೆತ ಸನ್ಮಾನವು ಬಹಳ ಸಂತಸ ನೀಡಿದೆ. ನಮ್ಮ ಜೀವನದಲ್ಲಿ ಯಾವುದೇ ಕಷ್ಟ ಬಂದರೂ ಮುಖದಲ್ಲಿ ನಗುವಿರಬೇಕು. ತುಳುನಾಡ ದೈವ ದೇವರಲ್ಲಿ ಭಕ್ತಿ ಮುಖ್ಯ. ತಾಯಂದಿರು ತಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಒಟ್ಟಿಗೆ ತುಳು ಭಾಷೆಯನ್ನು ಕಲಿಸಬೇಕು ಎಂದು ಹೇಳಿದರು. ಶಾಲಿನಿ ಎಸ್. ಶೆಟ್ಟಿ, ನಾರಾಯಣ ಗೌಡ ಹಾಗೂ ಶಂಕರ್ ಪೂಜಾರಿ ತಮ್ಮ ಸಮಾಜ ಸೇವೆಯನ್ನು ಗುರುತಿಸಿ ನೀಡಿದ ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿದರು. ಸನ್ಮಾನ ಪತ್ರವನ್ನು ಜಯಲಕ್ಷ್ಮೀ ಸುವರ್ಣ, ಶಾಂತಾ ಆಚಾರ್ಯ, ವಸಂತಿ ಶೆಟ್ಟಿ ಹಾಗೂ ಭಾರತಿ ಅಂಚನ್ ವಾಚಿಸಿದರು.

ಸಮಾರಂಭದ ಮುಖ್ಯ ಅತಿಥಿ ಮಾಜಿ ನಗರಸೇವಕ, ಉದ್ಯಮಿ ಅರವಿಂದ್ ಎಂ. ಶೆಟ್ಟಿ ವಿಶ್ವ ಮಹಿಳಾ ದಿನಾಚರಣೆಯ ಬಗ್ಗೆ ಮಾತನಾಡಿ, ಇಂದು ಸ್ತ್ರೀಶಕ್ತಿಯು ಪ್ರತಿಯೊಬ್ಬ ಪುರುಷರ ಒಟ್ಟಿಗೆ ಸಮನಾಗಿ ಕಾರ್ಯವೆಸಗುತ್ತಿದ್ದಾರೆ. ಮನೆಯಲ್ಲಿರುವ ಮಹಿಳೆಯರಲ್ಲಿ ಭರವಸೆ ಇಡಬೇಕು ಹಾಗೂ ಅವರ ಕೆಲಸಗಳಲ್ಲಿ ಸಹಕಾರ ಕೊಡಬೇಕು. ಇದರಿಂದ ನಾವು ನಮ್ಮ ಜೀವನದಲ್ಲಿ ಯಶಸ್ಸನ್ನು ಕಾಣಬಹುದು ಎಂದರು.

ಅತಿಥಿಗಳಾಗಿ ಆಗಮಿಸಿದ್ದ ರೈ ಸುಮತಿ ಎಜ್ಯುಕೇಶನ್ ಟ್ರಸ್ಟಿನ ಕಾರ್ಯಾಧ್ಯಕ್ಷ ಡಾ. ಅರುಣೋದಯ ಎಸ್. ರೈ ಬೆಳಿಯೂರುಗುತ್ತು, ಬಂಟರ ಸಂಘದ ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ರವೀಂದ್ರ ಶೆಟ್ಟಿ ಕೊಟ್ರಪಾಡಿ ಹಾಗೂ ವರ್ಲ್ಡ್ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ, ಸಮಾಜರತ್ನ ಡಾ. ಕೆ. ಟಿ. ಶಂಕರ್ ಶೆಟ್ಟಿ ಸಂದರ್ಭೋಚಿತವಾಗಿ ಮಾತನಾಡಿದರು ಹಾಗೂ ಡಾ. ಕೆ. ಟಿ. ಶಂಕರ್ ಸಂಪಾದಕೀಯದ 'ವಿಶ್ವ ಮಾನವಾಧಿಕಾರ ಹಕ್ಕುಗಳ ಲೋಕ ಪರಿಷತ್' ಮಾಸ ಪತ್ರಿಕೆಯ ಆವೃತ್ತಿಯನ್ನು ಬಿಡುಗಡೆ ಮಾಡಲಾಯಿತು.

ಅತಿಥಿಗಳನ್ನು ಹಾಗೂ ಪರಿಸರದ ಉದ್ಯಮಿಗಳನ್ನು, ಸಂಘ-ಸಂಸ್ಥೆಗಳ ಪದಾಧಿಕಾರಿಗಳನ್ನು ಹಾಗೂ ಸಂಸ್ಥೆಯ ಭಜನಾ ಗುರು ಭಾರತಿ ಉಡುಪರವರನ್ನು ಸತ್ಕರಿಸಲಾಯಿತು.

### ಜಾತಿ ಭೇದವಿಲ್ಲದೆ ಮಾಡುವ ಸಮಾಜ ಸೇವೆಗೆ ಸಂಘದ ಪದಾಧಿಕಾರಿಗಳ ಒಗ್ಗಟ್ಟು ಪ್ರೋತ್ಸಾಹ ಸಹಕಾರಿ - ಡಾ. ರವಿರಾಜ್ ಸುವರ್ಣ

ತುಳುನಾಡ ಸೇವಾ ಸಮಾಜವು ಕಳೆದ 25 ವರ್ಷಗಳಿಂದ ನಿರಂತರವಾಗಿ ಸಮಾಜ ಸೇವೆಯಲ್ಲಿ ನಿರತವಾಗಿದೆ. ಸಮಾಜದಲ್ಲಿ ಜಾತಿ ಮತ ಬೇಧವಿಲ್ಲದೆ ಶೈಕ್ಷಣಿಕ, ವೈದ್ಯಕೀಯ ಹಾಗೂ ಆರ್ಥಿಕ ಸಹಾಯ ನೀಡುತ್ತಿದೆ. ಹಲವಾರು ದಾನಿಗಳು ನಮ್ಮ ಸಮಾಜ ಸೇವೆಗೆ ವಿವಿಧ ರೂಪದಲ್ಲಿ ಸಹಕರಿಸುತ್ತಿದ್ದಾರೆ. ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರ ಒಗ್ಗಟ್ಟು ಸಮಾಜ ಸೇವೆಗೆ ಸಹಕಾರಿಯಾಗಿದೆ ಎಂದು ತುಳುನಾಡ ಸೇವಾ ಸಮಾಜದ ಅಧ್ಯಕ್ಷ ಡಾ. ರವಿರಾಜ್ ಸುವರ್ಣ ಹೇಳಿದರು.

ವೇದಿಕೆಯಲ್ಲಿ ಅತಿಥಿಗಳಾದ ನವತರುಣ ಮಿತ್ರ ಮಂಡಳಿಯ ಅಧ್ಯಕ್ಷ ಯೋಗೇಶ್ ಗಾಣಿಗ, ಬಂಟರ ಸಂಘ ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿಯ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಸಂಪತ್ ಶೆಟ್ಟಿ ಪಂಜದಗುತ್ತು, ಭಾರತ್ ಬ್ಯಾಂಕ್ ನಿರ್ದೇಶಕ ನರೇಶ್ ಕೆ. ಪೂಜಾರಿ ಹಾಗೂ ಸಂಸ್ಥೆಯ ಸಂಚಾಲಕ ಜಯಪ್ರಕಾಶ್ ಪೂಜಾರಿ, ಗೌರವಾಧ್ಯಕ್ಷ ಶಂಭು ಕೆ. ಶೆಟ್ಟಿ, ಗೌರವ ಕಾರ್ಯದರ್ಶಿ ಶೋಭಾ ವಿ. ಉಡುಪ, ಕೋಶಾಧಿಕಾರಿ ರವೀಂದ್ರ ಶೆಟ್ಟಿ ಸೂಡಾ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಅಮಿತಾ ಶೆಟ್ಟಿ, ಕಾರ್ಯದರ್ಶಿ ಸುನೀತಾ ಎ. ಸುವರ್ಣ, ಕೋಶಾಧಿಕಾರಿ ರೇಖಾ ಎಸ್. ಪೂಜಾರಿ, ಸಂಚಾಲಕಿ ಸುಶೀಲಾ ಶೆಟ್ಟಿ ಉಪಸ್ಥಿತರಿದ್ದರು.

ಶಾಂತಾ ಆಚಾರ್ಯ, ಭಾರತಿ ಉಡುಪ ಪ್ರಾರ್ಥನೆಗೈದರು. ಸಾಂಸ್ಕೃತಿಕ ಕಾರ್ಯಕ್ರಮವನ್ನು ವಾಣಿ ಡಿ. ಶೆಟ್ಟಿ ಹಾಗೂ ಸಭಾ ಕಾರ್ಯಕ್ರಮವನ್ನು ಜಿ. ಕೆ. ಕೆಂಚನಕೆರೆ ನಿರೂಪಿಸಿದರು.

ಸಂಸ್ಥೆಯ ಜೊತೆ ಕಾರ್ಯದರ್ಶಿ ಶೈಲೇಶ್ ಉದ್ಯಾವರ, ಜೊತೆ ಕೋಶಾಧಿಕಾರಿ ರಾಜೇಶ್ ಶೆಟ್ಟಿ ಕಾಪು, ಮಹಿಳಾ ವಿಭಾಗದ ಜೊತೆ ಕೋಶಾಧಿಕಾರಿಗಳಾದ ಸುಲೋಚನಾ ಮಾಬಿಯಾನ್, ಅನುಪಮಾ ಅಂಚನ್, ಮುಖ್ಯ ಸಲಹೆಗಾರ ವಿಜಯ್ ಶೆಟ್ಟಿ ಹೊಸಾಡು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾದ ಜೋಗಿ ಬಿಲ್ಲವ, ಪುರುಷೋತ್ತಮ ಕೋಟ್ಯಾನ್, ರವೀಂದ್ರ ಶೆಟ್ಟಿ ಕಾಪು, ಅರುಣ್ ನೊರೋನಾ, ಪುರುಷೋತ್ತಮ ಶೆಟ್ಟಿ, ಜಯಕರ್ ಶೆಟ್ಟಿ, ನಾರಾಯಣ ಶೆಟ್ಟಿ, ಗಂಗಾಧರ ಆರ್. ಶೇರಿಗಾರ್ ಮತ್ತು ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ್ದರು.

# ಮೂಡಬಿದ್ರೆ ಇನ್ಸ್‌ಪೆಕ್ಟರ್ ಸಂದೇಶ್ ಕಾಮಕಾಂಡ?:


## ಸಂತ್ರಸ್ತೆಯ ಮಗಳ ಮೇಲೂ ಕಣ್ಣು, ಆಡಿಯೋ ವೈರಲ್, ಅಮಾನತು

ಮಂಗಳೂರು,ಮಾ.17- ಮೂಡುಬಿದಿರೆ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸಂದೇಶ್ ಬಿ.ಜಿ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಹೊರಿಸಲಾಗಿದ್ದು, ಸಂತ್ರಸ್ಥೆಯ ಮಗಳ ಮೇಲೂ ಕಣ್ಣು ಹಾಕಿದ ಗಂಭೀರ ಆರೋಪ ಕೇಳಿಬಂದಿದೆ.

ಈ ಸಂಬಂಧ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಬೆಂಗಳೂರಿನಲ್ಲಿ ಮೂವರು ಮಹಿಳೆಯರು ದೂರು ಸಲ್ಲಿಸಿದ್ದು, ಈ ದೂರನ್ನು ಮುಖ್ಯಮಂತ್ರಿ, ಗೃಹ ಸಚಿವರು, ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ), ಸರಕಾರದ ಮುಖ್ಯ ಕಾರ್ಯದರ್ಶಿ ಮತ್ತು ರಾಜ್ಯ ಮಹಿಳಾ ಆಯೋಗಕ್ಕೆ ರವಾನಿಸಲಾಗಿದೆ ಎಂದು ತಿಳಿದುಬಂದಿದೆ.

ಮಂಗಳೂರು ಕಮಿಷನರೇಟ್ ವ್ಯಾಪ್ತಿಯ ಮೂಡಬಿದ್ರೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂದೇಶ್ ಪಿಜಿ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಕೇಳಿಬಂದಿದ್ದು, ಸಂತ್ರಸ್ಥೆ ಮಾತ್ರವಲ್ಲದೇ ಆಕೆಯ ಮಗಳ ಮೇಲೂ ಕಣ್ಣು ಹಾಕಿದ್ದ ಎಂದು ಸಂತ್ರಸ್ಥೆ ಗಂಭೀರ ಆರೋಪ ಮಾಡಿದ್ದಾರೆ. ಈ ಸಂಬಂಧ ಸಂತ್ರಸ್ಥೆ ಆಡಿಯೋ ಬಿಡುಗಡೆ ಮಾಡಿದ್ದು, ಈ ಪ್ರಕರಣ ಇದೀಗ ಇಡೀ ಪೊಲೀಸ್ ಇಲಾಖೆಯನ್ನೇ ತಲೆತಗ್ಗಿಸುವಂತೆ ಮಾಡಿದೆ.



ಈ ಸಂಬಂಧ ಸಂತ್ರಸ್ಥ ಮಹಿಳೆ ದೂರು ದಾಖಲಿಸಿದ್ದು, ದೂರಿನ ಪ್ರಕಾರ, ಸುಮಾರು 2 ವರ್ಷಗಳ ಹಿಂದೆ ಮಹಿಳೆಯೊಬ್ಬರ ಪತಿಯನ್ನು ಪ್ರಕರಣವೊಂದರಲ್ಲಿ ಬಂಧಿಸಲಾಗಿತ್ತು. ಇನ್ಸ್‌ಪೆಕ್ಟರ್ ತನ್ನ ಗಂಡನನ್ನು ಬಿಡುಗಡೆ ಮಾಡಬೇಕಾದರೆ, ತನ್ನೊಂದಿಗೆ ಲೈಂಗಿಕವಾಗಿ ಸಹಕರಿಸಬೇಕು ಎಂದು ಆಕೆಯ ಮೇಲೆ ಒತ್ತಡ ಹೇರಿದ್ದ. ಅಲ್ಲದೆ 25 ಲಕ್ಷ ರೂ ಬೇಡಿಕೆ ಇಟ್ಟಿದ್ದಲ್ಲದೆ, ಆಕೆಯ ಪತಿಯ ವಿರುದ್ಧ 'ರೌಡಿ ಶೀಟ್' ತೆರೆಯುವುದಾಗಿ ಬೆದರಿಕೆ ಕೂಡ ಹಾಕಿದ್ದ ಎಂದು ಆರೋಪಿಸಲಾಗಿದೆ. ಇನ್ನು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಮಂಗಳೂರು ಪೊಲೀಸ್ ಆಯುಕ್ತ ಸುಧೀರ್ ರೆಡ್ಡಿ ಅವರು ಆರೋಪಿ ಇನ್ಸ್ ಪೆಕ್ಟರ್ ಸಂದೇಶ್ ರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ಇನ್ಸ್‌ಪೆಕ್ಟರ್ ಸಂದೇಶ್ ಪಿಜಿ ಎಂಬುವವರ ವಿರುದ್ಧ ಲೈಂಗಿಕ ಕಿರುಕುಳ ಹಾಗೂ ಭ್ರಷ್ಟಾಚಾರದ ಗಂಭೀರ ಆರೋಪಗಳು ಕೇಳಿಬಂದಿವೆ. ಕೌಟುಂಬಿಕ ವ್ಯಾಜ್ಯ ಅಥವಾ ದೂರು ನೀಡಲು ಬರುವ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಈತ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ.

ಸಂತ್ರಸ್ತೆಯೊಬ್ಬಳ ಗಂಡನನ್ನು ಕೇಸ್‌ನಲ್ಲಿ ಸಿಲುಕಿಸಿ, ಆತನನ್ನು ಬಿಡುಗಡೆ ಮಾಡಲು 'ನನ್ನ ಜೊತೆ ಮಲಗಬೇಕು ಅಥವಾ 25 ಲಕ್ಷ ರೂಪಾಯಿ ನೀಡಬೇಕು' ಎಂದು ಇನ್ಸ್‌ಪೆಕ್ಟರ್ ಧಮಕಿ ಹಾಕಿರುವ ವಿಷಯ ಈಗ ಬೆಳಕಿಗೆ ಬಂದಿದೆ. 'ನಾನು ಪೋಸ್ಟಿಂಗ್‌ಗಾಗಿ ಗೃಹಸಚಿವರಿಗೆ 50 ಲಕ್ಷ ನೀಡಿ ಬಂದಿದ್ದೇನೆ' ಎಂದು ಈತ ಅಹಂಕಾರದಿಂದ ಹೇಳಿಕೊಂಡಿದ್ದಾನೆ ಎಂಬ ಆರೋಪವೂ ಕೇಳಿಬಂದಿದೆ. ಅಂತೆಯೇ ಇನ್ಸ್‌ಪೆಕ್ಟರ್ ಸಂದೇಶ್ ರಾತ್ರಿಯಲ್ಲಿ ಕಂಪೌಂಡ್ ಗೋಡೆ ಹಾರಿ ತನ್ನ ಮನೆಗೆ ನುಗ್ಗಿ, ತನ್ನ ಕೈ ಹಿಡಿದು ಎಳೆದುಕೊಂಡು ಹೋಗಿ, ನೃತ್ಯ ಮಾಡಲು ಒತ್ತಾಯಿಸುತ್ತಿದ್ದ ಎಂದು ದೂರುದಾರೆ ಆರೋಪಿಸಿದ್ದಾರೆ. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ನೇಮಕಗೊಂಡಾಗಲೂ ಆತ ಇದೇ ರೀತಿ ವರ್ತಿಸಿದ್ದ ಎಂದು ದೂರಿನಲ್ಲಿ ಹೇಳಲಾಗಿದೆ.

ತಾನು ಮಾತ್ರವಲ್ಲದೇ ಪಾಸ್‌ಪೋರ್ಟ್ ಪರಿಶೀಲನೆ ಮತ್ತು ಇತರ ಅಧಿಕೃತ ಕೆಲಸಗಳಿಗಾಗಿ ಪೊಲೀಸ್ ಠಾಣೆಗೆ ಭೇಟಿ ನೀಡಿದ ಮಹಿಳೆಯರು ಸಹ ಕಿರುಕುಳಕ್ಕೊಳಗಾಗಿದ್ದರು. ಆದರೆ ಅನೇಕ ಸಂತ್ರಸ್ಥೆಯರು ದೂರು ದಾಖಲಿಸಲು ಹಿಂಜರಿಯುತ್ತಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ.

ಈ ಪ್ರಕರಣದಲ್ಲಿ ಇನ್ನೊಂದು ಪ್ರಮುಖ ಅಂಶವೆಂದರೆ, ಈ ಇನ್ಸ್‌ಪೆಕ್ಟರ್ ತಾನು ಲೈಂಗಿಕವಾಗಿ ಬಳಸಿಕೊಂಡ ಮಹಿಳೆಯೊಬ್ಬರ ಅಪ್ರಾಪ್ತ ಮಗಳ ಮೇಲೂ ಕಣ್ಣು ಹಾಕಿದ್ದ. ಆಕೆ ಓದುತ್ತಿರುವ ಕಾಲೇಜಿಗೆ ಹೋಗುತ್ತೇನೆ ಎಂದು ಫೋನ್‌ನಲ್ಲಿ ಸಂತ್ರಸ್ತೆಗೆ ಬೆದರಿಕೆ ಹಾಕಿದ್ದ. ಈ ಆರೋಪಕ್ಕೆ ಸಂಬಂಧಿಸಿದ ಆಡಿಯೋವೊಂದು ಈಗ ವೈರಲ್ ಆಗಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಈ ಹಿಂದೆ ದೂರು ಸಲ್ಲಿಸಿದ್ದರೂ, ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ದೂರುದಾರರು ತಿಳಿಸಿದ್ದಾರೆ. ಮಂಗಳೂರು ಪೊಲೀಸರ ನ್ಯಾಯಯುತ ತನಿಖೆಯ ಬಗ್ಗೆ ಅವರು ಅನುಮಾನ ವ್ಯಕ್ತಪಡಿಸಿ, ಪ್ರಕರಣವನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ಅಥವಾ ಸಿಐಡಿಗೆ ವಹಿಸಬೇಕು ಮತ್ತು ತನಿಖೆಯ ಸಮಯದಲ್ಲಿ ಅಧಿಕಾರಿಯನ್ನು ಕರ್ತವ್ಯದಿಂದ ದೂರವಿಡಬೇಕು ಎಂದು ಸಂತ್ರಸ್ಥೆ ಒತ್ತಾಯಿಸಿದರು.

ಇನ್ನು ಸಂತ್ರಸ್ಥೆಯ ಆಡಿಯೋ ವೈರಲ್ ಆಗುತ್ತಲೇ ಕೊನೆಗೂ ಎಚ್ಚೆತ್ತ ಪೊಲೀಸ್ ಇಲಾಖೆ ಇಲಾಖಾ ತನಿಖೆಯನ್ನು ಆರಂಭಿಸಿದೆ. ಈ ವಿಷಯಕ್ಕೆ ಪ್ರತಿಕ್ರಿಯಿಸಿದ ಡಿಸಿಪಿ ಮಿಥುನ್, ಉತ್ತರ ವಿಭಾಗದ ಎಸಿಪಿ ನೇತೃತ್ವದಲ್ಲಿ ತನಿಖೆ ಪ್ರಾರಂಭವಾಗಿದೆ ಮತ್ತು ವರದಿ ಸಲ್ಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

## ವಸಾಯಿ- ವಿರಾರ್ ಪಾಲಿಕೆ ಮೇಯರ್ ಅಧ್ಯಕ್ಷತೆಯಲ್ಲಿ ಗ್ಯಾಸ್ ಸಿಲಿಂಡರ್ ಪೂರೈಕೆಗೆ ಸಂಬಂಧಿಸಿ ಸಭೆ



ವಸಾಯಿ,ಮಾ. 17 - ವಸಾಯಿ - ವಿರಾರ್ ನಗರ ಮುನ್ಸಿಪಲ್ ಕಾರ್ಪೊರೇಷನ್ ಪ್ರಧಾನ ಕಚೇರಿಯಲ್ಲಿ ಮೇಯರ್ ಅಜೀವ್ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ವಿವಿಧ ಅನಿಲ ಏಜೆನ್ಸಿಗಳು/ವಿತರಕರು, ಹೋಟೆಲ್ ಸಂಘಗಳು, ಪೊಲೀಸ್ ಆಡಳಿತ ಮತ್ತು ನಗರದ ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು.

ಮಧ್ಯಪ್ರಾಚ್ಯ ಏಷ್ಯಾ, ಅಮೆರಿಕ ಮತ್ತು ಯುರೋಪಿಯನ್ ಖಂಡದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ವಸಾಯಿ- ವಿರಾರ್ ನಗರ ಮುನ್ಸಿಪಲ್ ಕಾರ್ಪೊರೇಷನ್ ಪ್ರದೇಶದಲ್ಲಿ ದೇಶೀಯ ಮತ್ತು ವಾಣಿಜ್ಯ ಅನಿಲ ಸಿಲಿಂಡರ್‌ಗಳ ಪೂರೈಕೆಯ ಪ್ರಸ್ತುತ ಸ್ಥಿತಿ, ಲಭ್ಯವಿರುವ ಸ್ಟಾಕ್‌ಗಳು ಮತ್ತು ವಿತರಣಾ ಪ್ರಕ್ರಿಯೆಯ ಬಗ್ಗೆ ವಿವರವಾದ ಪರಿಶೀಲನೆ ನಡೆಸಲಾಯಿತು.

ನಗರದಲ್ಲಿ ಗೃಹಬಳಕೆಯ ಅನಿಲ ಸಿಲಿಂಡರ್‌ಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದೆ ಎಂದು ಗ್ಯಾಸ್ ಏಜೆನ್ಸಿಗಳು, ಪ್ರಾಂತೀಯ ಅಧಿಕಾರಿ ವಸಾಯಿ ಮತ್ತು ಜಿಲ್ಲಾ ಸರಬರಾಜು ಅಧಿಕಾರಿ ಸಭೆಗೆ ತಿಳಿಸಿದರು. ಸಾಕಷ್ಟು ಗ್ಯಾಸ್ ಸಿಲಿಂಡರ್‌ಗಳು ಲಭ್ಯವಿರುವುದರಿಂದ ಮತ್ತು ಗ್ಯಾಸ್ ಏಜೆನ್ಸಿಗಳ ಮೂಲಕ ಬುಕ್ ಮಾಡಿದ ನಂತರ ನಿಗದಿತ ಅವಧಿಯೊಳಗೆ ಗ್ರಾಹಕರಿಗೆ ಗ್ಯಾಸ್ ಸಿಲಿಂಡರ್‌ಗಳನ್ನು ಪೂರೈಸಲಾಗುವುದರಿಂದ ಆಯುಕ್ತ ಮನೋಜ್ ಕುಮಾರ್ ಸೂರ್ಯವಂಶಿ (ಐ.ಪಿ.ಎಸ್.) ಅವರು ನಾಗರಿಕರು ಗ್ಯಾಸ್ ಏಜೆನ್ಸಿಗಳು/ವಿತರಣಾ ಕೇಂದ್ರಗಳಲ್ಲಿ ಅನಗತ್ಯವಾಗಿ ಜನಸಂದಣಿಯನ್ನು ಮಾಡಬಾರದು ಎಂದು ಮನವಿ ಮಾಡಿದ್ದಾರೆ. ಅಲ್ಲದೆ, ನಾಗರಿಕರು ಗೃಹಬಳಕೆಗಾಗಿ ನಾಗರಿಕರಿಗೆ ವಿತರಿಸಲಾದ ಅನಿಲವನ್ನು ಗೃಹಬಳಕೆಗೆ ಮಾತ್ರ ಬಳಸುವುದು ಕಡ್ಡಾಯವಾಗಿದೆ ಮತ್ತು ವಾಣಿಜ್ಯ ಅಥವಾ ಇತರ ಅನಧಿಕೃತ ಗೃಹಬಳಕೆಯ ಅನಿಲ ಬಳಕೆ ಎಲ್ಲಿಯಾದರೂ ಕಂಡುಬಂದರೆ, ಸಂಬಂಧಪಟ್ಟ ವ್ಯಕ್ತಿಗಳು ಮತ್ತು ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

## ಮುಂಬಯಿ ಜಲ ಮೆಟ್ರೋ ಸಾರಿಗೆ ಯೋಜನೆಯನ್ನು ತ್ವರಿತಗೊಳಿಸಲಾಗುವುದು : ಮುಖ್ಯಮಂತ್ರಿ ಫಡ್ನವೀಸ್



ಮುಂಬಯಿ, ಮಾ.17 - ಮುಂಬಯಿ ಮಹಾನಗರ ಪ್ರದೇಶದಲ್ಲಿ ಜಲ ಪ್ರಯಾಣಿಕರ ಸಾಗಣೆಗಾಗಿ ಜಲ ಮೆಟ್ರೋ ಯೋಜನೆಯನ್ನು ಮೂರು ಹಂತಗಳಲ್ಲಿ ಕಾರ್ಯಗತಗೊಳಿಸಲಾಗುವುದು ಮತ್ತು ಈ ಉದ್ದೇಶಕ್ಕಾಗಿ ಶಿಪ್ ಯಾರ್ಡ್ ಅಭಿವೃದ್ಧಿಗಾಗಿ ಸ್ಥಳವನ್ನು ಗುರುತಿಸಬೇಕು. ಇದು ಜಲ ಪ್ರಯಾಣಿಕರ ಸಾಗಣೆಗೆ ಅಗತ್ಯವಾದ ದೋಣಿಗಳ ನಿರ್ಮಾಣಕ್ಕೆ ಅನುವು ಮಾಡಿಕೊಡುತ್ತದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನಿರ್ದೇಶನ ನೀಡಿದರು.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ವಿಧಾನ ಭವನದಲ್ಲಿ ಜಲಸಾರಿಗೆ ಕುರಿತು ಪರಿಶೀಲನಾ ಸಭೆ ನಡೆಯಿತು. ಮೀನುಗಾರಿಕೆ ಮತ್ತು ಬಂದರು ಸಚಿವ ನಿತೇಶ್ ರಾಣೆ, ಬಂದರು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂಜಯ್ ಸೇಥಿ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಅಶ್ವಿನಿ ಭಿಡೆ, ಸಾಗರ ನಿಗಮದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಿ. ಪ್ರದೀಪ್ ಮತ್ತು ಇತರ ಸಂಬಂಧಿತ ಅಧಿಕಾರಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು.

ದೇಶದ ಅತಿದೊಡ್ಡ ಶಿಪ್ ಯಾರ್ಡ್ ಸೌಲಭ್ಯವನ್ನು ಅಭಿವೃದ್ಧಿಪಡಿಸುವಾಗ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದಂತೆ ಮತ್ತು ಅದನ್ನು ಯೋಜಿತ ಅಭಿವೃದ್ಧಿಯನ್ನಾಗಿ ಮಾಡಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಫಡ್ನವೀಸ್ ಸೂಚನೆ ನೀಡಿದರು.

ಜಲ ಪ್ರಯಾಣಿಕರ ಸಾಗಣೆಗೆ ಅಗತ್ಯವಿರುವ ದೋಣಿಗಳನ್ನು ನಮ್ಮದೇ ಹಡಗುಕಟ್ಟೆಯಲ್ಲಿ ನಿರ್ಮಿಸಬೇಕು. ಎರಡನೇ ಹಂತದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಅವರು ಈ ಸಂದರ್ಭದಲ್ಲಿ ಹೇಳಿದರು. ಮುಂಬಯಿಯಲ್ಲಿ ಮೆಟ್ರೋ ಜಾಲವನ್ನು ರಚಿಸಿದಂತೆಯೇ, ನಾವು ಕೆಲವು ತಿಂಗಳ ಹಿಂದೆಯೇ ಎಂಎಂಆರ್ ಪ್ರದೇಶದಲ್ಲಿ ಮುಂಬಯಿ ವಾಟರ್‌ಮೆಟ್ರೋಗೆ ಕ್ರಮಗಳನ್ನು ಕೈಗೊಂಡಿದ್ದೇವೆ. ಈ ಪ್ರದೇಶಕ್ಕಾಗಿ ವಾಟರ್‌ಮೆಟ್ರೋ ಯೋಜನೆಯ ವಿವರವಾದ ಯೋಜನಾ ವರದಿ ಸರಕಾರಕ್ಕೆ ಸಿಕ್ಕಿದೆ ಮತ್ತು ಈ ಯೋಜನೆಯನ್ನು ವೇಗಗೊಳಿಸಲು ಸರಕಾರವು ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಸಚಿವ ನಿತೇಶ್ ರಾಣೆ ಹೇಳಿದರು.

## ಡೊಂಬಿವಲಿ : ಸಂಜೀವ ಶೆಟ್ಟಿ ನಿಧನ



ಡೊಂಬಿವಲಿ, ಮಾ. 17- ಶ್ರೀ ಜಗದಂಬಾ ಮಂದಿರದ ಸಕ್ರಿಯ ಸದಸ್ಯ, ಡೊಂಬಿವಲಿ ಪಶ್ಚಿಮದ ಮಾಂಗಲ್ಯ ಸೊಸೈಟಿ ನಿವಾಸಿ ಸಿರಿನಾಡ ವೆಲ್ಫೇರ್ ಎಸೋಸಿಯೇಶನ್‌ನ ಗೌರವ ಪ್ರಧಾನ ಕಾರ್ಯದರ್ಶಿ ಅಜೆಕಾರು ಜಯ ಶೆಟ್ಟಿಯವರ ಸಹೋದರ ಸಂಜೀವ ಶೆಟ್ಟಿ (79) ಅಲ್ಪಕಾಲದ ಅಸೌಖ್ಯದಿಂದ ಡೊಂಬಿವಲಿಯ ಸ್ವಗೃಹದಲ್ಲಿ ಮಾ. 16ರ ಸೋಮವಾರದಂದು ನಿಧನರಾಗಿದ್ದಾರೆ.

ಮೂಲತಃ ಕುಕ್ಕುಂದೂರು ಕೊಡ್ಯಾಲು ಕುಟುಂಬಸ್ಥರಾದ ಮೃತರು, ಪತ್ನಿ, ಪುತ್ರಿ, ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

## ಕಲ್ಲಮುಂಡ್ಕೂರು : ದೊಂಬಯ್ಯ ಪೂಜಾರಿ ನಿಧನ



ಕಿನ್ನಿಗೋಳಿ, ಮಾ. 17- ಕಲ್ಲಮುಂಡ್ಕೂರು ದೊಂಬಯ್ಯ ಪೂಜಾರಿ(83) ಮಾರ್ಚ್ 14ರ ಶನಿವಾರ ನಿಧನರಾದರು.

ಕೃಷಿಕರಾಗಿದ್ದ ಅವರು ಮೂರ್ತೆಗಾರಿಕೆ ವೃತ್ತಿಯನ್ನೂ ಮಾಡುತ್ತಿದ್ದರು. ಮೃತರು ಪತ್ನಿ, ನಾಲ್ವರು ಹೆಣ್ಣು ಹಾಗೂ ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ.

## ಆನಂದ ಭಂಡಾರಿ ಹೆಜಮಾಡಿ ನಿಧನ



ಮೂಲ್ಕಿ, ಮಾ. 17- ಹೆಜಮಾಡಿ ರಾಷ್ಟ್ರೀಯ ಹೆದ್ದಾರಿ ಗರಡಿ ಬಳಿ ನಿವಾಸಿ ಆನಂದ ಭಂಡಾರಿ ಹೆಜಮಾಡಿ(66)ಯವರು ಅಲ್ಪಕಾಲದ ಅಸೌಖ್ಯದಿಂದ ಮಾರ್ಚ್ 15ರ ಆದಿತ್ಯವಾರದಂದು ನಿಧನರಾದರು.

ಹೆಜಮಾಡಿ ಗುಂಡಿ ಆಲಡೆ ಬಳಿ ಹೊಟೇಲ್ ಉದ್ಯಮವನ್ನು ಹೊಂದಿದ್ದ ಆನಂದ ಭಂಡಾರಿ, ಪತ್ನಿ, ಪುತ್ರ, ಪುತ್ರಿ ಸಹಿತ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

## ಬಿಲ್ಲವರ ಎಸೋಸಿಯೇಶನ್ ಮುಂಬಯಿ : ಬಿಲ್ಲವ ಭವನದಲ್ಲಿ ಮಾ. 21ರಂದು ಸಾರ್ವಜನಿಕ ಶ್ರೀ ಶನೀಶ್ವರ ಗ್ರಂಥ ಪಾರಾಯಣ

ಮುಂಬಯಿ, ಮಾ. 17- ಬಿಲ್ಲವರ ಎಸೋಸಿಯೇಶನ್ ಮುಂಬಯಿ ಇದರ ಸಾಂಸ್ಕೃತಿಕ ಉಪ ಸಮಿತಿಯ ವತಿಯಿಂದ ಶ್ರೀ ಗುರು ನಾರಾಯಣ ಯಕ್ಷಗಾನ ಮಂಡಳಿ ಸಂಯೋಜನೆಯಲ್ಲಿ ಮಾ. 21ರ ಶನಿವಾರದಂದು ಸಾರ್ವಜನಿಕ ಶ್ರೀ ಶನೀಶ್ವರ ಗ್ರಂಥ ಪಾರಾಯಣವು ಎಸೋಸಿಯೇಶನಿನ ಅಧ್ಯಕ್ಷ ಹರೀಶ್ ಜಿ. ಅಮೀನ್ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರಗಲಿದೆ.

ಅಂದು ಮಧ್ಯಾಹ್ನ 1:00 ಗಂಟೆಗೆ ಹರೀಶ್ ಶಾಂತಿ ಹೆಜಮಾಡಿ ಪೌರೋಹಿತ್ಯದಲ್ಲಿ ಕಲಶ ಪ್ರತಿಷ್ಠಾಪನೆ ನಡೆಯಲಿದ್ದು, ನಂತರ ಶ್ರೀ ಗುರುನಾರಾಯಣ ಯಕ್ಷಗಾನ ಮಂಡಳಿಯ ಕಲಾವಿದರಿಂದ ಹಾಗೂ ಅತಿಥಿ ಕಲಾವಿದರಿಂದ ಯಕ್ಷಗಾನ ಶೈಲಿಯಲ್ಲಿ ಶ್ರೀ ಶನೀಶ್ವರ ಗ್ರಂಥ ಪಾರಾಯಣ ಜರಗಲಿದೆ. ಸಾಯಂಕಾಲ 7:30ಕ್ಕೆ ಮಹಾಮಂಗಳಾರತಿಯ ನಂತರ ತೀರ್ಥ ಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆ ಜರಗಲಿದೆ.

ಈ ಎಲ್ಲಾ ದೇವತಾ ಕಾರ್ಯಗಳಿಗೆ ಭಕ್ತಾಭಿಮಾನಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ಸ್ಥಳೀಯ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುದೇವರ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ ಶ್ರೀ ಶನೀಶ್ವರ ಮಹಾದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಎಸೋಸಿಯೇಶನ್‌ನ ಅಧ್ಯಕ್ಷ ಹರೀಶ್ ಜಿ. ಅಮೀನ್, ಗೌ. ಅಧ್ಯಕ್ಷ ಎಲ್. ವಿ. ಅಮೀನ್, ಗೌರವ ಪ್ರಧಾನ ಕಾರ್ಯದರ್ಶಿ ಹರೀಶ್ ಜಿ. ಸಾಲ್ಯಾನ್, ಗೌರವ ಪ್ರಧಾನ ಕೋಶಾಧಿಕಾರಿ ರವಿ ಎಸ್. ಸನಿಲ್, ಮಹಿಳಾ ಕಾರ್ಯಾಧ್ಯಕ್ಷೆ ಶಕುಂತಳಾ ಕೋಟ್ಯಾನ್ ಹಾಗೂ ಸಾಂಸ್ಕೃತಿಕ ಉಪ ಸಮಿತಿಯ ಕಾರ್ಯಾಧ್ಯಕ್ಷ ನವೀನ್ ಪಡುಇನ್ನ, ಗೌ. ಕಾರ್ಯದರ್ಶಿ ಗೋಪಾಲಕೃಷ್ಣ ಕೆಂಚನಕೆರೆ ಹಾಗೂ ಸರ್ವ ಸದಸ್ಯರು ವಿನಂತಿಸಿದ್ದಾರೆ.


## ಮೂಡುಬಿದ್ರೆ ಮಹಾವೀರ ಕಾಲೇಜಿನ ವಜ್ರ ಮಹೋತ್ಸವ ಮಾ. 22ರಂದು ಹಳೆ ವಿದ್ಯಾರ್ಥಿಗಳ ಸಿದ್ಧತೆಗಾಗಿ ಸಮಾಲೋಚನಾ ಸಭೆ

ಮುಂಬಯಿ, ಮಾ. 17- ಇಲ್ಲಿನ ವಡಾಲ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಮಾರ್ಚ್ 15ರ ಆದಿತ್ಯವಾರಂದು ಸಂಜೆ ಮೂಡುಬಿದ್ರೆ ಮಹಾವೀರ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಮಹತ್ವದ ಸಭೆ ಜರುಗಿತು. 2026ರ ಏಪ್ರಿಲ್ ತಿಂಗಳಿನಲ್ಲಿ ನಡೆಯಲಿರುವ ಕಾಲೇಜಿನ ವಜ್ರ ಮಹೋತ್ಸವ ಆಚರಣೆಯ ಕುರಿತು ಈ ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಗಳಾದ ಮೋಹನ್‌ದಾಸ್ ಶೆಟ್ಟಿ, ಸತೀಶ್ ಬಂಗೇರ, ಪದ್ಮರಾಜ್ ಹೆಗ್ಡೆ ಮತ್ತು ಮೋಹನ್ ಸುವರ್ಣ, ನಿರ್ಮಲಾ ಶೆಟ್ಟಿ, ಜಯ ಶೆಟ್ಟಿ, ಸುರೇಶ ಕಾಮತ್, ವಿಜಯ್ ಭಂಡಾರಿ, ಅಣ್ಣಿ ಶೆಟ್ಟಿ ಉಪಸ್ಥಿತರಿದ್ದು, ಕಾರ್ಯಕ್ರಮದ ಯಶಸ್ಸಿಗೆ ಹಲವು ಸಲಹೆಗಳನ್ನು ನೀಡಿದರು.

ಮುಂಬಯಿಯಲ್ಲಿರುವ ಹಳೆಯ ವಿದ್ಯಾರ್ಥಿಗಳ ಬಾಂಧವ್ಯವನ್ನು ಗಟ್ಟಿಗೊಳಿಸುವ ಸಲುವಾಗಿ ಮಾರ್ಚ್ 22ರ ಆದಿತ್ಯವಾರದಂದು ಸಂಜೆ 5:00ಕ್ಕೆ ಸಾಕಿನಾಕದ ಪೆನಿನ್ಸುಲಾ ಗ್ರ್ಯಾಂಡ್‌ನಲ್ಲಿ ಹಳೆ ವಿದ್ಯಾರ್ಥಿಗಳ ವಿಶೇಷ ಸ್ನೇಹ ಸಮ್ಮಿಲನವನ್ನು ಹಮ್ಮಿಕೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು. ಸ್ಥಳದಲ್ಲಿ ಬದಲಾವಣೆ ಇದ್ದರೆ ತಮಗೆಲ್ಲರಿಗೂ ಮುಂಚಿತವಾಗಿ ತಿಳಿಸಲಾಗುವುದು.

ಅಂದು ವಜ್ರ ಮಹೋತ್ಸವದ ಪ್ರಯುಕ್ತ ಕಾಲೇಜಿನ ಟ್ರಸ್ಟಿಗಳಾದ ಅಭಯಚಂದ್ರ ಜೈನ್, ಸುಚರಿತಾ ಶೆಟ್ಟಿ, ಡಾ. ರಾಧಾಕೃಷ್ಣ ಶೆಟ್ಟಿ ಪ್ರಿನ್ಸಿಪಾಲ್, ರಮೇಶ್ ಭಟ್, ಹರಿಪ್ರಸಾದ್ ನಾಯಕ್ ಮತ್ತು ಇತರ ವಿಶ್ವಸ್ಥರು ಮುಂಬಯಿಗೆ ಭೇಟಿ ನೀಡಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಹಳೆ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಂಘಟಕರು ಮನವಿ ಮಾಡಿದ್ದಾರೆ.

**ಪಪ್ಪಾಯಿ+ ಲಿಂಬೆಯ ಜ್ಯೂಸ್**
ಈ ರಸದಲ್ಲಿ ವಿಟಮಿನ್ ಎ ಮತ್ತು ಸಿ ಉತ್ತಮ ಪ್ರಮಾಣದಲ್ಲಿದ್ದು ದೃಷ್ಟಿನರದ ಪೋಷಣೆಗೆ ನೆರವಾಗುತ್ತದೆ. ತನ್ಮೂಲಕ ಕಣ್ಣಿನ ಆರೋಗ್ಯ ಉತ್ತಮವಾಗಿರುವಂತೆ- ನೋಡಿಕೊಳ್ಳುತ್ತದೆ. ಅಂತೆಯೇ ಕಣ್ಣಿನ ದೃಷ್ಟಿದೋಶಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಿವಾರಿಸಲು ನೆರವಾಗುತ್ತದೆ.

# ಸಿಪ್ಪೆ ಸಹಿತ ಸೇಬುಹಣ್ಣು ತಿನ್ನುವುದರ ಆರೋಗ್ಯ ಪ್ರಯೋಜನಗಳು



**ಬೇಸಿಗೆ ಕಾಲದಲ್ಲಿ ಎಲ್ಲಾ ಕಡೆ ಕಂಡುಬರುವ ಸೇಬುಹಣ್ಣು ಆರೋಗ್ಯಕ್ಕೆ ಬಲು ಪ್ರಯೋಜನಕಾರಿ. ಮುಖ್ಯವಾಗಿ ಹೃದಯದ ಕಾಯಿಲೆಗಳು ಬರಬಾರದು ಎನ್ನುವ ಕಾರಣಕ್ಕೆ ಪ್ರತಿಯೊಬ್ಬರೂ ದಿನ ಒಂದೊಂದು ಸೇಬು ಹಣ್ಣು ತಿನ್ನಲು ಬಯಸುತ್ತಾರೆ. ಆದರೆ ನಮ್ಮ ಅಭ್ಯಾಸ ಹೇಗೆ ಬಂದಿದೆ ಎಂದರೆ ಸೇಬು ಹಣ್ಣಿನ ಸಿಪ್ಪೆಯ ಮೇಲ್ಭಾಗದಲ್ಲಿ ಸೇಬು ಹಣ್ಣಿಗೆ ಯಾವುದೇ ಕೀಟಗಳು ಹಾವಳಿ ಮಾಡಬಾರದು ಎನ್ನುವ ಕಾರಣಕ್ಕೆ ಮೇಣದ ಲೇಪನ ಮಾಡಿರುತ್ತಾರೆ. ಹಾಗಾಗಿ ಇದು ಆರೋಗ್ಯಕ್ಕೆ ಕೆಟ್ಟದ್ದು ಎಂಬ ಕಾರಣದಿಂದ ಸೇಬು ಹಣ್ಣಿನ ಸಿಪ್ಪೆಯನ್ನು ತೆಗೆದು ಹಾಕಿ ಕೇವಲ ಒಳಗಿನ ತಿರುಳನ್ನು ತಿನ್ನುತ್ತೇವೆ. ಆದರೆ ಸರಿಯಾಗಿ ಸ್ವಚ್ಛ ಮಾಡಿಕೊಂಡು ಸಿಪ್ಪೆಸಹಿತ ಸೇಬುಹಣ್ಣನ್ನು ತಿನ್ನುವುದರಿಂದ ಆರೋಗ್ಯಕ್ಕೆ ಸಿಗುವ ಲಾಭಗಳು ಎರಡು ಪಟ್ಟು ಆಗುತ್ತವೆ. ಒಂದು ಅಧ್ಯಯನ ಹೇಳುವಂತೆ ಸೇಬು ಹಣ್ಣಿನ ಸಿಪ್ಪೆಯಲ್ಲಿ ಅತಿ ಹೆಚ್ಚಿನ ಪ್ರಮಾಣದ ಫಿನಾಲಿಕ್ ಸಂಯುಕ್ತಗಳು ಕಂಡು ಬರುತ್ತದೆ. ಇವುಗಳು ಕೇವಲ ಸಣ್ಣ ಪ್ರಮಾಣದಲ್ಲಿ ಇದ್ದರೂ ಸಹ ಸೇಬು ಹಣ್ಣಿನ ತೂಕಕ್ಕೆ ಬಹು ಮುಖ್ಯ ಕಾರಣ ಆಗುತ್ತದೆ. ಸೇಬು ಹಣ್ಣಿನ ಸಿಪ್ಪೆಯ ಸೇವನೆಯಿಂದ ಸಿಗುವ ಕೆಲವು ಆರೋಗ್ಯ ಪ್ರಯೋಜನಗಳು**

**■ ಕ್ಯಾನ್ಸರ್ ಸಮಸ್ಯೆ ನಿವಾರಣೆಯಾಗುತ್ತದೆ**

ಸೇಬು ಹಣ್ಣಿನ ಸಿಪ್ಪೆಯಲ್ಲಿ ಮಹತ್ತರ ಪ್ರಮಾಣದ ಆಂಟಿಆಕ್ಸಿಡೆಂಟ್ ಅಂಶಗಳು ಲಭ್ಯವಿರುವ ಕಾರಣ ನಿಮ್ಮನ್ನು ಕ್ಯಾನ್ಸರ್ ಸಮಸ್ಯೆಯಿಂದ ಅತ್ಯಂತ ಪರಿಣಾಮಕಾರಿಯಾಗಿ ರಕ್ಷಣೆ ಮಾಡುತ್ತದೆ ಎಂದು ಹೇಳಬಹುದು. ಜರ್ನಲ್ ನ್ಯೂಟ್ರಿಷನ್ ಮತ್ತು ಕ್ಯಾನ್ಸರ್ ಎಂಬ ಒಂದು ಅಧ್ಯಯನ ವರದಿ ಹೇಳುವಂತೆ ಸೇಬು ಹಣ್ಣಿನ ಸಿಪ್ಪೆ ಯಲ್ಲಿ ಕಂಡುಬರುವ ಆಂಟಿಆಕ್ಸಿಡೆಂಟ್ ಅಂಶಗಳು ಗೆಡ್ಡೆಯ ಬೆಳವಣಿಗೆಯನ್ನ ನಿಯಂತ್ರಣ ಮಾಡಿ. ಮಹಿಳೆಯರಲ್ಲಿ ಕಂಡುಬರುವ ಸ್ತನ ಕ್ಯಾನ್ಸರ್ ಮತ್ತು ಪುರುಷರಲ್ಲಿ ಕಂಡುಬರುವ ಪ್ರೋಸ್ಟೇಟ್ ಕ್ಯಾನ್ಸರ್ ಸಮಸ್ಯೆಯ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಸೇಬು ಹಣ್ಣಿನ ಸಿಪ್ಪೆ ಯಲ್ಲಿ maspin ಎಂಬ ಪ್ರೋಟಿನ್ ಅಂಶ ಅಧಿಕವಾಗಿದ್ದು, ಕ್ಯಾನ್ಸರ್ ಸಮಸ್ಯೆ ದೇಹದಲ್ಲಿ ಹರಡುವ ಪ್ರಕ್ರಿಯೆಗೆ ಇದು ಕಡಿವಾಣ ಹಾಕುತ್ತದೆ.



**■ ಉರಿಯೂತದ ನಿವಾರಣೆ ಮಾಡುತ್ತದೆ**

ಸೇಬು ಹಣ್ಣಿನ ಸಿಪ್ಪೆಯಲ್ಲಿ ಫ್ಲೇವನಾಯ್ಡ್ ಎಂಬ ಆಂಟಿಆಕ್ಸಿಡೆಂಟ್ ಅಂಶಗಳು ಹೆಚ್ಚಾಗಿ ಸಿಗುವ ಕಾರಣ ತನ್ನಲ್ಲಿನ ಆಂಟಿ ಇನ್ಫಾಮೇಟರಿ ಗುಣಲಕ್ಷಣಗಳಿಂದ ದೇಹದ ಒಳಭಾಗದಲ್ಲಿ ಉಂಟಾಗುವ ಉರಿಯೂತದ ಸಮಸ್ಯೆಯನ್ನು ಇಲ್ಲವಾಗಿಸುತ್ತದೆ. ಬಹಳಷ್ಟು ಮಹಿಳೆಯರಿಗೆ ಉಂಟಾಗುವ ಇನ್ಫಾಮೇಟರಿ ಕಾಯಿಲೆಗಳಿಗೆ ಪರಿಹಾರ ಇದರಿಂದ ಸಿಗುತ್ತದೆ.

**■ ಜೀವಕೋಶಗಳ ಹಾನಿ ತಪ್ಪಿಸುತ್ತದೆ**


ಫ್ಲೇವನಾಯ್ಡ್ ಅಂಶಗಳು ಆಂಟಿಆಕ್ಸಿಡೆಂಟ್ ಅಂಶಗಳ ರೀತಿ ಕೆಲಸ ಮಾಡುವುದರಿಂದ ದೇಹದಲ್ಲಿ ಹಲವಾರು ಅಡ್ಡ ಪರಿಣಾಮಗಳನ್ನು ಉಂಟು ಮಾಡುವ ಫ್ರೀ ರಾಡಿಕಲ್ ಅಂಶಗಳನ್ನು ನಿಯಂತ್ರಣ ಮಾಡುತ್ತವೆ. ಇದರಿಂದ ಮೆಟಬಾಲಿಸಂ ಪ್ರಕ್ರಿಯೆ ಚೆನ್ನಾಗಿ ನಡೆಯುತ್ತದೆ ಜೊತೆಗೆ ಆಮ್ಲಜನಕದ ಪ್ರತಿರೋಧತೆಯಿಂದ ಉಂಟಾಗುವ ಜೀವಕೋಶಗಳ ಹಾನಿ ಇಲ್ಲವಾಗುತ್ತದೆ. ಚಿಕ್ಕ ವಯಸ್ಸಿಗೆ ವಯಸ್ಸಾದಂತೆ ಕಂಡುಬರುವ ಸಾಧ್ಯತೆ ಕಡಿಮೆಯಾಗಿ ದೇಹದ ಉರಿಯೂತ ಸಾಧ್ಯತೆ ಕೂಡ ಇರುವುದಿಲ್ಲ.

**■ ಹೃದಯದ ರಕ್ಷಣೆ ಮಾಡುತ್ತದೆ**

ಸೇಬು ಹಣ್ಣಿನ ಸಿಪ್ಪೆಯಲ್ಲಿ quercetin ಎಂಬ ಫ್ಲೇವನಾಯ್ಡ್ ಅಂಶ ಇರುವುದರಿಂದ ಇದೊಂದು ಆಂಟಿಆಕ್ಸಿಡೆಂಟ್ ರೂಪದಲ್ಲಿ ಕೆಲಸ ಮಾಡಿ ಉರಿಯೂತದ ನಿವಾರಣೆ ಮಾಡುತ್ತದೆ. ಇದರ ಮುಖ್ಯ ಉದ್ದೇಶವೆಂದರೆ ದೇಹದಲ್ಲಿ ಅದರಲ್ಲೂ ವಿಶೇಷವಾಗಿ ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟದಂತೆ ತಡೆದು ಹೃದಯದ ಅಪಧಮನಿಗಳಿಂದ ಹಿಡಿದು ದೇಹದ ಪ್ರತಿಯೊಂದು ಅಂಗಾಂಗಗಳಿಗೆ ಮತ್ತು ಎಲ್ಲ ಭಾಗಗಳಿಗೆ ರಕ್ತದ ಹರಿಯುವಿಕೆಯನ್ನು ನೋಡಿಕೊಂಡು ಹೃದಯದ ಸಮಸ್ಯೆ ಮತ್ತು ಹೃದಯರಕ್ತನಾಳದ ಯಾವುದೇ ಕಾಯಿಲೆಗಳು ಕಂಡು ಬರದಂತೆ ತಡೆಯುತ್ತದೆ.

# ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡುವ ಏಳು ಸರಳ ಆಹಾರ

**ಕಳೆದ ಕೆಲವು ವರ್ಷಗಳಿಂದ ಕೊಲೆಸ್ಟ್ರಾಲ್ ಮಟ್ಟ ನಿಯಂತ್ರಣದಲ್ಲಿಡುವ ಹಲವಾರು ಉತ್ಪನ್ನಗಳು ಮಾರುಕಟ್ಟೆಗೆ ಬಂದಿವೆ. ಆದರೆ ಇವುಗಳ ಮೇಲೆ ಭರವಸೆ ಇಡುವುದಕ್ಕಿಂತ, ನೀವು ಪ್ರತಿ ದಿನ ಮನೆಯಲ್ಲಿ ಲಭ್ಯವಿರುವ ಈ ಆಹಾರ ಪದಾರ್ಥಗಳನ್ನು ಸರಿಯಾಗಿ ಸೇವಿಸಿದರೆ, ನೀವು ಈ ಉತ್ಪನ್ನಗಳನ್ನು ಅವಲಂಬಿಸಬೇಕಾಗಿಲ್ಲ. ತಜ್ಞರ ಪ್ರಕಾರ, ಕೊಲೆಸ್ಟ್ರಾಲ್ ಮಟ್ಟವನ್ನು ಸಮತೋಲನದಲ್ಲಿಡಲು ಅತ್ಯುತ್ತಮ ಮಾರ್ಗವೆಂದರೆ ನೈಸರ್ಗಿಕ ಆಹಾರವನ್ನು ತೆಗೆದುಕೊಳ್ಳುವುದು.**



ನಾವು ಸಾಂಪ್ರದಾಯಿಕ ಆಹಾರ ಪದ್ಧತಿಯನ್ನೇ ಅವಲಂಬಿಸುವುದರಿಂದ ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಬಹುದು. ಸಂಸ್ಕರಿಸಿದ ಆಹಾರಗಳಿಂದ ದೂರವಿರುವುದು ಇನ್ನೊಂದು ಮಾರ್ಗ. ಈ ಮಾರ್ಗಗಳು ನಿಮ್ಮ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಹಾಗಾಗಿ ಇಂದು ನಾವು ಸೇವಿಸುವ ಆಹಾರವು ನಮ್ಮ ಕೊಲೆಸ್ಟ್ರಾಲ್ ಮಟ್ಟದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ತಿಳಿದುಕೊಳ್ಳೋಣ.

**ಎಚ್ ಡಿಎಲ್- ಎಲ್ ಡಿಎಲ್ ಎಂದರೇನು?**

ಕೊಲೆಸ್ಟ್ರಾಲ್ ಒಂದು ಮೇಣದ ಪದಾರ್ಥವಾಗಿದ್ದು, ಇದು ದೇಹದ ಎಲ್ಲಾ ಜೀವಕೋಶಗಳಲ್ಲಿ ಕಂಡುಬರುತ್ತದೆ. ಎಲ್ ಡಿಎಲ್ (ಕಡಿಮೆ ಸಾಂದ್ರತೆಯ ಲಿಪೊಪ್ರೋಟೀನ್) ಕೆಟ್ಟ ಕೊಲೆಸ್ಟ್ರಾಲ್ ಆಗಿದ್ದರೆ, ಎಚ್ ಡಿಎಲ್ (ಅಧಿಕ ಸಾಂದ್ರತೆಯ ಲಿಪೊಪ್ರೋಟೀನ್) ಉತ್ತಮ ಕೊಲೆಸ್ಟ್ರಾಲ್ ಆಗಿದೆ. ಎಲ್ ಡಿಎಲ್ ಕೆಟ್ಟ ಕೊಲೆಸ್ಟ್ರಾಲ್ ಆಗಿದ್ದು, ಅದು ರಕ್ತನಾಳಗಳಲ್ಲಿ ಪ್ಲೇಕ್ ರಚನೆಗೆ ಕಾರಣವಾಗಬಹುದು. ಇದು ಹೃದಯಾಘಾತ ಮತ್ತು ಪಾರ್ಶ್ವವಾಯು ಅಪಾಯವನ್ನು ಹೆಚ್ಚಿಸುತ್ತದೆ. ಎಚ್ ಡಿಎಲ್, ಉತ್ತಮ ಕೊಲೆಸ್ಟ್ರಾಲ್, ಇದು ಒಬ್ಬರ ದೇಹದಿಂದ ಹೆಚ್ಚುವರಿ ಎಲ್ ಡಿಎಲ್ ಅನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ.

**ಇವೇ ನೋಡಿ ಕೊಲೆಸ್ಟ್ರಾಲ್ ಹೆಚ್ಚಿಸುವ ಆಹಾರಗಳು**

ಈ ಮೊದಲೇ ಹೇಳಿದ ಹಾಗೆ ನಾವು ಸೇವಿಸುವ ಆಹಾರ ನಮ್ಮ ಕೊಲೆಸ್ಟ್ರಾಲ್ ಮಟ್ಟದ ಮೇಲೆ ದೊಡ್ಡ ಪ್ರಮಾಣದಲ್ಲಿ ಪರಿಣಾಮ ಬೀರುತ್ತದೆ. ಹೆಚ್ಚು ಕೊಬ್ಬಿರುವ ಆಹಾರಗಳಾದ ಮೊಟ್ಟೆ, ಮಾಂಸ ಮತ್ತು ಡೈರಿ ಉತ್ಪನ್ನಗಳ ಅತಿಯಾದ ಸೇವನೆಯು ನಮ್ಮ ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸುತ್ತದೆ. ಹೀಗಾಗಿ, ತರಕಾರಿಗಳು, ಹಣ್ಣುಗಳು, ಬೀನ್ಸ್ ಮತ್ತು ಓಟ್ಸ್'ನಂತಹ ಸಾಕಷ್ಟು ಫೈಬರ್ ಇರುವ ಆಹಾರವನ್ನು ನಮ್ಮ ಊಟದಲ್ಲಿ ಸೇರಿಸುವುದು ಅವಶ್ಯಕತೆಯಾಗಿದೆ. ಫೈಬರ್ ದೇಹದಿಂದ ಕೆಟ್ಟ ಕೊಲೆಸ್ಟ್ರಾಲ್ ಅನ್ನು ನಿವಾರಿಸುತ್ತದೆ ಮತ್ತು ಉತ್ತಮ ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸುತ್ತದೆ, ದೇಹವನ್ನು ಆರೋಗ್ಯವಾಗಿರಿಸುತ್ತದೆ. ದಿನ ನಿತ್ಯ ವ್ಯಾಯಾಮ, ಧೂಮಪಾನ ಮಾಡದಿರುವುದು ಮತ್ತು ಸರಿಯಾದ ತೂಕವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಕೆಲವು ಕೆಲಸಗಳು ಕೊಲೆಸ್ಟ್ರಾಲ್ ಮಟ್ಟವನ್ನು ನಿರ್ವಹಿಸಲು ಸಹಾಯ ಮಾಡುತ್ತವೆ. ಅಲ್ಲದೆ, ಸಿಹಿತಿಂಡಿಗಳು, ಸಂಸ್ಕರಿಸಿದ ಫಾಸ್ಟ್ ಫುಡ್'ಗಳು ಮತ್ತು ಜಂಕ್ ಫುಡ್'ಗಳನ್ನು ಸೇವಿಸದಿರುವುದು ಸಹ ಕೊಲೆಸ್ಟ್ರಾಲ್ ಮಟ್ಟವನ್ನು ನಿರ್ವಹಿಸಲು ಸಹಾಯ ಮಾಡುತ್ತವೆ. ಅಂದಹಾಗೆ ನಿಮ್ಮ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುವ ಏಳು ಸರಳ ಆಹಾರಗಳು ಇಲ್ಲಿವೆ ನೋಡಿ.



**■ ಓಟ್ಸ್:** ಓಟ್ಸ್ ಕರಗಬಲ್ಲ ಫೈಬರ್ ಅನ್ನು ಹೊಂದಿರುತ್ತದೆ. ಇದನ್ನು ಬೀಟಾ-ಗ್ಲುಕನ್ ಎಂದು ಕರೆಯಲಾಗುತ್ತದೆ. ಇದು ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**■ ಬೀನ್ಸ್:** ಬೀನ್ಸ್ ಸಹ ಕರಗಬಲ್ಲ ಫೈಬರ್'ನಿಂದ ಕೂಡಿದೆ. ಇದು ಎಲ್ ಡಿಎಲ್ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**■ ಬೆಂಡೆಕಾಯಿ:** ಕಡಿಮೆ ಕ್ಯಾಲೊರಿ, ಕರಗಬಲ್ಲ ಫೈಬರ್ ಹೊಂದಿರುವ ಬೆಂಡೆಕಾಯಿ ಎಲ್ಲರ ಮೆಚ್ಚಿನ ತರಕಾರಿ. ಬೆಂಡೆಕಾಯಿಯನ್ನು ಸೇವಿಸುವುದರಿಂದ ಕೊಲೆಸ್ಟ್ರಾಲ್ ಮಟ್ಟವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

**■ ನಟ್ಸ್:** ನಟ್ಸ್ ಆರೋಗ್ಯಕರ ಕೊಬ್ಬುಗಳನ್ನು ಹೊಂದಿದೆ. ಇದು ನಮ್ಮ ಹೃದಯಕ್ಕೆ ಒಳ್ಳೆಯದು. ಬಾದಾಮಿ, ಕಡಲೆಕಾಯಿ ಮತ್ತು ವಾಲ್ ನಟ್ಸ್ ವಿಶೇಷವಾಗಿ ನಮ್ಮ ಹೃದಯದ ಆರೋಗ್ಯವನ್ನು ಕಾಪಾಡುತ್ತವೆ. ಕೊಲೆಸ್ಟ್ರಾಲ್ ಅನ್ನು ಹೊರತುಪಡಿಸಿ, ನಿಮ್ಮ ಟ್ರೈಗ್ಲಿಸರೈಡ್ ಮಟ್ಟವನ್ನು ಕಡಿಮೆ ಮಾಡಲು ಸಹ ಅವು ಸಹಾಯ ಮಾಡುತ್ತವೆ.

**■ ದ್ವಿದಳ ಧಾನ್ಯಗಳು:** ಎಲ್ಲಾ ದ್ವಿದಳ ಧಾನ್ಯಗಳು ಸಸ್ಯ ಆಧಾರಿತ ಪ್ರೋಟೀನ್‌ಗಳು ಮತ್ತು ಕರಗುವ ನಾರುಗಳಿಂದ ಸಮೃದ್ಧವಾಗಿವೆ. ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಕಡಲೆಕಾಳಿನಂತಹ ಧಾನ್ಯವನ್ನು ನಿಮ್ಮ ಆಹಾರದಲ್ಲಿ ಸೇರಿಸುವುದನ್ನು ಮರೆಯದಿರಿ.

**■ ಫ್ಯಾಟಿ ಫಿಶ್:** ಸಾಲ್ಮನ್, ಸಾರ್ಡೀನ್ ಮತ್ತು ಮ್ಯಾಕೆರೆಲ್ ಸೇರಿದಂತೆ ಕೆಲವು ಮೀನುಗಳು ಒಮೆಗಾ-3 ಕೊಬ್ಬಿನಾಮ್ಲಗಳಿಂದ ಸಮೃದ್ಧವಾಗಿವೆ. ಇವು ನಿಮ್ಮ ಹೃದಯದ ಆರೋಗ್ಯಕ್ಕೆ ಬಹಳ ಒಳ್ಳೆಯದು.

## ಆರೋಗ್ಯ ಮಾಹಿತಿ


# ಚರ್ಮದ ರಕ್ಷಣೆಯಲ್ಲಿ ಕೊತ್ತಂಬರಿ ಸೊಪ್ಪಿನ ಪವಾಡ

ಮಾರುಕಟ್ಟೆಯಲ್ಲಿ ದೊರೆಯುವ ಸಾಮಾನ್ಯ ಸೊಪ್ಪುಗಳಲ್ಲಿ ಕೊತ್ತಂಬರಿ ಸೊಪ್ಪು ಸಹ ಒಂದು. ಇದನ್ನು ಕಡಿಮೆ ಬೆಲೆಯಲ್ಲಿ ಸುಲಭವಾಗಿ ಪಡೆಯಬಹುದು. ಕೊತ್ತಂಬರಿ ಸೊಪ್ಪು ಆಹಾರ ಪದಾರ್ಥಗಳ ರುಚಿ ಹೆಚ್ಚಿಸಲು ಸಹಾಯ ಮಡುವುದು. ಇದರಲ್ಲಿ ಇರುವ ಔಷಧೀಯ ಗುಣವು ಚರ್ಮವನ್ನು ಅದ್ಬುತವಾಗಿ ಇರಿಸುತ್ತದೆ.

● **ಚರ್ಮದ ಆರೈಕೆ:** ಕೊತ್ತಂಬರಿ ಸೊಪ್ಪಿನಲ್ಲಿ ಫೋಲೇಟ್, ವಿಟಮಿನ್ ಸಿ, ಬೀಟಾ- ಕ್ಯಾರೋಟೀನ್ ಮತ್ತು ಆಂಟಿ ಆಕ್ಸಿಡೆಂಟ್‌ಗಳು ಅತ್ಯಂತ ಶ್ರೀಮಂತವಾಗಿವೆ. ಇದು ಚರ್ಮದ ಆರೋಗ್ಯವನ್ನು ಉತ್ತಮವಾಗಿಡಲು ಸಹಾಯ ಮಾಡುವುದು. ಚರ್ಮದ ಕೋಶಗಳನ್ನು ಆಕ್ಸಿಡೇಟಿವ್ ಒತ್ತಡದಿಂದ ರಕ್ಷಿಸಲು ಸಹಾಯ ಮಾಡುತ್ತದೆ. ಜೊತೆಗೆ ಚರ್ಮವನ್ನು ಮೃದುವಾಗಿ ತೇವಾಂಶದಿಂದ ಕೂಡಿರುವಂತೆ ಮಾಡುವುದು.

● **ರಕ್ತ ಕಣಗಳನ್ನು ಹೆಚ್ಚಿಸುತ್ತದೆ:** ಸಿಲಾಂಟ್ರೋ ಕಬ್ಬಿಣದ ಉತ್ತಮ ಮೂಲವಾಗಿದೆ. ಇದು ದೇಹದಲ್ಲಿ ಹಿಮಗ್ಲೋಬಿನ್ ಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ರಕ್ತ ಹೀನತೆಯನ್ನು ತಡೆಯಲು ಇದು ಸಹಾಯ ಮಾಡುತ್ತದೆ. ಚರ್ಮದಲ್ಲಿ ಎಣ್ಣೆಯ ಮಟ್ಟವನ್ನು ನಿಯಂತ್ರಿಸಲು ಮತ್ತು ಒಣಗದಂತೆ ತಡೆಯಲು ಸಹಾಯ ಮಾಡುವುದು. ತಾಜಾ ಕೊತ್ತಂಬರಿ ಸೊಪ್ಪನ್ನು ಅಗೆಯುವುದರಿಂದಲೂ ಈ ಎಲ್ಲಾ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು.

● **ಶಿಲೀಂಧ್ರ ವಿರೋಧಿ ಗುಣಗಳು:** ಈ ಸಸ್ಯಗಳು ಶಿಲೀಂಧ್ರ ವಿರೋಧಿ ಗುಣಗಳನ್ನು ಒಳಗೊಂಡಿದೆ. ಇದು ಮೊಡವೆಗಳ ಗುಳ್ಳೆ, ಬ್ಲ್ಯಾಕ್ ಹೆಡ್ಸ್ ಮತ್ತು ಒಣ ಚರ್ಮಕ್ಕೆ ಚಿಕಿತ್ಸೆಯನ್ನು ನೀಡುತ್ತದೆ. ಇಂತಹ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವುದರ ಜೊತೆಗೆ ಶಾಶ್ವತವಾಗಿ ಅಂತಹ ಸಮಸ್ಯೆಗೆ ಒಳಗಾಗದಂತೆ ರಕ್ಷಣೆ ನೀಡುವುದು. ಕೊತ್ತಂಬರಿ ಚರ್ಮದ ಮೇಲಿನ ಆಮ್ಲೀಯತೆಯನ್ನು ಕಡಿಮೆ ಮಾಡುವ ಗುಣಗಳನ್ನು ಒಳಗೊಂಡಿದೆ. ಚರ್ಮದ ಮೇಲೆ ಉಂಟಾಗುವ ಅನೇಕ ಸಮಸ್ಯೆಗಳನ್ನು ಸುಲಭವಾಗಿ ತಡೆಯಬಹುದು.



● **ಜೀರ್ಣ ಕ್ರಿಯೆಯನ್ನು ಸುಧಾರಿಸುವುದು:** ಕೊತ್ತಂಬರಿ ಸೊಪ್ಪಿನಲ್ಲಿ ಅಧಿಕ ಪ್ರಮಾಣದ ನಾರಿನಂಶ ಇರುವುದರಿಂದ ಕರುಳಿನ ಕೆಲಸವನ್ನು ಸುಲಭಗೊಳಿಸುವುದು. ದೇಹದಲ್ಲಿ ಇರುವ ವಿಷಕಾರಿ ಅಂಶವನ್ನು ಹೊರ ಹಾಕಲು ಸಹಾಯ ಮಾಡುತ್ತದೆ. ಸ್ವತಂತ್ರ ರಾಡಿಕಲ್ಸ್‌ಗಳನ್ನು ನಿಯಂತ್ರಣದಲ್ಲಿ ಇಡುವುದರ ಮೂಲಕ ಕ್ಯಾನ್ಸರ್‌ನಂತಹ ಸಮಸ್ಯೆಯನ್ನು ನಿವಾರಿಸುವುದು.

# ಗ್ಯಾಸ್, ಹೊಟ್ಟೆ ಉಬ್ಬುವಿಕೆ, ಕಾಲು ನೋವು ಹೋಗಲಾಡಿಸುವ ಸರಳ ಆಸನಗಳಿವು

ವರ್ಕ್ ಫ್ರಂ ಹೋಂ, ಕೊರೊನಾ ಲಾಕ್ ಡೌನ್ ಇವೆಲ್ಲಾ ಬಹುತೇಕರಲ್ಲಿ ದೈಹಿಕ ಚಟುವಟಿಕೆ ಕಡಿಮೆ ಮಾಡಿದೆ. ಕೊರೊನಾವೈರಸ್ ಎರಡನೇ ಅಲೆಯಲ್ಲಿ ತುಂಬಾವೇ ವೇಗವಾಗಿ ಸೋಂಕು ಹರಡುತ್ತಿರುವುದರಿಮದ ಈ ದಿನಗಳಲ್ಲಿ ಜಿಮ್, ವಾಕ್ ಅಂತ ಹೊರಗಡೆ ಅಡ್ಡಾಡುವುದು ಸುರಕ್ಷಿತವಲ್ಲ. ಅಲ್ಲದೆ ಸರಕಾರವೂ ಜನತಾ ಕರ್ಫ್ಯೂ ಹಾಕಿರುವುದರಿಂದ ನಿಯಮ ಮೀರಿ ಹೊರಗಡೆ ಹೋಗಲೂ ಬಾರದು. ಆದರೆ ಮನೆಯ ಒಳಗಡೆಯೇ ಇರುವುದು ಆರೋಗ್ಯಕ್ಕೆ ಒಳ್ಳೆಯದೇ? ಖಂಡಿತ ಅಲ್ಲ. ಕಂಪ್ಯೂಟರ್ ಮುಂದೆ ತುಂಬಾ ಹೊತ್ತು ಕೂರುವುದು, ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು ತಿನ್ನುವುದು, ಯಾವುದೇ ದೈಹಿಕ ವ್ಯಾಯಾಮ ಇಲ್ಲದೇ ಇರುವುದು ಇವೆಲ್ಲಾ ದೇಹಕ್ಕೆ ಕಾಯಿಲೆಯನ್ನು ತರುತ್ತದೆ. ನೀವು ಈಗಾಗಲೇ ಗಮನಿಸಿರಬಹುದು ತುಂಬಾ ಹೊತ್ತು ಕೂತು ಕೆಲಸ ಮಾಡುತ್ತಿರುವುದರಿಂದ ಕಾಲುಗಳಲ್ಲಿ ನೋವು, ಗ್ಯಾಸ್ ಸಮಸ್ಯೆ, ಮೈಗ್ರೇನ್, ಸೊಂಟ ನೋವು ಮುಂತಾದ ಸಮಸ್ಯೆ ಕಂಡು ಬಂದಿರುತ್ತದೆ. ತುಂಬಾ ಹೊತ್ತು ಕೂತಲ್ಲಿಯೇ ಕೂರುವುದರಿಂದ ಅಜೀರ್ಣ ಕೂಡ ಉಂಟಾಗುವುದು, ಇವೆಲ್ಲದಕ್ಕೆ ರುಜುತಾ ದ್ವಿವೇಕರ್ ಯಾವ ಆಸನ ಪರಿಣಾಮಕಾರಿ ಎಂದು ಹೇಳಿದ್ದಾರೆ. ರುಜುತಾ ದ್ವಿವೇರ್ಕ ಒಬ್ಬ ಪ್ರಸಿದ್ಧ ಸೆಲೆಬ್ರಿಟಿ ಡಯಟಿಷಿಯನ್. ಕರೀನಾ ಕಪೂರ್ ಸೇರಿ ಹಲವಾರು ಬಾಲಿವುಡ್ ಸೆಲೆಬ್ರಿಟಿಗಳಿಗೆ ಇವರೇ ಡಯಟಿಷಿಯನ್. ಇನ್‌ಸ್ಟಾಗ್ರಾಂನಲ್ಲಿ ಸಾಕಷ್ಟು ಉಪಯುಕ್ತ ವೀಡಿಯೋ ಹಂಚುವ ಇವರು ಇದೀಗ ಯಾವ 3 ಆಸನ ತುಂಬಾ ಹೊತ್ತು ಕೂತು ಕೆಲಸ ಮಾಡುವವರಿಗೆ ಒಳ್ಳೆಯದು ಎಂಬುವುದಾಗಿ ತಿಳಿಸಿಕೊಟ್ಟಿದ್ದಾರೆ.



**1 ವಿಪರೀತ ಕರಣಿ ಆಸನ**


ಯೋಗದಲ್ಲಿ ಈ ಆಸನದ ಪ್ರಯೋಜನ ತುಂಬಾನೇ ಇದೆ. ಇದು ಮಾನಸಿಕ ಒತ್ತಡ ಕಡಿಮೆ ಮಾಡುತ್ತದೆ, ದೇಹದಲ್ಲಿ ರಕ್ತ ಸಂಚಾರಕ್ಕೆ ಸಹಕಾರಿ ಅಲ್ಲದೆ ಕಾಲು ನೋವು, ಸೊಂಟ ನೋವು ಈ ರೀತಿಯ ಸಮಸ್ಯೆ ನಿವಾರಣೆಗೆ ಕೂಡ ಸಹಕಾರಿ. ಈ ಆಸನವನ್ನು ಮಾಡುವುದು ಸುಲಭ. ನೀವು ಮ್ಯಾಟ್ ಮೇಲೆ ಮಲಗಿ ಚಿತ್ರದಲ್ಲಿ ತೋರಿಸಿರುವಂತೆ ಎರಡೂ ಕಾಲುಗಳನ್ನು ಗೋಡೆಯ ಮೇಲೆ ಇಡಿ. ಕೈಗಳನ್ನು ದೇಹದ ಪಕ್ಕದಲ್ಲಿ ಅಥವಾ ಹೊಟ್ಟೆಯ ಮೇಲೆ ಇಡಿ. ಈ ರೀತಿ 5 ನಿಮಿಷ ಇರಿ.

**2 ವಿಪರೀಕ ಕರಣಿಯಲ್ಲ ಕಾಲುಗಳನ್ನು ಅಗಲ ಮಾಡುವುದು**

ಈ ಆಸನದಲ್ಲಿ ನೀವು ಕಾಲುಗಳನ್ನು ಅಗಲ ಮಾಡಬೇಕು, ಎಷ್ಟು ಸಾಧ್ಯವೋ ಷ್ಟು ಮಾಡಿ, ತೊಡೆ ಸಂದುಗಳಲ್ಲಿ ಸ್ವಲ್ಪ ನೋವು ಬರುತ್ತದೆ, ಅಷ್ಟು ಅಗಲ ಮಾಡ ಒಂದೆರಡು ನಿಮಿಷ ಇರಿ.

**3 ವಿಪರೀತ ಕರಣಿಯಲ್ಲಿ ಸುಪ್ತ ಬದ್ಧ ಕೋನಾಸನ**

ನೀವು 2ನೇ ಆಸ ಮಾಡಿದ ಬಳಿಕ ನಿಧಾನವಾಗಿ ಕಾಲುಗಳನ್ನು ಜೋಡಿಸಿ, ನಂತರ ಸುಪ್ತ ಬದ್ಧ ಆಕಾರಕ್ಕೆ ತನ್ನಿ. ಈ ಭಂಗಿಯಲ್ಲಿ 2-3 ನಿಮಿಷ ಇರಿ. ನಂತರ ನಿಧಾನಕ್ಕೆ ಕಾಲುಗಳನ್ನು ನೀಡಿ, ನಂತರ ಮಡಚಿ ಎಡಕ್ಕೆ ತಿರುಗಿ ಕಾಲುಗಳನ್ನು ಎದೆಗೆ ಒತ್ತ ಹಿಡಿದು 2 ನಿಮಿಷ ವಿಶ್ರಾಂತಿ ತೆಗೆಯಿರಿ, ನಾವು ಕಾಲುಗಳನ್ನು ಮಡಚಿ ಒಂದು ಬದಿ ತಿರುಗಿ ಮಲಗುತ್ತೇವೆ ಅಲ್ಲ ಹಾಗೇ, ನಂತರ ನಿಧಾನಕ್ಕೆ ಎದ್ದು ಕುಳಿತುಕೊಳ್ಳಿ. ನೀವು ಈ ರೀತಿ ಮಾಡುವುದರಿಂದ ದೇಹದಲ್ಲಿ ರಕ್ತ ಸಂಚಾರ ಉತ್ತಮವಾಗುತ್ತದೆ, ತುಂಬಾ ಹೊತ್ತು ಕೂತು ಕೆಲಸ ಮಾಡುವುದರಿಂದ ಉಂಟಾದ ಕಾಲು ನೋವು, ಸೊಂಟ ನೋವು ಕಡಿಮೆಯಾಗುವುದು.



# ಜ್ವರ ಬಂದಾಗ ಚಿಕನ್ ಸೇವನೆ ಮಾಡಬಹುದೇ?

ನಾವು ಅನಾರೋಗ್ಯಕ್ಕೆ ಒಳಗಾದಾಗ ಎಲ್ಲಾ ರೀತಿಯ ಪೋಷಕಾಂಶಗಳಿರುವ ಸಮತೋಲನವಿರುವ ಆಹಾರವನ್ನು ಸೇವಿಸುವುದು ಅತಿ ಮುಖ್ಯ. ಸದ್ಯ ನಮ್ಮ ರೋಗ ನಿರೋಧಕ ವ್ಯವಸ್ಥೆಯು ದುರ್ಬಲವಾಗಿದೆ. ಆದ್ದರಿಂದ ಎದುರಾಗುತ್ತಿರುವ ಅನೇಕ ಸಮಸ್ಯೆಗಳಿಂದ ದೇಹವನ್ನು ರಕ್ಷಿಸುವುದು ಅತ್ಯಗತ್ಯ. ಈ ಸಮಯದಲ್ಲಿ ವೈದ್ಯರು ಯಾವಾಗಲೂ ಲೈಟ್ ಫುಡ್ ಸೇವಿಸಲು ಶಿಫಾರಸ್ಸು ಮಾಡುತ್ತಾರೆ. ಇದೆಲ್ಲದರ ಮಧ್ಯೆ, ಈ ಸಮಯದಲ್ಲಿ ಕೋಳಿ ಸೇವನೆಯ ಬಗ್ಗೆ ಬಹಳಷ್ಟು ಜನರಿಗೆ ಅನೇಕ ಅನುಮಾನವಿದೆ. ಹಾಗೆಯೇ ಅನಾರೋಗ್ಯದಿಂದ ಅಥವಾ ಜ್ವರದಿಂದ ಬಳಲುತ್ತಿದ್ದರೆ ಕೋಳಿ ಸೇವನೆ ಮಾಡಬಹುದೇ ಎಂಬ ಪ್ರಶ್ನೆ ಅನೇಕರನ್ನು ಕಾಡುತ್ತದೆ. ಆದ್ದರಿಂದ ಈ ಬಗ್ಗೆ ತಿಳಿಯಲು ಮುಂದೆ ಓದಿ.

**● ಇದಕ್ಕೆ ನಾವು ಗಮನಕೊಡಬೇಕಾಗಿದೆ**

ಜ್ವರದಿಂದ ಬಳಲುತ್ತಿರುವಾಗ ಚಿಕನ್ ಸೇವಿಸುವುದು ಸಂಪೂರ್ಣವಾಗಿ ಸುರಕ್ಷಿತವಾಗಿದೆ. ಆದರೆ ನಾವು ಗಮನ ಕೊಡಬೇಕಾದ ಪ್ರಮುಖ ವಿಷಯವೆಂದರೆ ಕೋಳಿಯನ್ನು ಯಾವ ರೂಪದಲ್ಲಿ ಸೇವಿಸುವುದು ಎಂಬುದಾಗಿರುತ್ತದೆ. ಸ್ವಲ್ಪ ಎಣ್ಣೆ ಮತ್ತು ಮಸಾಲೆಗಳೊಂದಿಗೆ ತಯಾರಿಸಿದ ಚಿಕನ್ ಭಕ್ಷ್ಯಗಳು ನೀವು ಅನಾರೋಗ್ಯದಿಂದ ಬಳಲುತ್ತಿರುವಾಗ ಸಹಾಯ ಮಾಡುತ್ತವೆ. ಇದು ಪ್ರೋಟೀನ್ ಮತ್ತು ಫೈಬರ್‌ನಿಂದ ಕೂಡಿದ್ದು, ಜ್ವರದಿಂದ ಬಳಲುತ್ತಿರುವಾಗ ಇವು ದೇಹಕ್ಕೆ ಅಗತ್ಯವಿರುವ ಎರಡು ಪ್ರಮುಖ ಪೋಷಕಾಂಶಗಳಾಗಿವೆ.

**● ಚಿಕನ್ ಸೂಪ್ ಪ್ರಯೋಜನಗಳು**

ನೀವು ಜ್ವರದಿಂದ ಬಳಲುತ್ತಿರುವಾಗ ಚಿಕನ್ ಸೂಪ್ ತಯಾರಿಸಬಹುದು. ಇದು ಅತ್ಯುತ್ತಮ ಖಾದ್ಯವಾಗಿದೆ. ಬಿಸಿ ಸೂಪ್ ಸೇವಿಸುವುದರಿಂದ ಇದರಲ್ಲಿರುವ ಕೋಳಿಯ ಪ್ರೋಟೀನ್ ಅಂಶವು ನಿಮ್ಮ ದೇಹಕ್ಕೆ ಚೇತರಿಸಿಕೊಳ್ಳಲು ಸಾಕಷ್ಟು ಶಕ್ತಿಯನ್ನು ನೀಡುತ್ತದೆ. ಚಿಕನ್ ಸೂಪ್ ಫ್ಲೂಯಿಡ್ಸ್ ಮತ್ತು ಎಲೆಕ್ಟ್ರೋಲೈಟ್‌ನ ಅದ್ಭುತ ಮೂಲವಾಗಿದ್ದು, ಇದು ನಿಮ್ಮ ದೇಹವನ್ನು ಹೈಡ್ರೇಕರಿಸುತ್ತದೆ. ಈ ಬಿಸಿ ದ್ರವವು ನೈಸರ್ಗಿಕ ಡಿಕೊಂಗಸ್ಟೆಂಟ್ ಆಗಿದ್ದು, ಇದು ನಿಮ್ಮ ಕೆಮ್ಮು ಮತ್ತು ಮೂಗು ಉಸಿರುಕಟ್ಟುವುದನ್ನು ಕಡಿಮೆ ಮಾಡುತ್ತದೆ ಮತ್ತು ಅವುಗಳಿಗೆ ಕಾರಣವಾಗುವ ನ್ಯೂಟ್ರೋಫಿಲ್‌ಗಳ ಕ್ರಿಯೆಯನ್ನು ತಡೆಯುತ್ತದೆ. ಚಿಕನ್ ಸಲಾಡ್, ಗ್ರಿಲ್ಡ್ ಚಿಕನ್, ರೋಸ್ಟೆಡ್ ಚಿಕನ್, ಚಿಕನ್ ಸ್ಟ್ಯೂ, ಬೇಯಿಸಿದ ಚಿಕನ್ ಟಿಕ್ಕಾ, ಕ್ವಿನೋವಾ ಚಿಕನ್ ಮತ್ತು ಚಿಕನ್ ತುಕ್ಪಾ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಕೆಲವು ಆರೋಗ್ಯಕರ ಕೋಳಿ ಆಧಾರಿತ ಭಕ್ಷ್ಯಗಳಾಗಿವೆ.

**● ಯಾವುದನ್ನು ಸೇವಿಸಬಾರದು?**

ಯಾವುದೇ ರೀತಿಯ ಹುರಿದ ಮತ್ತು ಭಾರವಾದ ಕೋಳಿ ಭಕ್ಷ್ಯಗಳನ್ನು ತಪ್ಪಿಸಿ. ಹಲವಾರು ಮಸಾಲೆಗಳು, ಎಣ್ಣೆ, ಕ್ರೀಂ ಅಥವಾ ಸಮೃದ್ಧ ಪದಾರ್ಥಗಳಿಂದ ತಯಾರಿಸಿದ ಚಿಕನ್ ಭಕ್ಷ್ಯಗಳು ನಿಮ್ಮ ಚೇತರಿಕೆಗೆ ಅಡ್ಡಿಯಾಗಬಹುದು. ಅಂತಹ ಆಹಾರಗಳನ್ನು ಜೀರ್ಣಿಸಿಕೊಳ್ಳಲು ಕಷ್ಟವಾಗಬಹುದು. ನಿಮ್ಮ ದೇಹಕ್ಕೆ ಸಹಾಯ ಮಾಡುವ ಬದಲು ಅದನ್ನು ಇನ್ನಷ್ಟು ದುರ್ಬಲಗೊಳಿಸಬಹುದು. ಆದ್ದರಿಂದ ಚಿಕನ್ ನುಗ್ಗೆಟ್ಸ್, ಬಟರ್ ಚಿಕನ್, ಚಿಕನ್ ಮಸಾಲಾ, ಚಿಕನ್ ಲಾಲಿ ಪಾಪ್, ಚಿಲ್ಲಿ ಚಿಕನ್, ಚಿಕನ್ ಷಾವರ್ಮಾ ಮತ್ತು ಕ್ರೀಮ್ ಚಿಕನ್ ಮುಂತಾದ ಭಕ್ಷ್ಯಗಳಿಂದ ನೀವು ದೂರವಿರಬೇಕು.




# ಮಾನಸಿಕ ಒತ್ತಡ ಮತ್ತು ಆತಂಕಕ್ಕೆ ಅಶ್ವಗಂಧ ಒಂದು ನೈಜ ಪರಿಹಾರ!

ಇಂದು ಪ್ರಪಂಚ ಎಷ್ಟೇ ಮುಂದುವರೆದಿದ್ದರೂ ಸಹ ಹಳೆಯ ಕಾಲದ ಕೆಲವೊಂದು ಪದ್ಧತಿಗಳನ್ನು ಬಿಡುವಂತಿಲ್ಲ ಎನ್ನುವ ಹಾಗಾಗಿದೆ. ಜೀವನ ಶೈಲಿಯಲ್ಲಿ ಕೆಲವೊಂದು ಬದಲಾವಣೆಗಳನ್ನು ನಾವು ಬಲವಂತವಾಗಿ ತಂದುಕೊಂಡು ಇಂದು ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಆದರೆ ಹಳೆಯ ಕಾಲದ ಜನರಿಗೆ ಈಗಿನಂತೆ ಯಾವುದೇ ಸೌಲಭ್ಯಗಳು ಇರಲಿಲ್ಲ, ಆಗ ಸಿಗುತ್ತಿದ್ದ ಪ್ರತಿಯೊಂದು ವಸ್ತುವು ಕೂಡ ಶುದ್ಧವಾದ ರೂಪದಲ್ಲಿ ಸಿಗುತ್ತಿತ್ತು. ಆದರಿಂದಲೇ ಅಂದಿನ ಜನರು ಆರೋಗ್ಯವಂತರಾಗಿ, ಖುಷಿಯಾಗಿ ಜೀವನ ನಡೆಸುತ್ತಿದ್ದರು. ಆದರೆ ಇಂದು ಪ್ರತಿಯೊಬ್ಬರೂ ಸಹ ಮಾನಸಿಕ ಖಿನ್ನತೆಯಿಂದ, ಮಾನಸಿಕ ಆತಂಕ ಮತ್ತು ಮಾನಸಿಕ ಒತ್ತಡದಿಂದ ಬಳಲಿ ಬೆಂಡಾಗಿದ್ದಾರೆ. ಇದಕ್ಕೆ ಸುಲಭ ಪರಿಹಾರ ಎಂದರೆ ನಮ್ಮ ಆಹಾರ ಪದ್ಧತಿಯಲ್ಲಿ ಸ್ವಲ್ಪ ಪ್ರಮಾಣದಲ್ಲಾದರೂ ಸರಿ. ಅಶ್ವಗಂಧವನ್ನು ಸೇರಿಸಿಕೊಳ್ಳುವುದು.

**● ಅತ್ಯುತ್ತಮವಾದ ಮಾನಸಿಕ ಬದಲಾವಣೆಯಲ್ಲಿ ಅಶ್ವಗಂಧ ಹೇಗೆ ಪ್ರಯೋಜನಕಾರಿ?**

ನಮ್ಮ ಮಾನಸಿಕ ಒತ್ತಡ ಸಮಸ್ಯೆಯ ನಿರ್ವಹಣೆಯಲ್ಲಿ ನಾವು ಇಂದು ಹಲವಾರು ತಂತ್ರಗಳನ್ನು ಬಳಸಿಕೊಂಡು ನಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು. ಇದರಲ್ಲಿ ಉಸಿರಾಟದ ವ್ಯಾಯಾಮಗಳು, ಧ್ಯಾನ ಮಾಡುವುದು ಎಲ್ಲವೂ ಸೇರಿರುತ್ತದೆ. ಆದರೆ ಎಲ್ಲರಿಗೂ ಇದು ಕೆಲಸ ಮಾಡುತ್ತದೆ ಎಂದು ಹೇಳುವುದು ಕಷ್ಟ. ನಮ್ಮ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವಲ್ಲಿ ಅಶ್ವಗಂಧ ಎಂಬ ಆಯುರ್ವೇದ ಪದಾರ್ಥ ಮಹತ್ತರ ಪಾತ್ರ ಬೀರುತ್ತದೆ. ಬಹಳಷ್ಟು ಅಧ್ಯಯನಗಳು ಹೇಳುವ ಹಾಗೆ ಇದೊಂದು ಗಿಡಮೂಲಿಕೆ ಆಗಿದ್ದು ಬಹಳಷ್ಟು ಹಿಂದಿನಿಂದಲೂ ಕೂಡ ಮಾನಸಿಕ ಆರೋಗ್ಯದ ವಿಚಾರದಲ್ಲಿ ಇದು ಅತಿ ಹೆಚ್ಚಿನ ಪ್ರಭಾವ ಬೀರುತ್ತದೆ.





**● ಮಾನಸಿಕ ಆತಂಕ ದೂರಮಾಡುತ್ತದೆ..**

ಇದಕ್ಕೆ ಮುಖ್ಯ ಕಾರಣ ಎಂದರೆ ನಮ್ಮ ದೇಹದ ಅಡ್ರಿನಲಿನ್ ಕಾರ್ಯ ಚಟುವಟಿಕೆಯನ್ನು ಇದು ನಿಯಂತ್ರಣ ಮಾಡಿ ದೇಹದ ನರಮಂಡಲವನ್ನು ಶಾಂತಗೊಳಿಸುತ್ತದೆ. ಇದರಿಂದ ಎಷ್ಟೇ ಪ್ರಮಾಣದಲ್ಲಿ ಮಾನಸಿಕ ಒತ್ತಡದಿಂದ ಬಳಲುತ್ತಿದ್ದರು ಸಹ ಮಾನಸಿಕ ಸ್ಥಿತಿ ಮಿತಿಯನ್ನು ಸಹಜಸ್ಥಿತಿಗೆ ಮರಳಿಸಿ ಕೊಳ್ಳುವಲ್ಲಿ ಅನುಕೂಲವಾಗುತ್ತದೆ. ದೇಹದಲ್ಲಿ ಕಾರ್ಟಿಸೋಲ್ ಹಾರ್ಮೋನಿನ ಅಸಮತೋಲನವನ್ನು ತಪ್ಪಿಸಿ ಮಾನಸಿಕ ಆತಂಕವನ್ನು ದೂರ ಮಾಡುತ್ತದೆ. ಜನರಿಗೆ ಅತ್ಯುತ್ತಮ ನಿದ್ರೆಯನ್ನು ಕೊಡುವ ಮೂಲಕ ಅತಿಯಾದ ಮಾನಸಿಕ ಒತ್ತಡದಿಂದ ರಕ್ಷಣೆ ಮಾಡುತ್ತದೆ.

**● ಅಶ್ವಗಂಧ ಸೇವನೆಯ ವಿಚಾರದಲ್ಲಿ ಜನರು ಇದನ್ನು ಗಮನಿಸಬೇಕು**

ಈಗಿನ ಸಮಯದಲ್ಲಿ ಅಶ್ವಗಂಧ ಮಾತ್ರೆಗಳ ರೂಪದಲ್ಲಿ ಸಿಗುತ್ತಿದೆ. ದೀರ್ಘಕಾಲದಿಂದ ಮಾನಸಿಕ ಒತ್ತಡ ಮತ್ತು ಆತಂಕವನ್ನು ಒಳಗೊಂಡಿರುವ ಜನರಿಗೆ ಇದು ಪರಿಹಾರ ಎಂದು ಹೇಳಲಾಗುತ್ತದೆ.ಯಾವುದೇ ಆಯುರ್ವೇದ ಅಂಗಡಿಗಳಲ್ಲಿ ಅಶ್ವಗಂಧವನ್ನು ಜನರು ಕೇಳಿ ಪಡೆಯಬಹುದು. ಆದರೆ ಯಾವುದಕ್ಕೂ ಒಮ್ಮೆ ನಿಮ್ಮ ಆರೋಗ್ಯ ತಜ್ಞರ ಸಲಹೆ ಪಡೆದುಕೊಳ್ಳುವುದು ಉತ್ತಮ.

**ಈ ಕೆಳಗಿನ ಲಕ್ಷಣಗಳು ನಿಮ್ಮಲ್ಲಿದ್ದರೆ ಅಶ್ವಗಂಧ ಸೇವನೆ ಬಗ್ಗೆ ಎಚ್ಚರವಹಿಸಿ**

- ನೀವು ಗರ್ಭಿಣಿಯಾಗಿದ್ದರೆ ಅಥವಾ ಬಾಣಂತಿ ಆಗಿದ್ದರೆ,
- ಮಧುಮೇಹ ಸಮಸ್ಯೆಯಿಂದ ಬಳಲುತ್ತಿದ್ದರೆ,
- ರೋಗನಿರೋಧಕ ಶಕ್ತಿಗೆ ಸಂಬಂಧಪಟ್ಟಂತೆ ಯಾವುದಾದರೂ ಸಮಸ್ಯೆಗಳನ್ನು ಹೊಂದಿದ್ದರೆ,
- ಅತಿಯಾದ ರಕ್ತದ ಒತ್ತಡವನ್ನು ಒಳಗೊಂಡಿದ್ದರೆ,
- ಥೈರಾಯಿಡ್ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದರೆ.

# 'ಅಬಕಾರಿ ಶುಲ್ಕ' ಹೆಚ್ಚಳದ ಬಗ್ಗೆ ಚರ್ಚಿಸಲು ಸುನೇತ್ರಾಪವಾರ್ ಭೇಟಿಗಾಗಿ ಕಾಯುತ್ತಿದ್ದೇವೆ - ವಿಜಯ್ ಕೆ. ಶೆಟ್ಟಿ






ಮುಂಬಯಿ,ಮಾ.17 - ಇಂಡಿಯನ್ ಹೊಟೇಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಷನ್ (ಆಹಾರ್) ಇದರ 3ನೇ ಮಾಸಿಕ ವ್ಯವಸ್ಥಾಪಕ ಸಮಿತಿ ಸಭೆಯು ಫೆ.23 ರಂದು ಕಾಂದಿವಲಿ ಪೂರ್ವದ ಠಾಕೂರ್ ಕಾಂಪ್ಲೆಕ್ಸ್‌ನ ಹೋಟೆಲ್ ಅವೆನ್ಯೂನಲ್ಲಿ ನಡೆಯಿತು.

'ಆಹಾರ್'ನ ಪ್ರಧಾನ ಕಾರ್ಯದರ್ಶಿ ಸುನಿಲ್ ಎಸ್. ಶೆಟ್ಟಿ ಅವರು ಸಭೆಯ ಆಯೋಜಕ ವಲಯ-1 ರ ಉಪಾಧ್ಯಕ್ಷ ಮಹೇಂದ್ರ ಕರ್ಕೇರ ಅವರಿಗೆ ಸಭೆಯಲ್ಲಿ ಅತಿಥಿಗಳು ಮತ್ತು ಸದಸ್ಯರನ್ನು ಸ್ವಾಗತಿಸುವಂತೆ ಕೋರಿದರು. ಅದರಂತೆ ಉಪಾಧ್ಯಕ್ಷರು 'ಆಹಾರ್'ನ ಅಧ್ಯಕ್ಷರು,ಪದಾಧಿಕಾರಿಗಳು ಮತ್ತು ಎಲ್ಲಾ ಸದಸ್ಯರನ್ನು ತಮ್ಮ ವಲಯದ ಪರವಾಗಿ ಸ್ವಾಗತಿಸಿದರು.

ಸದಸ್ಯರ ಕುಂದುಕೊರತೆಗಳನ್ನು ಪರಿಹರಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುವುದನ್ನು ಮುಂದುವರಿಸುವುದಾಗಿ ಮತ್ತು ದೇಶದಲ್ಲಿ ನಾವು ನಂಬರ್‌ಒನ್ ಸಂಸ್ಥೆಯಾಗಲಿದ್ದೇವೆ ಎಂದು ಅವರು ಎಲ್ಲಾ ಸದಸ್ಯರಿಗೆ ಭರವಸೆ ನೀಡಿದರು.

'ಆಹಾರ್'ನ ಅಧ್ಯಕ್ಷ ವಿಜಯ್ ಕೆ. ಶೆಟ್ಟಿ ಅವರ ಮಾರ್ಗದರ್ಶನ ಮತ್ತು ಬೆಂಬಲ ಮತ್ತು ನಮ್ಮ ಸಂಘದ ಸುಧಾರಣೆಗಾಗಿ ಅವರ ದೃಷ್ಟಿಕೋನಕ್ಕೆ ಅವರು ಧನ್ಯವಾದಗಳನ್ನು ಅರ್ಪಿಸಿದರು.

ಜ.29 ರಂದು ಗೋರೆಗಾಂವ್ ಪೂರ್ವದ ನೆಸ್ಕೋ ಬಾಂಬೆ ಪ್ರದರ್ಶನ ಕೇಂದ್ರದಲ್ಲಿ ನಡೆದ 'ಆಹಾರ್'ನ 2ನೇ ಮಾಸಿಕ ಮಾಸಿಕ ಸಭೆಯ ವರದಿಯನ್ನು ಪ್ರಧಾನ ಕಾರ್ಯದರ್ಶಿ ಸಭೆಯಲ್ಲಿ ಮಂಡಿಸಿದರು.ವಿನಾಯಕ್ ಭಟ್ಕಳ ಪ್ರಸ್ತಾಪಿಸಿ, ರಾಜನ್ ಶೆಟ್ಟಿ ವರದಿಯನ್ನು ಅನುಮೋದಿಸಿದರು.

ಆಗಸ್ಟ್ ತಿಂಗಳ ಲೆಕ್ಕಪತ್ರ ವರದಿಯನ್ನು 'ಆಹಾರ್'ನ ಕೋಶಾಧಿಕಾರಿ ಜೈದೀಪ್ ದೇವಾಡಿಗ ಸಭೆಯಲ್ಲಿ ಮಂಡಿಸಿದರೆ ಅಮರ್ ಶೆಟ್ಟಿ ಅವರು ಪ್ರಸ್ತಾವಿಸಿ ಜಿಗ್ನೇಶ್ ಮೆಸ್ವಾನಿ ಅನುಮೋದಿಸಿದರು.

'ಆಹಾರ್'ನ ಅಧ್ಯಕ್ಷ ವಿಜಯ್ ಕೆ.ಶೆಟ್ಟಿ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ನಾವು ಹೊಸದಾಗಿ ನೇಮಕಗೊಂಡ ರಾಜ್ಯ ಅಬಕಾರಿ ಸೂಪರಿಂಟೆಂಡೆಂಟ್ ಚರಣ್ ಸಿಂಗ್ ರಜಪೂತ್ ಅವರನ್ನು ಭೇಟಿಯಾಗಿ ಎಲ್ಲಾ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಿದ್ದೇವೆ, ಅವರು ನಮ್ಮ ಕಳವಳಗಳನ್ನು ಉತ್ಸಾಹದಿಂದ ಆಲಿಸಿ ಅತ್ಯುತ್ತಮ ಸಹಾಯದ ಭರವಸೆ ನೀಡಿದರು ಎಂದರು. ನಾವು ಅಬಕಾರಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೌರಭ್ ವಿಜಯ್ ಅವರನ್ನು ಭೇಟಿಯಾಗಿ 2026-2027 ಹಣಕಾಸು ವರ್ಷಕ್ಕೆ ಅಬಕಾರಿ ಶುಲ್ಕವನ್ನು ಹೆಚ್ಚಿಸದಂತೆ ವಿನಂತಿಸಿದ್ದೇವೆ. ಈ ವೇಳೆ ಅಬಕಾರಿ ಆಯುಕ್ತರು ಹಾಜರಿದ್ದು ಇದನ್ನು ಪರಿಶೀಲಿಸುವುದಾಗಿ ನಮಗೆ ಭರವಸೆ ನೀಡಿದರು ಎಂದು ಅವರು ವಿವರಿಸಿದರು.



## 'ಆಹಾರ್'ನ 3ನೇ ಮಾಸಿಕ ವ್ಯವಸ್ಥಾಪಕ ಸಮಿತಿ ಸಭೆ

ಅಧ್ಯಕ್ಷರ ನೇತೃತ್ವದ 'ಆಹಾರ್' ನಿಯೋಗ, ಕಾರ್ಯದರ್ಶಿ ಸುನಿಲ್ ಶೆಟ್ಟಿ, ಖಜಾಂಚಿ ಜೈದೀಪ್ ದೇವಾಡಿಗ ಮತ್ತು ಅಬಕಾರಿ ವಿಭಾಗದ ಅಧ್ಯಕ್ಷ ಶಶಿಧರ್ ಶೆಟ್ಟಿ ಅವರನ್ನು ಸೇರಿಕೊಂಡು ಫೆ.20 ರಂದು ಅಬಕಾರಿ ಜಂಟಿ ಆಯುಕ್ತ ಚವಾಣ್ ಅವರನ್ನು ಭೇಟಿ ಮಾಡಿ ಆಹಾರ್ ಸದಸ್ಯರಿಗೆ ಅಗ್ರಿಮೆಂಟ್, ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು, ವ್ಯಾಟ್ ವಿವರ ಕೋರಿ ನೋಟಿಸ್‌ಗಳು ಬರುತ್ತಿರುವ ಬಗ್ಗೆ ವಿವರಿಸಿದ್ದು, ಅವರು ಸಂಬಂಧಪಟ್ಟ ಎಸ್‌ಪಿಗೆ ಕರೆ ಮಾಡಿ ಕನಿಷ್ಠ ದಾಖಲೆಗಳನ್ನು ಕೇಳಲು ಸೂಚಿಸಿದರು ಎಂದು ವಿಜಯ್ ಶೆಟ್ಟಿ ಹೇಳಿದರು.

ದೇವರ ಹೆಸರು, ಕೋಟೆಗಳ ಹೆಸರು, ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳ ಕುರಿತು 'ಆಹಾರ್' ಸದಸ್ಯರಿಗೆ ನೋಟಿಸ್‌ಗಳು ಬಂದಿವೆ. ದೇವ - ದೇವತೆಗಳ ಹೆಸರುಗಳು ಅನುಮತಿಸಲಾಗಿದೆ ಎಂದು ಹೇಳುವ ಜಿಆರ್ ಬಗ್ಗೆ ಅವರು ಪ್ರಸ್ತಾಪಿಸಿದರು ಮತ್ತು ಅಂತಹ ಸೂಚನೆಗಳಿಗೆ ಅದಕ್ಕೆ ಅನುಗುಣವಾಗಿ ಜಿಆರ್‌ನ್ನು ಲಗತ್ತಿಸಲು ಸೂಚಿಸಿದರು.

ಮುಂಬರುವ ದಿನಗಳಲ್ಲಿ ಆನ್‌ಲೈನ್ ಪ್ರಕ್ರಿಯೆಯನ್ನು ಸುವ್ಯವಸ್ಥಿತಗೊಳಿಸಲಾಗುವುದು. ನಾವು ಫೆ.20ರಂದು ಅಬಕಾರಿ ಅಧಿಸೂಚನೆಯನ್ನು ಸ್ವೀಕರಿಸಿದ್ದೇವೆ,ಎಫ್‌ಎಲ್-3 ಪರವಾನಗಿಯನ್ನು 10ಶೇ.ಕ್ಕೆ ಹೆಚ್ಚಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಉದ್ಯಮವು ಎದುರಿಸುತ್ತಿರುವ ಸವಾಲುಗಳನ್ನು ಎತ್ತಿ ತೋರಿಸುವ ಮೂಲಕ ನಮ್ಮ ಸಂಘಟನೆ ಮಹಾರಾಷ್ಟ್ರ ಸರಕಾರಕ್ಕೆ ಹಲವಾರು ಬಾರಿ ಪ್ರಾತಿನಿಧ್ಯಗಳನ್ನು ನೀಡಿದ್ದರೂ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ನಾವು ಅಬಕಾರಿ ಸಚಿವೆಯೂ ಆಗಿರುವ ಉಪಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರನ್ನು ಭೇಟಿಯಾಗಲು ಕಾಯುತ್ತಿದ್ದೇವೆ ಮತ್ತು ಅದೇ ಸಮಯದಲ್ಲಿ ಅಬಕಾರಿ ಸಚಿವೆಯಾಗಿ ಬಡ್ತಿ ಪಡೆದಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ. ಇದು 2026ರ ಹಣಕಾಸು ವರ್ಷದಲ್ಲಿ ಅಬಕಾರಿ ಶುಲ್ಕ ಹೆಚ್ಚಳದ ಬಗ್ಗೆ ಚರ್ಚಿಸಲು ನಮಗೆ ಅವಕಾಶವನ್ನು ನೀಡುತ್ತದೆ, ಈ ಕುರಿತು ಸದಸ್ಯರಿಗೆ ಅನುಗುಣವಾಗಿ ತಿಳಿಸಲಾಗುತ್ತದೆ ಎಂದು ವಿಜಯ್ ಶೆಟ್ಟಿ ಹೇಳಿದರು.

ಹೊಸ ಎಫ್‌ಡಿಎ ಆಯುಕ್ತ ಶ್ರೀಧರ್ ದುಬೆ ಪಾಟೀಲ್ ಅವರನ್ನು ಭೇಟಿಯಾಗಿ ಸೆಕ್ಷನ್ 394 ರ ಅಡಿಯಲ್ಲಿ ಆಹಾರ್ ವ್ಯಾಪಾರ ಪರವಾನಗಿಯನ್ನು ರದ್ದುಪಡಿಸುವುದು, ಫೋಸ್ಟ್ಯಾಗ್ ಪ್ರಮಾಣಪತ್ರದ ಸಿಂಧುತ್ವ

ಕನಿಷ್ಠ 5 ವರ್ಷಗಳವರೆಗೆ ವಿಸ್ತರಿಸುವುದು,ಎಫ್‌ಎಸ್‌ಎಸ್‌ಎಐ ತತ್ಕಾಲ್ ಪರವಾನಗಿ ಯೋಜನೆಯಲ್ಲಿ ರೆಸ್ಟೋರೆಂಟ್‌ಗಳನ್ನು ಸೇರಿಸುವುದು ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾಗಿ ಅವರು ತಿಳಿಸಿದರು.

ಫೆ.5 ರಂದು ಪೊಲೀಸ್ ಆಯುಕ್ತ ದೇವನ್ ಭಾರ್ತಿ ಅವರೊಂದಿಗೆ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಅಧ್ಯಕ್ಷರು, ಕಾರ್ಯದರ್ಶಿ, ಪೊಲೀಸ್ ಸಮಿತಿ ಅಧ್ಯಕ್ಷ ಕೃಷ್ಣ ಶೆಟ್ಟಿ ಮತ್ತು ಪೊಲೀಸ್ (ಉಪನಗರ) ಅಧ್ಯಕ್ಷ ಡಾ. ಸತೀಶ್ ಶೆಟ್ಟಿ ಭಾಗವಹಿಸಿದ್ದರು.

'ಆಹಾರ್' ಕಾರ್ಮಿಕ ಇಲಾಖೆಯನ್ನು ಸಂಪರ್ಕಿಸಬೇಕು ಮತ್ತು ಗೃಹ ಇಲಾಖೆಯಿಂದ ಅಗತ್ಯ ಸ್ಪಷ್ಟೀಕರಣಗಳನ್ನು ಲಿಖಿತವಾಗಿ ಪಡೆಯಬೇಕು ಎಂದು ಆಯುಕ್ತರು ನಿಯೋಗಕ್ಕೆ ತಿಳಿಸಿದರು. ಈ ಲಿಖಿತ ಸ್ಪಷ್ಟೀಕರಣಗಳನ್ನು ಬಳಿಕ ಹೆಚ್ಚಿನ ಪರಿಗಣನೆಗಾಗಿ ಪೊಲೀಸ್ ಇಲಾಖೆಗೆ ಸಲ್ಲಿಸಬಹುದು ಎಂದು ಅವರು ಹೇಳಿದರು.

ವಲಯ 1ರ ಉಪಾಧ್ಯಕ್ಷ ಮಹೇಂದ್ರ ಕರ್ಕೇರ, ವಲಯ 2ರ ಉಪಾಧ್ಯಕ್ಷ ನಿತಿನ್ ಶೆಟ್ಟಿ , ವಲಯ 3ರ ಉಪಾಧ್ಯಕ್ಷ ಪ್ರಸಾದ್ ಶೆಟ್ಟಿ,ವಲಯ 4ರ ಉಪಾಧ್ಯಕ್ಷ ರವಿಕಿರಣ್ ನ್ಯಾಕ್,ವಲಯ5ರ ಉಪಾಧ್ಯಕ್ಷ ನಿಶ್ಚಿತ್ ಶೆಟ್ಟಿ, ವಲಯ 6ರ ಉಪಾಧ್ಯಕ್ಷ ಹೇಮಂತ್ ಜೈನ್, ವಲಯ 7ರ ಉಪಾಧ್ಯಕ್ಷ ಸಂತೋಷ್ ಶೆಟ್ಟಿ, ವಲಯ 8ರ ಉಪಾಧ್ಯಕ್ಷ ಪ್ರಕಾಶ್ ಶೆಟ್ಟಿ ವಲಯ 9ರ ಉಪಾಧ್ಯಕ್ಷ ನಿತಿನ್ ಪವಾರ್ ಮತ್ತು ವಲಯ 10ರ ಉಪಾಧ್ಯಕ್ಷ ಗಂಗಾಧರ ಶೆಟ್ಟಿ ಅವರು ತಮ್ಮ ವಲಯಗಳ ಸಾಧನೆಯನ್ನು ಸಭೆಯ ಮುಂದೆ ವಿವರಿಸಿದರು. 'ಆಹಾರ್'ನ ಸಲಹೆಗಾರರಾದ ಸುಧಾಕರ್ ಶೆಟ್ಟಿ, ಶಿವಾನಂದ ಶೆಟ್ಟಿ, ಸುಕೇಶ್ ಶೆಟ್ಟಿ ಮತ್ತು ಸಂತೋಷ್ ಶೆಟ್ಟಿ ಅವರು ಅಗತ್ಯ ಸಲಹೆಗಳ ಜೊತೆಗೆ ತಮ್ಮ ಅನಿಸಿಕೆಗಳನ್ನು ಸಭೆಯಲ್ಲಿ ಮಂಡಿಸಿದರು.

ಫೆ.12 ರಂದು ನಿಧನರಾದ ಗೋರೆಗಾಂವ್‌ನ ಪೂಜಾ (ವರುಣಾ ಬಾರ್ ಆ್ಯಂಡ್ ರೆಸ್ಟ್) ಮಾಲೀಕರಾದ ವೀರೇಂದ್ರ ಟಿ ಭಂಡಾರಿ ಅವರಿಗೆ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರು ಮತ್ತು ಸಭೆಯ ಆಯೋಜಕ ವಲಯ-1 ರ ಉಪಾಧ್ಯಕ್ಷ ಮಹೇಂದ್ರ ಕರ್ಕೇರ ಅವರನ್ನು ವಲಯ ಸದಸ್ಯರು ಸನ್ಮಾನಿಸಿದರು.

ಸಭೆಯ ಆಯೋಜಕ ವಲಯ-1 ರ ಉಪಾಧ್ಯಕ್ಷ ಮಹೇಂದ್ರ ಕರ್ಕೇರ ಮತ್ತು ಅವರ ತಂಡ ಸದಸ್ಯರು ಹಾಗೂ ಸಭೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಹಾಜರಿದ್ದ ಆಹಾರ್‌ನ ಸದಸ್ಯರಿಗೆ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

# ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಸಮಾಜ ಕಲ್ಯಾಣ ಯೋಜನೆಯಡಿ ಸಹಾಯಧನ ವಿತರಣೆ





ಮಂಗಳೂರು, ಮಾ. 17 - ಬಂಟ್ಸ್ ಹಾಸ್ಟೆಲ್‌ನ ಅಮೃತೋತ್ಸವ ಕಟ್ಟಡದ ಸಭಾಂಗಣದಲ್ಲಿ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಸಮಾಜ ಕಲ್ಯಾಣ ಯೋಜನೆಯಡಿಯಲ್ಲಿ ದತ್ತು ಸ್ವೀಕರಿಸಿ ಮಾಸಿಕ ಧನಸಹಾಯ ನೀಡುತ್ತಾ ಬಂದಿರುವ ಫಲಾನುಭವಿಗಳಿಗೆ ಸಹಾಯಧನ ಚೆಕ್ ವಿತರಣಾ ಕಾರ್ಯಕ್ರಮವು ಇತ್ತೀಚೆಗೆ ಜರಗಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿಯವರು ವಹಿಸಿದ್ದರು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಕರ್ನಿರೆ ವಿಶ್ವನಾಥ್ ಶೆಟ್ಟಿ, ಕಾರ್ಯದರ್ಶಿ ಜಯಕರ್ ಶೆಟ್ಟಿ ಇಂದ್ರಾಳಿ, ಜೊತೆ ಕಾರ್ಯದರ್ಶಿ ಚಂದ್ರಹಾಸ್ ಡಿ. ಶೆಟ್ಟಿ ರಂಗೋಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಒಕ್ಕೂಟದ ಸಂಚಾಲಕರಾದ ಕೊಲ್ಲಾಡಿ ಬಾಲಕೃಷ್ಣ ರೈ, ಆಹ್ವಾನಿತ ಸದಸ್ಯರಾದ ರವಿರಾಜ್ ಶೆಟ್ಟಿ ಜತ್ತಬೆಟ್ಟು, ಫಲಾನುಭವಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ಮಲಾಡ್ ಕುರಾರ್ ವಿಲೇಜ್ ಲಕ್ಷ್ಮಣ ನಗರ ಶ್ರೀ ಶನೀಶ್ವರ ಮಂದಿರದ ಸಂಪೂರ್ಣ ಜೀರ್ಣೋದ್ಧಾರ ಮನವಿ ಪತ್ರ ಲೋಕಾರ್ಪಣೆ

## ಈ ನಗರದ ಪವಿತ್ರ ಧಾರ್ಮಿಕ ಕೇಂದ್ರವಾಗಿ ಶ್ರೀ ಶನೀಶ್ವರ ಮಂದಿರ ಬೆಳಗಲಿದೆ - ಸೂರ್ಯಕಾಂತ ಸುವರ್ಣ

ಮುಂಬಯಿ, ಮಾ. 17- ಮಹತೋಭಾರ ಶ್ರೀ ಶನೀಶ್ವರ ಮಂದಿರದ ಸಂಪೂರ್ಣ ಜೀರ್ಣೋದ್ಧಾರ ಮಾಡುವ ಈ ಪುಣ್ಯದ ಕೆಲಸದಲ್ಲಿ ನಾನು ಸಹಭಾಗಿಯಾಗಿರುವುದು ನನ್ನ ಭಾಗ್ಯವೆಂದು ನಂಬಿರುವೆ. ಈ ದೇವಸ್ಥಾನಕ್ಕೂ ನಮ್ಮ ಕುಟುಂಬಕ್ಕೂ ಒಂದು ತರಹದ ಅವಿನಾಭಾವ ಸಂಬಂಧವಿದೆ. ನಮ್ಮ ಕುಟುಂಬದ ಸದಸ್ಯರು ಶ್ರೀ ಶನಿದೇವರ ಭಕ್ತರಾಗಿದ್ದೇವೆ. ನಾವು ನಿರಂತರ ಆರಾಧಿಸಿಕೊಂಡು ಬರುವ ಶ್ರೀ ದೇವರ ಸಂಪೂರ್ಣ ಜೀರ್ಣೋದ್ಧಾರದಲ್ಲಿ ನಾನು ಅವಿರತವಾಗಿ ದುಡಿಯುವೆ. ನಮ್ಮೆಲ್ಲರ ನಿಸ್ವಾರ್ಥ ಸೇವೆಯಿಂದ ನಗರದಲ್ಲಿ ಈ ಮಂದಿರ ಬೃಹತ್ ಮಟ್ಟದಲ್ಲಿ ಬೆಳೆಯಬೇಕು.



ವಿಶಾಲವಾದ ಅಷ್ಟೇ ಪವಿತ್ರವಾದ ಮಂದಿರದ ನಮ್ಮ ಪ್ರಯತ್ನ ಆದಷ್ಟು ಬೇಗ ಸಾಕಾರಗೊಳ್ಳಲಿ ಎಂದು ಭಾರತ್ ಬ್ಯಾಂಕ್‌ನ ಅಧ್ಯಕ್ಷ ಹಾಗು ಶ್ರೀ ಶನಿ ಮಹಾತ್ಮ ಪೂಜಾ ಸಮಿತಿಯ ಕಾರ್ಯಾಧ್ಯಕ್ಷ ಸೂರ್ಯಕಾಂತ ಜಯ ಸುವರ್ಣ, ಮಲಾಡ್ ಕುರಾರ್ ವಿಲೇಜಿನ ಸಂಪೂರ್ಣ ಜೀರ್ಣೋದ್ಧಾರದ ಮನವಿ ಪತ್ರವನ್ನು ಶ್ರೀ ಶನೀಶ್ವರ ದೇವಸ್ಥಾನದಲ್ಲಿ ಮಾ. 14ರ ಶನಿವಾರದಂದು ಲೋಕಾರ್ಪಣೆಗೊಳಿಸುತ್ತಾ ಮಾತನಾಡಿದರು.

ಶ್ರೀ ಶನಿ ಮಹಾತ್ಮಾ ಪೂಜಾ ಸಮಿತಿಯ ಅಧ್ಯಕ್ಷ ಶ್ರೀನಿವಾಸ ಪಿ. ಸಾಫಲ್ಯ ಮಾತನಾಡುತ್ತಾ, ನಮ್ಮ ದೇವಸ್ಥಾನವು ವರ್ಷದಿಂದ ವರ್ಷಕ್ಕೆ ಉತ್ತರೋತ್ತರ ಅಭಿವೃದ್ಧಿಯತ್ತಾ ಸಾಗುವ ಈ ಸಮಯದಲ್ಲಿ ದೇವಸ್ಥಾನಕ್ಕೆ ಬಹಳಷ್ಟು ಜಾಗದ ಕೊರತೆ ಎದ್ದು ಕಾಣುತ್ತಿದೆ. ಪರಿಸರದಲ್ಲಿ ಈಗಾಗಲೇ ನಾವು ಒಂದಷ್ಟು ಸ್ಥಳವನ್ನು ಖರೀದಿಸಿ ಇಟ್ಟಿರುವುದಾದರೂ ಅದು ಸಹ ಕಡಿಮೆ ಆಗುವುದರ ಮನವರಿಕೆಯಾದ ನಂತರ ನಾವು ಇನ್ನೂ ದೊಡ್ಡ ಮಟ್ಟದಲ್ಲಿ ದೇವಸ್ಥಾನವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕಾರ್ಯಾಧ್ಯಕ್ಷರಾಗಿ ಯೋಗ್ಯ ವ್ಯಕ್ತಿ ಯಾರಾಗಬಹುದು ಎಂದು ಆಲೋಚಿಸಿದಾಗ ನಮಗೆ ಹೊಳೆದದ್ದು ಸೂರ್ಯಕಾಂತ ಜಯ ಸುವರ್ಣ ಅವರು. ಶ್ರೀ ಶನಿ ದೇವರ ಪರಮ ಭಕ್ತರಾದ ಸುವರ್ಣ ಅವರು ಖಂಡಿತವಾಗಿಯೂ ಈ ನಿಟ್ಟಿನಲ್ಲಿ ನಾನು ಮುಂದಾಳತ್ವ ವಹಿಸಿಕೊಳ್ಳುವೆ ಎಂಬ ಆಶ್ವಾಸನೆ ಕೊಟ್ಟ ನಂತರ ಪೂಜಾ ಸಮಿತಿಗೆ ಆನೆ ಬಲ ಬಂದಂತಾಗಿದೆ. ಬಹಳಷ್ಟು ಬೇಗ ನಾವು ಕಾರ್ಯಪ್ರವೃತ್ತರಾಗಿ ಈ ಪರಮ ಪವಿತ್ರ ಪುಣ್ಯದ ಕೆಲಸದಲ್ಲಿ ಯಶಸ್ಸನ್ನು ಸಾಧಿಸುತ್ತೇವೆ. ಅಲ್ಲದೆ ನಮ್ಮ ಈ ಕೆಲಸಕ್ಕೆ ಶ್ರೀ ಶನೀಶ್ವರ ದೇವರ ಕೃಪೆ ಅನಂತವಾಗಿದೆ ಎಂಬ ನಂಬಿಕೆಯೊಂದಿಗೆ ಮುನ್ನಡಿ ಇರಿಸಿದ್ದೇವೆ ಎಂದರು.

ಪೂಜಾ ಸಮಿತಿಯ ಉಪಾಧ್ಯಕ್ಷ ವಿಶ್ವನಾಥ ಶೆಟ್ಟಿ ಪೇತ್ರಿ ಮಾತನಾಡುತ್ತಾ, ಸುಮಾರು ಮೂವತ್ತೈದು ವರ್ಷಗಳ ಹಿಂದೆ ಜೀರ್ಣೋದ್ಧಾರಗೊಂಡ ಈ ದೇವಸ್ಥಾನದ ಉದ್ಘಾಟನೆಯನ್ನು ದಿ. ಜಯ ಸುವರ್ಣ ಮಾಡಿದ್ದರು. ಯೋಗಾನುಯೋಗ ಅನ್ನುವಂತೆ ಮುಂದಿನ ಜೀರ್ಣೋದ್ಧಾರದ ಜವಾಬ್ದಾರಿಯನ್ನು ಅವರ ಪುತ್ರ ಸೂರ್ಯಕಾಂತ ಸುವರ್ಣ ಅವರ ಪಾಲಿಗೆ ಬಂದಿದೆ. ಇದು ಬಹಳಷ್ಟು ಖುಷಿಯ ಸಂಗತಿ. ನಾವೆಲ್ಲರೂ ಮಂದಿರದ ಈ ಕೆಲಸದಲ್ಲಿ ಅವಿರತವಾಗಿ ದುಡಿಯುವ. ನಮ್ಮ ಶ್ರಮ-ಪರಿಶ್ರಮಕ್ಕೆ ಶ್ರೀ ದೇವರ ಆಶೀರ್ವಾದವಿದೆ ಎಂದರು.


ಸಮಯೋಚಿತವಾಗಿ ಉಪಾಧ್ಯಕ್ಷ ರಮೇಶ ಆಚಾರ್ಯ ಮಾತನಾಡಿದರು. ಈ ಸಮಯದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ರಾಘವೇಂದ್ರ ಭಟ್ ತುಂಗಾ, ನಾರಾಯಣ ಭಟ್, ಪೂಜಾ ಸಮಿತಿಯ ಮಹಿಳಾ ವಿಭಾಗದ ಅಧ್ಯಕ್ಷೆ ಶೀತಲ್ ಆನಂದ್ ಕೋಟ್ಯಾನ್, ಹಿರಿಯ ಸದಸ್ಯರಾದ ನಾರಾಯಣ ಶೆಟ್ಟಿ, ಉದಯ ಮೊಗವೀರ, ಶಾಲಿನಿ ಶೆಟ್ಟಿ, ಆನಂದ ಕೋಟ್ಯಾನ್, ಪ್ರಭಾಕರ ಶೆಟ್ಟಿ ಹಾಗು ದೇವಸ್ಥಾನದ ಸದ್ಭಕ್ತರು ಉಪಸ್ಥಿತರಿದ್ದು ಶುಭ ಹಾರೈಸಿದರು.

# 'ಶ್ರೀ ರಾಮ ಕಥಾ ಹೃದಯಂ' ಸರಣಿ ತಾಳಮದ್ದಳೆಯ ಮೂರನೆಯ ಪ್ರಸ್ತುತಿ

## ಯಕ್ಷಗಾನ ಯಾವುದೇ ಭಾಷೆಯಲ್ಲಿ ಪ್ರಸ್ತುತಗೊಂಡರೂ ಕಲಾಭಿಮಾನಿಗಳು ಪ್ರೋತ್ಸಾಹಿಸುತ್ತಾರೆ - ನ್ಯಾ. ಪ್ರಕಾಶ್ ಎಲ್. ಶೆಟ್ಟಿ




ಕಲಾವಿದರಾದ ಟಿ. ಆರ್. ಶೆಟ್ಟಿ ದಂಪತಿಯನ್ನು ಸನ್ಮಾನಿಸಿದಾಗ.




ಮದ್ದಳೆ ವಾದಕ ಹರೀಶ್ ನಾರಾಯಣ ಸಾಲ್ಯಾನ್ ದಂಪತಿಯನ್ನು ಸನ್ಮಾನಿಸಿದಾಗ.

ಮುಂಬಯಿ, ಮಾ. 17- ಶ್ರೀ ರಾಮಾಭಿವಂದ್ಯಾ ಯಕ್ಷ ಸೇವಾ ಬಳಗ ಮತ್ತು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸಂಯುಕ್ತ ಆಯೋಜನೆಯಲ್ಲಿ ಸರಣಿ ತಾಳಮದ್ದಲೆಯ 3ನೆಯ ಕಂತು 'ಶ್ರೀರಾಮ ವನಾಗಮನ' ಎಂಬ ಕಥಾ ಭಾಗದ ತಾಳಮದ್ದಳೆಯು ಮಾರ್ಚ್ 15ರ ಆದಿತ್ಯವಾರಂದು ವಿದ್ಯಾವಿಹಾರ್‌ನ ಶ್ರೀ ಅಂಬಿಕಾ ಆದಿನಾಥೇಶ್ವರ ಮಹಾಗಣಪತಿದಲ್ಲಿ ನಡೆಯಿತು.

ತಾಳಮದ್ದಳೆ ಕಾರ್ಯಕ್ರಮದ ನಡುವೆ ನಡೆದ ಸಭಾ ಕಾರ್ಯಕ್ರಮದಲ್ಲಿ ವೇ. ಮೂ. ಪೆರ್ಣಂಕಿಲ ಹರಿದಾಸ ಭಟ್, ಶ್ರೀ ಅಂಬಿಕಾ ಆದಿನಾಥೇಶ್ವರ ಮಹಾಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರ ಹರಿದಾಸ ಗೋಪಾಲ ಶೆಟ್ಟಿ, ಮುಖ್ಯ ಅತಿಥಿಯಾಗಿ ನ್ಯಾಯವಾದಿ ಪ್ರಕಾಶ್ ಎಲ್. ಶೆಟ್ಟಿ ಪರಾರಿ ಕಡಂದಲೆ ಹಾಗೂ ರತ್ನಾಕರ ಶೆಟ್ಟಿ ಐಕಳ ಉಪಸ್ಥಿತರಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿರುವ ಪ್ರಕಾಶ್ ಶೆಟ್ಟಿ ಪರಾರಿ ಮಾತನಾಡಿ, ಇದೊಂದು ಉತ್ತಮ ಸಂಸ್ಕಾರವನ್ನಿಯುವ, ನಮ್ಮ ಹೆಮ್ಮೆಯ ಸಂಸ್ಕೃತಿಯನ್ನು ಸಾರುವ ಕಾರ್ಯಕ್ರಮವಾಗಿದೆ. ಶ್ರೀ ರಾಮಾಭಿವಂದ್ಯಾ ಯಕ್ಷ ಸೇವಾ ಬಳಗದವರು ಈ ಉತ್ತಮ ಕಾರ್ಯಕ್ರಮದೊಂದಿಗೆ ಹಿರಿಯ ಕಲಾವಿದರನ್ನು ಸಪತ್ನಿಕರಾಗಿ ಗೌರವಿಸಿದ್ದು ತುಂಬಾ ಒಳ್ಳೆಯ ಕಾರ್ಯ. ಕಲಾವಿದ ಕಲೆಯಲ್ಲಿ ತನ್ನನ್ನು ತೊಡಗಿಸಿಕೊಂಡಾಗ ಸಂಸಾರ ಅವರನ್ನು ಪ್ರೋತ್ಸಾಹಿಸದಿದ್ದಲ್ಲಿ ಕಲಾ ಸೇವೆ ಅಸಾಧ್ಯ. ದೇವರು ನಮಗೆ ಬಂದ ಕಷ್ಟಗಳನ್ನು ನೇರವಾಗಿ ಪರಿಹರಿಸುವುದಿಲ್ಲ; ನಮ್ಮ ನಮ್ಮ ಕರ್ಮಕ್ಕೆ ಅನುಗುಣವಾಗಿ ರೋಗ ಸಂಕಷ್ಟವನ್ನು ನಾವು ಎದುರಿಸಲೇಬೇಕಾಗುತ್ತದೆ. ಅದನ್ನೇ ರಾಮಕೃಷ್ಣರು ಭುವಿಯಲ್ಲಿ ಅವತರಸಿ ನಮಗೆಲ್ಲ ಆದರ್ಶವೆಂದು ತೋರಿಸಿಕೊಟ್ಟಿದ್ದಾರೆ. ಯಕ್ಷಗಾನವು ಯಾವುದೇ ಭಾಷೆಯಲ್ಲಿ ಪ್ರಸ್ತುತಗೊಂಡರೂ ಜನರು ಸಂತೋಷದಿಂದ ನೋಡಿ ಹರ್ಷ ವ್ಯಕ್ತಪಡಿಸುತ್ತಾರೆ. ಇಂದಿನ ತಾಳಮದ್ದಳೆಯಲ್ಲಿ ಉತ್ತಮ ಅರ್ಥಧಾರಿಗಳು ಇದ್ದಾರೆ. ಇವರ ಈ ಹಿಂದಿನ ತಾಳಮದ್ದಲೆ ಕಂಡು ಬಹಳ ಸಂತೋಷಗೊಂಡಿದ್ದೇನೆಂದು ಹರ್ಷ ವ್ಯಕ್ತಪಡಿಸಿ, ಸನ್ಮಾನಿತರಿಗೆ ಅಭಿನಂದನೆಗಳನ್ನು ತಿಳಿಸಿ, ಇಂತಹ ಒಳ್ಳೆಯ ಕಾರ್ಯಕ್ರಮ ಮುಂದೆಯೂ ಸಾಂಗವಾಗಿ ನೆರವೇರಲೆಂದು ಹಾರೈಸಿದರು.

ಇನ್ನೋರ್ವ ಅತಿಥಿ ರತ್ನಾಕರ ಶೆಟ್ಟಿ ಐಕಳ ಮಾತನಾಡಿ, ನಾನು ಓರ್ವ ಹವ್ಯಾಸಿ ಕಲಾವಿದ. ಕಲಾವಿದರಿಗೆ ಇಂತಹ ಕಾರ್ಯಕ್ರಮಗಳು ಆನಂದವನ್ನು ನೀಡುತ್ತದೆ ಎಂದು ತಾಳಮದ್ದಳೆ ತಂಡಕ್ಕೆ ಶುಭ ಕೋರಿದರು.

ವೇ. ಮೂ. ಹರಿದಾಸ ಭಟ್ ಪೆರ್ಣಂಕಿಲ ಮಾತನಾಡುತ್ತಾ, ಶ್ರೀ ರಾಮಾಭಿವಂದ್ಯಾ ಯಕ್ಷ ಸೇವಾ ಬಳಗ ಒಳ್ಳೆಯ ಕಾರ್ಯವನ್ನು ಮಾಡುತ್ತಾ ಇದೆ. ಈ ಸರಣಿ ತಾಳಮದ್ದಳೆ ಕಾರ್ಯಕ್ರಮದಲ್ಲಿ 'ಶ್ರೀ ರಾಮ ಕಥಾ ಹೃದಯಂ' ಪ್ರಸಂಗವು ಮಕ್ಕಳಿಗೆ ಉತ್ತಮ ಸಂಸ್ಕಾರ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಪಿತೃ ವಾಕ್ಯ ಪರಿಪಾಲನೆಯಿಂದ ನಮ್ಮ ಜೀವನ ಸಂಸ್ಕರಣಗೊಂಡು ದೇಶಕ್ಕೆ, ರಾಜ್ಯಕ್ಕೆ ನಾವು ಸೇವೆ ಸಲ್ಲಿಸುವ ಅವಕಾಶ ಬರುತ್ತದೆ. ತಂದೆ-ತಾಯಿಯೇ ದೇವರು ಅವರ ಮಾತನ್ನು ಪಾಲಿಸಲೇಬೇಕು. ಇಂತಹ



ಉತ್ತಮ ಸಂಸ್ಕಾರವನ್ನು ನೀಡುವಂತಹ ಕಾರ್ಯಕ್ರಮಗಳಿಗೆ ಮಕ್ಕಳನ್ನು ಕರೆತನ್ನಿ. ನಮ್ಮ ಸರಣಿ ತಾಳಮದ್ದಳೆ ಸಮಾರೋಪದ ಹಂತಕ್ಕೆ ತಲುಪುವಾಗ ಶೋತೃಗಳಿಂದ ನಮ್ಮ ದೇವರ ಪ್ರಾಂಗಣ ತುಂಬಿ ರಾಮ ರಾಜ್ಯದ ಕನಸು ನನಸಾಗಲೆಂದು ಮುಂಬಯಿಯ ಹಿರಿಯ ಯಕ್ಷಗಾನ ಕಲಾವಿದ ದಂಪತಿಗಳನ್ನು ಸನ್ಮಾನಿಸುತ್ತಾ ಹೇಳಿ ಹರಸಿದರು.

ಈ ಸಂದರ್ಭದಲ್ಲಿ ಮುಂಬಯಿ ಮಹಾನಗರದ ಹಿರಿಯ ಸವ್ಯಸಾಚಿ ಕಲಾವಿದರಾದ ಟಿ. ಆರ್. ಶೆಟ್ಟಿ ದಂಪತಿಯನ್ನು ಹಾಗೂ ಮುಂಬಯಿ ಮಹಾನಗರದ ನಿಗರ್ವಿ ಮದ್ದಳೆ ವಾದಕ ಹರೀಶ್ ನಾರಾಯಣ ಸಾಲ್ಯಾನ್ ದಂಪತಿಯನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಟಿ. ಆರ್. ಶೆಟ್ಟಿ ಮಾತನಾಡುತ್ತಾ, ಯಕ್ಷಗಾನ ಸರಸ್ವತಿಯ ಸೇವೆಯನ್ನು ಸರಿಸುಮಾರು 55 ವರುಷಗಳಿಂದ ಮುಂಬಯಿ ನಗರದಲ್ಲಿ ಸಲ್ಲಿಸುತ್ತಾ ಬಂದಿರುವೆನು. ಇಂದು ಪಡೆದ ಗೌರವ ನನಗೆ ತುಂಬಾನೇ ಆನಂದ ನೀಡಿದೆ. ಪತಿ-ಪತ್ನಿ ಒಂದಾಗಿ ಈ ಗೌರವ ಸ್ವೀಕರಿಸಲು ತುಂಬಾ ಸಂತೋಷವಾಯಿತು ಎಂದು ಧನ್ಯವಾದಗಳನ್ನು ಅರ್ಪಿಸಿದರು.

ಕನ್ನಡ ಭವನದ ಪ್ರಾಂಶುಪಾಲೆ ಅಮೃತಾ ಶೆಟ್ಟಿ ಸ್ವಾಗತಿಸಿ ಅತಿಥಿಗಳ ಪರಿಚಯ ನೀಡಿದರು. ಸಿಎ ರಾಜಶ್ರೀ ಜೆ. ಶೆಟ್ಟಿ ಹಾಗೂ ಅಮೃತಾ ಶೆಟ್ಟಿ ಸನ್ಮಾನ ಪತ್ರವನ್ನು ವಾಚಿಸಿದರು. ಕಾರ್ಯಕ್ರಮದ ಸಂಯೋಜಕರಲ್ಲಿ ಓರ್ವರಾದ ವಾಸುದೇವ ಮಾರ್ನಾಡ್ ವಂದನಾರ್ಪಣೆಗೈದರು. ಸಭಾ ಕಾರ್ಯಕ್ರಮದ ಬಳಿಕ ಮತ್ತೆ ತಾಳಮದ್ದಳೆ ನಡೆಯಿತು.

ಮುಮ್ಮೇಳ ಕಲಾವಿದರಾಗಿ ವಾಸುದೇವ ಮಾರ್ನಾಡ್ (ಮಂಥರೆ), ಸುರೇಶ ಶೆಟ್ಟಿ ನಂದ್ರೊಳ್ಳಿ (ಕೈಕೇಯಿ), ಅಶೋಕ್ ಪಕ್ಕಳ (ದಶರಥ), ಸುಜಾತಾ ಶೆಟ್ಟಿ (ಶ್ರೀರಾಮ -1), ರವೀಂದ್ರ ಉಚ್ಚಿಲ್ (ಶ್ರೀರಾಮ -2), ಮಾನಸ್ ಶೆಟ್ಟಿ (ಲಕ್ಷ್ಮಣ) ಹಾಗೂ ಹಿಮ್ಮೇಳದಲ್ಲಿ ಭಾಗವತರಾಗಿ ಸುಬ್ರಾಯ ಹೆಬ್ಬಾರ್ ಬಲಗೋಣು ಮತ್ತು ರಾಘವೇಂದ್ರ ಭಟ್ ಮಾಳ, ಚೆಂಡೆ ಹಾಗೂ ಮದ್ದಳೆಯಲ್ಲಿ ಅಕ್ಷಯ ಪ್ರಭು ಮಾಸ್ತಿಕಟ್ಟೆ ಮತ್ತು ಸಚಿನ್ ಆಚಾರ್ಯ ಕುಂಭಾಶಿ ಅವರುಗಳು ಸಹಕರಿಸಿದರು.

ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಹಿರಿಯ ಕಿರಿಯ ಯಕ್ಷಾಭಿಮಾನಿಗಳು, ರಂಗನಟ ಮೋಹನ್ ಶೆಟ್ಟಿ ಮಾರ್ನಾಡ್ ಮುಂತಾದ ಕಲಾವಿದರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಚಿಣ್ಣರ ಬಿಂಬ ಮೀರಾರೋಡ್ ಶಿಬಿರದಲ್ಲಿ ಮೆಡಿಯಚ್ ಎಸ್ ಟ್ರೈನಿಂಗ್ ಸಂಸ್ಥೆಯ ನಿರ್ದೇಶಕ ಡಾ| ಸತೀಶಂಕರ್ ಕಾಮತ್ ದಿಕ್ಸೂಚಿ ಭಾಷಣ

ಮೀರಾರೋಡ್, ಮಾ. 17- ಚಿಣ್ಣರಬಿಂಬ ಮಕ್ಕಳ ಒಳ್ಳೆಯ ವ್ಯಕ್ತಿತ್ವ ವಿಕಸನಕ್ಕೆ ಬೇಕಾಗುವ ಮೂಲಭೂತ ಅವಶ್ಯಕತೆಗಳನ್ನು ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಎಳವೆಯಲ್ಲಿ ಮಕ್ಕಳ ಮನಸ್ಸಿಗೆ ಮನದಟ್ಟು ಮಾಡಿ ಸದೃಢಗೊಳಿಸುತ್ತಾ ಬಂದಿದೆ. ಮುಂಬಯಿಯಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವ, ಪ್ರಸ್ತುತ ವಸ್ಸಾಯಲ್ಲಿ ಸ್ವಂತ ಸ್ಥಾಪಿಸಿರುವ ಮೆಡಿಯಚ್ ಎಸ್ ಎಂಬ



ಟ್ರೈನಿಂಗ್ ಸಂಸ್ಥೆಯ ನಿರ್ದೇಶಕ , ಡಿವೈನ್ ಪಾರ್ಕ್ ಸಾಲಿಗ್ರಾಮದ ಸಕ್ರಿಯ ಪದಾಧಿಕಾರಿ ಡಾ| ಸತೀಶಂಕರ್ ಕಾಮತ್ ಮಾ. 15ರ ಆದಿತ್ಯವಾರದಂದು ಚಿಣ್ಣರ ಬಿಂಬ ಮೀರಾರೋಡ್ ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಕ್ಕಳಲ್ಲಿ ಆತ್ಮವಿಶ್ವಾಸದ ಅಭಿವೃದ್ಧಿ ಹೇಗೆಗೊಳಿಸುವುದು, ಆತ್ಮವಿಶ್ವಾಸ ಹೆಚ್ಚಿಸಲು ಪಾಲಕರ ಗುರುಗಳ ಗೆಳೆಯರ ಇನ್ನಿತರ ಪಾತ್ರಗಳು ಹೇಗೆ ಕಾರಣರಾಗುತ್ತಾರೆ, ಆತ್ಮವಿಶ್ವಾಸದಿಂದ ಏನಲ್ಲ ಸಾಧಿಸಬಹುದು ಎಂದು ಅನೇಕ ಮಹನೀಯರ ಉದಾಹರಣೆ ಕೊಟ್ಟು ಮಕ್ಕಳಿಗೆ ನಿಮ್ಮ ಗುರಿಯನ್ನು ಹೇಗೆ ಆತ್ಮವಿಶ್ವಾಸದಿಂದ ಮುಟ್ಟಬಹುದು ಎಂದು ಮಕ್ಕಳಿಗೆ ಮನಮುಟ್ಟುವಂತೆ ವಿವರಿಸಿದರು ಹಾಗೂ ಪರೀಕ್ಷೆಯನ್ನು ಭಯವಿಲ್ಲದೆ ಹೇಗೆ ಎದುರಿಸಬೇಕು ಎಂಬುದನ್ನು ಸಹ ವಿವರಿಸಿದರು.

ಚಿಣ್ಣರಬಿಂಬದ ಸಂಚಾಲಕಿ ಆಶಾಲತಾ ಕೊಠಾರಿ, ಶಿಬಿರ ಮುಖ್ಯಸ್ಥೆ ಸಂಧ್ಯಾ ನಾಯ್ಕ್, ಸಾಂಸ್ಕೃತಿಕ ಮುಖ್ಯಸ್ಥೆ ದಿವ್ಯಾ ಶೆಟ್ಟಿ, ಕನ್ನಡ ಶಿಕ್ಷಕಿಯರಾದ ಸುಲೋಚನಾ ಶೆಟ್ಟಿ, ಮಲ್ಲಿಕಾ ಶೆಟ್ಟಿ, ಭಜನೆ ಶಿಕ್ಷಕಿ ಶಾಂತಾ ಆಚಾರ್ಯ ಹಾಗೂ ಪಾಲಕರು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ತರಬೇತಿ ಶಿಬಿರದ ಪ್ರಯೋಜನ ಪಡೆದುಕೊಂಡರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.



ಬಂಟರ ಸಂಘ ಮುಂಬಯಿ ವಸ್ಸಾ-ಡಹಾಣು ಪ್ರಾದೇಶಿಕ ಸಮಿತಿಯ ಮಹಿಳಾ ವಿಭಾಗದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವಿರಾರ್‌ನ ಅಕ್ವ ರೆಸಾರ್ಟ್ ನಲ್ಲಿ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಅರುಣಾ ಶೆಟ್ಟಿ ಮುಂದಾಳತ್ವದಲ್ಲಿ ಜರಗಿತು. ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಮತ್ತು ಪದಾಧಿಕಾರಿಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ವಿವಿಧ ಮನೋರಂಜನೆಯೊಂದಿಗೆ, ಆಟೋಟ ಸ್ಪರ್ಧೆಯನ್ನು ಆಯೋಜಿಸಿ, ಸಂಜೆ ರೆಸಾರ್ಟ್‌ನಲ್ಲೇ ವಿಶ್ವ ಮಹಿಳಾ ದಿನಾಚರಣೆ ಆಚರಿಸಿದರು.

